ಸಂಪುಟ 15
ಸಂಚಿಕೆ 33

# ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ರೂ. 2.00
22 ಆಗಸ್ಟ್ 1993

## ದೇಶದ ಶ್ರೇಷ್ಠ ಕ್ರಾಂತಿಕಾರಿಗಳು ಬರುತ್ತಿದ್ದಾರೆ, ಬೆಂಗಳೂರಿಗೆ

ದೇಶದೆಲ್ಲೆಡೆಯಿಂದ ಬೆಂಗಳೂರಿಗೆ ಬರುತ್ತಿದ್ದಾರೆ. ಬೆಂಗಳೂರಿಗೆ ನಿಸ್ಸೀಮ ಕ್ರಾಂತಿಕಾರಿಗಳು, ಲಕ್ಷಾಂತರ, ಸಾವಿರಾರು ಜನರ ಜೀವನಗಳಿಗೆ ಮೆರುಗುಕೊಟ್ಟವರು. ಭಾರತವನ್ನೇ ಬದಲಿಸಲು ಜೀವನ ಮುಡುಪಿಟ್ಟವರು. ಬರುತ್ತಿದ್ದಾರೆ ಸ್ವಾತಂತ್ರ್ಯ ಹೋರಾಟದ ಎಲ್ಲ ಉತ್ತಮ ಆಶಯಗಳ ಉತ್ತರಾಧಿಕಾರಿಗಳು. ಬರುತ್ತಿದ್ದಾರೆ ತೆಲಂಗಾಣ ಹೋರಾಟದ ಧೀರರು ಪ. ಬಂಗಾಳದಲ್ಲಿ ತುರ್ತು ಪರಿಸ್ಥಿತಿಗಿಂತ ಭೀಕರವಾದ ಕಾಂಗ್ರೆ ಕರಾಳ ಶಕ್ತಿಗಳ ಎದೆ ನಡುಗಿಸಿದವರು, ಬಂಗಾಳದ, ಕೇರಳದ, ತ್ರಿಪುರಾದ ಜೀವನವನ್ನೇ ಬದಲು ಮಾಡಿದವರು. ಇಡೀ ದೇಶಕ್ಕೆ ಇಲ್ಲಿದೆ ದಾರಿ ಎಂದು ಸಾರಿ ಹೇಳಿದವರು.

ಸಿಪಿಐ(ಎಂ) ಕೇಂದ್ರ ಸಮಿತಿಯ ಸಭೆ ಬೆಂಗಳೂರಿನಲ್ಲಿ ನಡೆಯುತ್ತಿದೆ. ಸಿಪಿಐ(ಎಂ) ನ ಕೇಂದ್ರ ಸಮಿತಿಯೆಂದರೆ ಇಂದು ದೇಶವನ್ನು ನಾಶಮಾಡುವ ಎಲ್ಲ ಶಕ್ತಿಗಳಿಗೆ "ಕೆಡೆ ನುಡಿವ, ಕೆಡಬಗೆವ, ಕೆಡಕು ಜನರೇ ಬನ್ನಿ ಕೊಟ್ಟೆವಿದೋ ವೀಳಯವನು" ಎಂದು ಸವಾಲು ಹಾಕಿದ ಕ್ರಾಂತಿಕಾರಿಗಳ ಉನ್ನತ ನಾಯಕರ ಪಡೆ ಹೊಸ ಆರ್ಥಿಕ ನೀತಿಯನ್ನಪ್ಪದೆ ನಮ್ಮ ಗುತ್ತೇದಾರಿ ಬಂಡವಾಳಶಾಹಿ ವರ್ಗವಾಗಲಿ ಜನರನ್ನು ಕಾಲ್ಕೆಳಗೆ ಹಾಕಿ ಹೊಸಕುವ ಪಾಳೆಯಗಾರಿ ದೌರ್ಜನ್ಯಕಾರರಾಗಲಿ, ದೇಶದ ಸ್ವಾತಂತ್ರ್ಯವನ್ನು ನಾಶಮಾಡಿ ಪಾರತಂತ್ರ್ಯಕ್ಕೆ ದೂಡಬಯಸುವ ಅಮೇರಿಕ, ಯುರೋಪುಗಳ, ವಿಶ್ವದೆಲ್ಲಾ ಸಾಮ್ರಾಜ್ಯಶಾಹಿಗಳಾಗಲೀ ಸಿಪಿಐ(ಎಂ) ನ ಈ ನಾಯಕ ಮಣಿಗಳೆಂದರೆ ಎದೆ ನಡುಕ. ಅವರ ಎಲ್ಲಾ ಕಪಟ ಕುತಂತ್ರಗಳು ಮರೆ ಮೋಸಗಳನ್ನು ಬಯಲಿಗೆ ತರುವ ಈ ನಾಯಕ ಶ್ರೇಣಿ, ಬಯಲಿಗೆ ತರುವುದು ಮಾತ್ರವಲ್ಲ ಇಡೀ ದೇಶವನ್ನೇ ಈ ವಂಚಕರ ಎದುರು ಸವಾಲು ಹಾಕಿ ನಿಲ್ಲಿಸುವ ಸಂಘಟಕರು. ಇವರನ್ನು ಕಂಡರೆ ಮೈಯೆಲ್ಲಾ ಬೆಂಕಿ ಬೆಂಕಿ. ಇಂತಹ ದೇಶದೆಲ್ಲಾ ಶತ್ರುಗಳ ಅಪ್ರತಿಮ ಶತ್ರುಗಳು ಬರುತ್ತಿದ್ದಾರೆ ಬೆಂಗಳೂರಿಗೆ. ಇಂದು ಭಾರತವನ್ನು ಸುಡುತ್ತಿರುವ ಬೆಂಕಿಗಳೆಲ್ಲದರಿಂದ ಅದನ್ನು ಉಳಿಸಲು ಸೆಣಸುತ್ತಿರುವ ದೇಶ ಭಕ್ತ ಶ್ರೇಷ್ಠರು ಬರುತ್ತಿದ್ದಾರೆ. ದೇಶದ್ರೋಹಿಗಳೆಂದು ಹೆಸರಿಟ್ಟು ಭಾರತವನ್ನಾಳುತ್ತಿರುವ ವಂಚಕರ ಪಡೆ ನೀಡಿದ ಹಿಂಸೆ, ಜೈಲುವಾಸಗಳನ್ನು ದಿಟ್ಟತನದಿಂದ ಎದುರಿಸಿದ ಧೀರರ ನೇಕರು ಇದರಲ್ಲಿದ್ದಾರೆ.

ಇಂದು ಬಾರತವನ್ನು ಆವರಿಸಿರುವ ಎಲ್ಲ ಸಮಸ್ಯೆಗಳಿಗೆ ಪರಿಹಾರ ನೀಡುತ್ತಿರುವ, ನೀಡಬಲ್ಲ ವಿಮೋಚನಾ ಶಕ್ತಿಯು ತರ ಬರುತ್ತಿದ್ದಾರೆ.

ಇವರು ಬೆಂಗಳೂರಿಗೆ ಕರ್ನಾಟಕದ ರಾಜಧಾನಿಗೆ ಬರುವ ಸಂಧರ್ಭದಲ್ಲಿ ಈ ಕ್ರಾಂತಿಕಾರಿಗಳ ನಿಸ್ಸೀಮ ತ್ಯಾಗವನ್ನರಿತ ಬೆಂಗಳೂರಿನ ದುಡಿವ ಜನ ಕರ್ನಾಟಕದ ದುಡಿವ ಜನಪುಳಕಗೊಂಡಿದ್ದಾರೆ. ಕರ್ನಾಟಕದಾದ್ಯಂತ ಇವರನ್ನು ಸ್ವಾಗತಿಸುವ ಸಿದ್ಧತೆಗಳು ಭರದಿಂದ ಸಾಗಿವೆ. ಅನೇಕ ಸಂಗಾತಿಗಳ ಅವಿರತ ಶ್ರಮ ಬೆಂಗಳೂರಿನ ಗೋಡೆಗಳನ್ನು ಅಲಂಕರಿಸಿವೆ. ಈ ನಾಯಕರಿಗೆ ಸುಸ್ವಾಗತ ಬಯಸಿವೆ. ಅನೇಕ ಚಟುವಟಿಕೆಗಳು ಸಾಗಿವೆ. ಈ ಕ್ರಾಂತಿಕಾರಿಗಳನ್ನು ಕಣ್ಣಿಂದ ಕಂಡೇವೆ ಇವರು ಮಾಡುವ ತೀರ್ಮಾನ, ಇವರ ಮಾತು ನಮ್ಮ ಜೀವನದಲ್ಲಿ ಹೊಸ ಬೆಳಕ ಹಬ್ಬಿಸೀತೆ ಎಂದು ಬೆಂಗಳೂರಿಗೆ ಧಾವಿಸಲು ಸಜ್ಜಾಗುತ್ತಿದ್ದಾರೆ. ಬನ್ನಿರೆಲ್ಲಾ ಬೆಂಗಳೂರಿಗೆ ಈ ಅಪ್ರತಿಮ ದೇಶಭಕ್ತರ ಸ್ವಾಗತಕ್ಕೆ ಬನ್ನಿರೆಲ್ಲಾ ಬೆಂಗಳೂರಿಗೆ ಕರ್ನಾಟಕದ ರಾಜಕೀಯಕ್ಕೆ ಹೊಸ ತಿರುವಿನ ಸೂಚನೆ ನೀಡುವುದಕ್ಕೆ ಬನ್ನಿ ಬನ್ನಿ. ●

## ಕಾಂಗ್ರೆಸ್ಸಿಗರಿಗೂ ಮತದಾನ ಸ್ವಾತಂತ್ರ್ಯ ಕೊಡಿ - ಆಗನೋಡಿ

**-- ಕಾಂ. ಸುರ್ಜಿತ್**

ದೇಶದ ಪ್ರಜಾಸತ್ತಾತ್ಮಕ ಸಂಸ್ಥೆಗಳು ನಾಶವಾದರೂ ಪರವಾಯಿಲ್ಲ, ತಾನು ಹೇಗಾದರೂ ಅಧಿಕಾರಕ್ಕೆ ಆತುಕೊಂಡಿರಬೇಕೆಂದು ಕಾಂಗ್ರೆಸ್(ಐ) ಸಂದೇಹಾಸ್ಪದ ತಂತ್ರಗಳನ್ನು, ಹತಾಶ ಕಸರತ್ತುಗಳನ್ನು ನಡೆಸುತ್ತಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್‌ಸಿಂಗ್ ಸುರ್ಜಿತ್ ಆಪಾದಿಸಿದ್ದಾರೆ. ಪಕ್ಷಾಂತರ-ವಿರೋಧಿ ಕಾನೂನನ್ನು ಕಾಂಗ್ರೆಸ್ (ಐ) ಹಾಸ್ಯಾಸ್ಪದಗೊಳಿಸಿದೆ. ಕಳೆದ ಎರಡು ವರ್ಷಗಳಿಂದ ಮುಖ್ಯ ಚುನಾವಣಾ ಆಯುಕ್ತ ಟಿ.ಎನ್. ಶೇಷನ್‌ರೊಂದಿಗೆ ಶಾಮೀಲಾಗಿದ್ದು, ಈಗಷ್ಟೇ ಎಚ್ಚೆತ್ತು, ಚುನಾವಣಾ ಆಯೋಗವನ್ನು ಆಯುಕ್ತರ ಸ್ವೇಚ್ಛಾಚಾರದ ವರ್ತನೆಯಿಂದ ಕಾಪಾಡುವ ಮಾತಾಡಿದೆ ಎಂದಿರುವ ಕಾಂ. ಸುರ್ಜಿತ್ ಬೊಫೋರ್ಸ್, ಹಗರಣದಲ್ಲಿನ ಅಪರಾಧಿಗಳನ್ನು ಮರೆಮಾಚಲು ಸರಕಾರ ನಾಚಿಕೆಗೆಟ್ಟ ಪ್ರಯತ್ನ ನಡೆಯುತ್ತಿದೆ ಎಂದು ಟೀಕಿಸಿದರು. ಕಾಂ. ಸುರ್ಜಿತ್ ಪತ್ರಿಕಾ ಸಮ್ಮೇಳನವೊಂದನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

### ಪಕ್ಷಾಂತರ ವಿರೋಧ ಶಾಸನ ಏತಕ್ಕೆ?

ಅವಿಶ್ವಾಸ ಠರಾವಿನ ನಂತರವಾದರೂ ರಾವ್ ಸರಕಾರದ ವರ್ತನೆಗಳಲ್ಲಿ ಸ್ವಲ್ಪ ಬದಲಾವಣೆ ಬರಬಹುದೆಂಬ ನಿರೀಕ್ಷೆಯೂ ಹುಸಿಯಾಗಿದೆ. ಪಕ್ಷಾಂತರದ ಮೂಲಕ ಠರಾವಿನಿಂದ ಬದುಕುಳಿದರೂ ನಿಜವಾಗಿಯೂ ಸರಕಾರ ಸೋತಿದೆ. ಏಕೆಂದರೆ ಅದರ ವಿರುದ್ಧ ಹಾಕಿರುವ ಯಾವುದೇ ಆಪಾದನೆಯನ್ನು ಎದುರಿಸುವಲ್ಲಿಯೂ ಅದು ಸಫಲವಾಗಿಲ್ಲ ಎಂದು ರಾವ್ ಸರ್ಕಾರದ ಇತ್ತೀಚಿನ ತಂತ್ರಗಳನ್ನು ಕಟುವಾಗಿ ಟೀಕಿಸುತ್ತಾ ಸುರ್ಜಿತ್ ಹೇಳಿದರು. ಜನತಾದಳ (ಎ)ದ ಏಳು ಸದಸ್ಯರ ಪಕ್ಷಾಂತರದ ಪ್ರಶ್ನೆ ಲೋಕಸಭಾಧ್ಯಕ್ಷರ ಮುಂದೆ ಇನ್ನೂ ಇತ್ಯಾರ್ಥವಾಗದೆ ಉಳಿದಿದೆ. ಆದರೆ ಆಗಲೇ ಕಾಂಗ್ರೆಸ್(ಐ) ಅವರನ್ನು ಪಕ್ಷದೊಳಗೆ ಸೇರಿಸಿಕೊಂಡಿದೆ. ಇದು ಪಕ್ಷಾಂತರ-ವಿರೋಧ ಶಾಸನದ ನಗ್ನ ಉಲ್ಲಂಘನೆ ಎಂದು ಸುರ್ಜಿತ್ ಖಂಡಿಸಿದರು.

"ಅವರು ಪಕ್ಷಾಂತರ-ವಿರೋಧ ಶಾಸನವನ್ನು ತೆಗೆದು ಹಾಕಲಿ. ಕಾಂಗ್ರೆಸ್ಸಿಗರೂ ಕೂಡಾ ಮತದಾನ ಮಾಡಲು ಸ್ವತಂತ್ರರು ಎಂದಾಗಲಿ, ಆಗ ಏನಾಗುತ್ತೋ ನೋಡೋಣ" ಎಂದು ಅವರು "ಕಾಂಗ್ರೆಸ್(ಐ) ಈ ಶಾಸನವನ್ನು ತಂದದ್ದು ಒಂದು ನೀತಿಯನ್ನು ಎತ್ತಿ ಹಿಡಿಯಲಿಕ್ಕಾಗಿ ಅಲ್ಲ, ತನ್ನದೇ ಪಕ್ಷದಿಂದ ಪಕ್ಷಾಂತರ ನಡೆಯುವುದನ್ನು ತಡೆಯಲಿಕ್ಕಷ್ಟೇ ಎಂಬುದು ಈಗ ಮತ್ತೊಮ್ಮೆ ಸಾಬೀತಾಗಿದೆ" ಎಂದು ಟೀಕಿಸಿದರು.

### ಶೇಷನ್-ಸರಕಾರದ ಶಾಮೀಲಿಲ್ಲದಿದ್ದರೆ ಕಿತ್ತು ಹಾಕಲು ಮುಂದೆ ಬರಲಿ

ಎಲ್ಲಾ ಚುನಾವಣೆಗಳನ್ನು ಸ್ಥಗಿತಗೊಳಿಸುವ ಶೇಷನ್‌ರ ನಿರ್ಧಾರದಿಂದ ಉಂಟಾದ ಸಂವಿಧಾನಿಕ ಬಿಕ್ಕಟ್ಟಿನ ಬಗ್ಗೆ ಮಾತನಾಡುತ್ತಾ ಅವರು ವಿರೋಧ ಪಕ್ಷಗಳು ಶೇಷನ್‌ರ ಮೇಲೆ ಮಹಾದೋಷಾರೋಪಣೆ

**ತಕ್ಷಣದ ಕ್ರಮವಾಗಿ ಒಂದು ಬಹು-ಸದಸ್ಯ ಚುನಾವಣಾ ಆಯೋಗವನ್ನು ರಚಿಸಬೇಕೆ**

ಕ್ರಮಕ್ಕೆಗೊಳ್ಳಲೇಬೇಕು. ಚುನಾವಣಾ ಆಯೋಗ ಕೇವಲ ಒಬ್ಬ ಕಮಿಷನರನ್ನು ಮಾತ್ರ ಹೊಂದಿದೆ. ಬಹು ಸದಸ್ಯರನ್ನು ಹೊಂದಿರಬೇಕೆಂಬ ವಿರೋಧ ಪಕ್ಷಗಳ ಬಹಳದಿನಗಳ ಬೇಡಿಕೆಗೆ ಸರಕಾರ ಕಿವಿಗೊಡಲಿಲ್ಲ. "ಅವರು ನಮ್ಮ ಬೇಡಿಕೆಗಳಿಗೆ ಒಪ್ಪಿದ್ದರೆ ಇಂತಹ ಬಿಕ್ಕಟ್ಟು ಬರುತ್ತಿರಲಿಲ್ಲ" ಎಂದು ಸುರ್ಜಿತ್ ಹೇಳಿದರು. ಶೇಷನ್‌ರ ಇತ್ತೀಚಿನ ಕೃತ್ಯ ಅವರು ನಡೆಸಿಕೊಂಡು ಬಂದ ಕೃತ್ಯಗಳ ಚರಮಬಿಂದು. ಶೇಷನ್‌ರನ್ನು ಕಿತ್ತುಹಾಕುವ ಮಹಾ ದೋಷಾರೋಪಣೆ (Impeachment) ಪ್ರಯತ್ನ ಎಲ್ಲಿಯವರೆಗೆ ಬಂದಿದೆ ಎಂದು ಪತ್ರಕರ್ತರು ಕೇಳಿದಾಗ ಶೇಷನ್‌ರ ಈ ಕೆಲಸಗಳಲ್ಲಿ ಸರಕಾರದ ಕೈವಾಡವಿಲ್ಲದಿಲ್ಲದಿದ್ದರೆ ಅದು ಈ ದೋಷಾರೋಪಣೆ ಕ್ರಮವನ್ನು ಬೆಂಬಲಿಸಬೇಕಾಗುತ್ತದೆ ಎಂದರು. ಆಂಧ್ರಪ್ರದೇಶ ಮುಖ್ಯಮಂತ್ರಿ ಈಗಾಗಲೇ ಈ ಮಹಾ ದೋಷಾರೋಪಣೆ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿರುವುದಾಗಿ ವರದಿಯಾಗಿದೆ. ಆದರೆ ಈ ಕ್ರಮ ಜರಗಿಸಲು ತುಂಬಾ ಸಮಯ ಬೇಕಾಗುತ್ತದೆ. ತಕ್ಷಣದ ಕ್ರಮವಾಗಿ ಒಂದು ಬಹು-ಸದಸ್ಯ ಚುನಾವಣಾ ಆಯೋಗವನ್ನು ರಚಿಸಬೇಕೆಂದು ಅವರು ಮತ್ತೆ ಒತ್ತಾಯಿಸಿದರು. ಸರ್ವಸಮ್ಮತಿಯ ಮೇಲಲ್ಲ, ಬಹುಮತದ ಮೇಲೆ ಈ ಆಯೋಗ ನಿರ್ಣಯಕ್ಕೆ ಬರಬೇಕು. ಈ ಆಯೋಗಕ್ಕೆ ನೇಮಿಸಲ್ಪಡುವ ವ್ಯಕ್ತಿಗಳು ನಿಷ್ಪಕ್ಷಪಾತಿಗಳೂ, ವಿವೇಚನಾಯುಕ್ತರು ಆಗಿರಬೇಕು, ಪಕ್ಷಪಾತದೃಷ್ಟಿಯಿಂದ ಆರಿಸಬಾರದು ಎಂದು ಸುರ್ಜಿತ್ ಅಭಿಪ್ರಾಯ ಪಟ್ಟರು.

### ಲಕ್ಷಣಗಳಿಲ್ಲ

ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸುವ ಮಸೂದೆಗಳ ಬಗ್ಗೆ ಹೇಳುತ್ತಾ

**ಜಾತ್ಯತೀತತೆಯೆಂದರೆ ಏನೆಂದು ಈಗಲೂ ಕಾಂಗ್ರೆಸ್ಸಿಗರಲ್ಲಿ ಗೊಂದಲವಿದೆ**

ಅದೊಂದು ವಿಳಂಬವಾದ ಕ್ರಮವಾದರೂ ಸ್ವಾಗತಾರ್ಹ ಎಂದರು. ಆದರೆ ಅದರ ಮೂಲಕರಡಿನಲ್ಲಿ ಜಾತ್ಯಾತೀತತೆಯೆಂದರೆ ಧರ್ಮವನ್ನು ಪ್ರಭುತ್ವದ ವ್ಯವಹಾರಗಳಿಂದ ಪ್ರತ್ಯೇಕಿಸುವುದು ಎಂದರ್ಥ ಎಂಬ ಒಂದು ಮಹತ್ವದ ಅಂಶ ಕಾಣೆಯಾಗಿದೆ ಎಂದರು. ಜಾತ್ಯತೀತತೆಯೆಂದರೆ ಏನೆಂದು ಈಗಲೂ ಕಾಂಗ್ರೆಸ್ಸಿಗರಲ್ಲಿ ಗೊಂದಲವಿದೆ. ಅಭ್ಯರ್ಥಿಗಳನ್ನು ಅನರ್ಹಗೊಳಿಸಲು ಈ ಕರಡು ಚುನಾವಣಾ ಮತಗಣನಾ ಅಧಿಕಾರಿಗಳಿಗೆ ವಿಪರೀತ ಅಧಿಕಾರ ನೀಡಿದೆ. ಭಜನ್‌ಲಾಲ್‌ಗಳಂತವರ ಹತೋಟಿಯಲ್ಲಿ ರಾಜ್ಯ ಆಡಳಿತ ಇರುವಾಗ ಇದು ಅಪಾಯಕಾರಿ ಎಂದ ಅವರು "ಕಾಂಗ್ರೆಸ್(ಐ) ಮುಖಂಡತ್ವ ನರಸಿಂಹರಾವ್ ಕೈಯಲ್ಲಿಲ್ಲ. ಲಾಲ್‌ಗಳು, ಸ್ವಾಮಿಗಳ ಕೈಯಲ್ಲಿದೆ" ಎಂದು ವ್ಯಂಗ್ಯವಾಡಿದರು.

ನಿಮ್ಮ ಸಲಹೆಗಳನ್ನು ಒಳಗೊಂಡರೆ ಈ ಮಸೂದೆಗಳನ್ನು ಬೆಂಬಲಿಸುತ್ತೀರಾ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತಾ ಸುರ್ಜಿತ್ "ಸ್ವಾಭಾವಿಕವಾಗಿಯೇ ಬೆಂಬಲಿಸುತ್ತೇವೆ. ನಾವು ಸದಾ ಧರ್ಮ, ರಾಜಕೀಯ, ಪ್ರತ್ಯೇಕವಾಗಿರಬೇಕು ಎಂದು ಹೇಳುವವರು" ಎಂದರು. ಆದರೆ ಕಾನೂನಿಂದಲೇ ಕೋಮುವಾದಿಗಳ ಸವಾಲನ್ನು ಎದುರಿಸಲು ಸಾಧ್ಯ

**"ಸೋಮಯಜ್ಞಗಳನ್ನು ನಡೆಸಿ ಜಾತ್ಯಾತೀತೆಗಾಗಿ ಹೋರಾಡಲು ಸಾಧ್ಯವಿಲ್ಲವಲ್ಲ"**

ವಿಲ್ಲ, ರಾಜಕೀಯ ಪ್ರಚಾರವೂ ಅತ್ಯಗತ್ಯ ಎಂದ ಅವರು ಬಿಜೆಪಿಯನ್ನು ರಾಜಕೀಯವಾಗಿ ಎದುರಿಸುವ ಯಾವುದೇ ಮುತುವರ್ಜಿ ಕಾಂಗ್ರೆಸ್(ಐ)ಗೆ ಇದ್ದಂತಿಲ್ಲ ಎಂದು ಟೀಕಿಸಿದರು. ನವಂಬರ್ ಚುನಾವಣೆ ನಡೆಯುವ ರಾಜ್ಯಗಳಲ್ಲಿ ಬಿಜೆಪಿಗೆ ಎದುರಾಗಿ ಕಾಂಗ್ರೆಸ್(ಐ) ಒಂದು ವಿಶ್ವಾಸಾರ್ಹ ಹೋರಾಟ ನಡೆಸುವ ಲಕ್ಷಣಗಳಿಲ್ಲ ಎಂದು ಒಂದು ಪ್ರಶ್ನೆಗೆ ಉತ್ತರಿಸುತ್ತಾ ಹೇಳಿದ ಸುರ್ಜಿತ್ "ಸೋಮಯಜ್ಞಗಳನ್ನು ನಡೆಸಿ ಜಾತ್ಯಾತೀತೆಗಾಗಿ ಹೋರಾಡಲು ಸಾಧ್ಯವಿಲ್ಲವಲ್ಲ" ಎಂದರು.

### ಮುಲಾಯಂ ಬಗ್ಗೆ

ಅವಿಶ್ವಾಸ ಠರಾವಿನಲ್ಲಿ ಗೈರು ಹಾಜರಾಗುವ ಮುಲಾಯಂ ಸಿಂಗ್ ಯಾದವ್‌ರ

**"ನನಗೆ ಅವರ ಬಗ್ಗೆ ಕನಿಕರವಾಗುತ್ತದೆ**

ನಿರ್ಣಯದ ನಂತರವೂ ಎಡಪಕ್ಷಗಳು ಅವರನ್ನು ಬೆಂಬಲಿಸುತ್ತವೆಯೇ ಎಂದು ಕೇಳಿದಾಗ ಸುರ್ಜಿತ್ "ನನಗೆ ಅವರ ಬಗ್ಗೆ ಕನಿಕರವಾಗುತ್ತದೆ. ಬಿಜೆಪಿ ವಿರುದ್ಧ ಹೋರಾಟವನ್ನೆತ್ತಿಕೊಂಡ ಅವರು ಈಗ ಜನಗಳ ನಡುವೆ ಬೆಂಬಲ ಕಳಕೊಳ್ಳುತ್ತಿದ್ದಾರೆ. ಸೋಮಯಜ್ಞವನ್ನು ಅವರೇಕೆ ಬೆಂಬಲಿಸಿದರೋ ನನಗೆ ಗೊತ್ತಿಲ್ಲ. ಬಿಜೆಪಿಯ ವಿರುದ್ಧ ಅವರು ಆರಂಭಿಸಿದ ಹೋರಾಟ ಒಂದು ನೀತಿ ಬದ್ಧ ಹೋರಾಟದ ಮೂಲಕವೇ ಮುಂದುವರಿಯಲು ಸಾಧ್ಯ, ಕಾಂಗ್ರೆಸ್(ಐ)ನ್ನು ಬೆಂಬಲಿಸುವುದರಿಂದಲ್ಲ" ಎಂದರು. ಅದೇ ವೇಳೆಗೆ ಮುಂಬರುವ ಚುನಾವಣೆಗಳಲ್ಲಿ ಉತ್ತರ ಪ್ರದೇಶದಲ್ಲಿ ಜಾತ್ಯತೀತ ವಿರೋಧ ಪಕ್ಷಗಳು ಒಗ್ಗಟ್ಟಾಗಿ ಬಿಜೆಪಿಯ ವಿರುದ್ಧ ಸೆಣಸುತ್ತಾರೆ ಎಂಬ ಆಶಯವನ್ನು ಅವರು ವ್ಯಕ್ತಪಡಿಸಿದರು.

### ಪ್ರವಾಹ ಪೀಡಿತರಿಗೆ ಅಲ್ಪ ಪರಿಹಾರ

ಪ್ರವಾಹ ಪೀಡಿತ ರಾಜ್ಯಗಳಿಗೆ ಮುಖ್ಯವಾಗಿ ಕಾಂಗ್ರೆಯೇತರ ರಾಜ್ಯಗಳಿಗೆ ನೆರವು ನೀಡುವಲ್ಲಿ ಕೇಂದ್ರ ಅರೆಮನಸ್ಸು ತೋರುತ್ತಿದೆ ಎಂದು ಸುರ್ಜಿತ್ ಆಪಾದಿಸಿದರು. ಪುಟ್ಟಗಡಿರಾಜ್ಯ ತ್ರಿಪುರಾ ಪ್ರವಾಹದಿಂದ ಭಾರೀ ತೊಂದರೆಗೊಳಗಾಗಿದೆ ಎರಡು ಲಕ್ಷಕ್ಕೂ ಹೆಚ್ಚು ಜನ ಪರಿಹಾರ ಶಿಬಿರಗಳಲ್ಲಿದ್ದಾರೆ. ರಾಜ್ಯ ಸರಕಾರ 72 ಕೋಟಿ ರೂಗಳ ಪರಿಹಾರ ಕೇಳಿತ್ತು. ಆದರೆ ಇದುವರೆಗೆ ಪ್ರಾಕೃತಿಕ ವಿಪತ್ತು ನಿಧಿಯಿಂದ ಅದಕ್ಕೆ ದೊರೆತಿರುವುದು ಕೇವಲ 2.5 ಕೋಟಿ ರೂ. ಈ ನಿಧಿಯಲ್ಲಿ ತ್ರಿಪುರಾದ ಪಾಲೇ ಅಷ್ಟು ಅದನ್ನಷ್ಟೇ ಬಿಡುಗಡೆಮಾಡಲಾಗಿದೆ. ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ ಕೇವಲ ಆರುಲಕ್ಷರೂ. ನೀಡಲಾಗಿದೆ ಎಂದು ಸುರ್ಜಿತ್ ಹೇಳಿದರು.

**ಕೋಮು ಸೌಹಾರ್ದತಾ ರ್‍ಯಾಲಿ, ಆಗಸ್ಟ್ 23, 1993**

# "ತುರ್ತು ಪರಿಸ್ಥಿತಿಯ ಕರಾಳದಿನಗಳು ಮತ್ತೆ ಬರಲಿದೆ"

## - ಸೃಜನ ಶೀಲ ಸಮುದಾಯದ ನವದೆಹಲಿ ಘೋಷಣೆ -

"ತುರ್ತುಪರಿಸ್ಥಿತಿಯ ಕರಾಳ ದಿನಗಳು ಮತ್ತೆ ಬಂದಿವೆ. ಭಿನ್ನ ಅಭಿಪ್ರಾಯ ಹೊಂದಿರುವ ಮೇಲೆ ಹೊಸದೊಂದು ಆಕ್ರಮಣ ಆರಂಭವಾಗಿದೆ. ಈ ಭಾರಿ ಈ ಆಕ್ರಮಣ ಮುಖ್ಯವಾಗಿ ಮತಾಂಧರಿಂದ, ಮೂಲಭೂತವಾದಿಗಳಿಂದ ಬಂದಿದೆ. ಕೋಮುವಾದಿ ಮುಖಂಡರು ಹಾಗೂ ಅವರ ರಾಜಕೀಯ ಬೆಂಬಲಿಗರು ಈ ಹಲ್ಲೆಮಾಡುವವರೊಂದಿಗೆ ಶಾಮೀಲಾಗಿದ್ದಾರೆ. ತರ್ಕಬದ್ಧತೆ, ಸಹನೆ ಹಾಗೂ ವಾಕ್ ಮತ್ತು ಅಭಿವ್ಯಕ್ತಿಯ ಮೂಲಭೂತ ಸ್ವಾತಂತ್ರ್ಯವನ್ನು ಹಿಸುಕಿಹಾಕಲು ಅವರು ಒಂದಾಗಿದ್ದಾರೆ. ಇದಕ್ಕೆ ಸವಾಲು ಒಡ್ಡಿದವರಿಗೆ ಭಾರೀ ಬೆದರಿಕೆ ಹಾಕಲಾಗುತ್ತಿದೆ. ಅವರು ದೈಹಿಕ ಹಲ್ಲೆಗಳನ್ನು ಎದುರಿಸಬೇಕಾಗುತ್ತಿದೆ."

-ಇದು "ಸೃಜನಶೀಲ ಸಮುದಾಯದ ನವ-ದೆಹಲಿ ಘೋಷಣೆ" ಯ ಒಂದು ಅಂಶ. ಜುಲೈ 24 ರಂದು ದೇಶದ ರಾಜಧಾನಿಯಲ್ಲಿ ಸೇರಿದ್ದ ಕಲಾವಿದರು, ಲೇಖಕರು, ಕವಿಗಳು, ಪತ್ರಕರ್ತರು, ಚಿತ್ರನಿರ್ದೇಶಕರು, ರಂಗಭೂಮಿ, ಚಲನಚಿತ್ರ ಹಾಗೂ ಮಾಧ್ಯಮಗಳ ಜನರ ದೊಡ್ಡ ಸಭೆಯೊಂದರಲ್ಲಿ ಈ ಘೋಷಣೆಯನ್ನು ಅಂಗೀಕರಿಸಲಾಯಿತು. ದಿಲ್ಲಿಯ ಮಾವಳಂಕರ್ ಆಡಿಟೋರಿಯೊಂನಲ್ಲಿ ನಡೆದ ಈ "ಅಭಿ-ವ್ಯಕ್ತಿ ಸ್ವಾತಂತ್ರ್ಯ ಸಮಾವೇಶ"ದೇಶದ ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಹಾಗೂ ಜಾತ್ಯಾತೀತ ಪರಂಪರೆಯಲ್ಲಿ ತನ್ನ ವಿಶ್ವಾಸವನ್ನು ನವೀಕರಿಸಿ "ಮೂಲಭೂತವಾದ, ಅಸಹಿಷ್ಣುತೆ ಹಾಗೂ ಸಂಕುಚಿತ ಮನೋಭಾವ"ದ ವಿರುದ್ಧ ಹೋರಾಡಲು ನಿರ್ಧರಿಸಿತು.

### 'ಹಿಂದೂ ರಾಷ್ಟ್ರ'ದ ನಿಜಸ್ವರೂಪಕ್ಕೆ ಸಾಕ್ಷಿ

'ರಾಷ್ಟ್ರೀಯ ಐಕ್ಯತಾ ಆಂದೋಲನ'ದ ಆಶ್ರಯದಲ್ಲಿ ನಡೆದ ಈ ಸಮಾವೇಶವನ್ನುದ್ದೇಶಿಸಿ ಹಲವಾರು ಪ್ರಖ್ಯಾತ ಕಲಾವಿದರು, ಬುದ್ಧಿಜೀವಿಗಳು ಮಾತನಾಡಿದರು. ಅವರೆಲ್ಲಾ ಮತಾಂಧ, ಧಾರ್ಮಿಕ ಮೂಲಭೂತವಾದಿ ಹಾಗೂ ಕಂದಾಚಾರದ ಶಕ್ತಿಗಳು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಒಡ್ಡಿರುವ ಬೆದರಿಕೆ ಎಷ್ಟು ಗಂಭೀರ ಸ್ವರೂಪದ್ದೆಂಬುದನ್ನು ಒತ್ತಿ ಹೇಳಿದರು. ಒಬ್ಬರಾದ ಮೇಲೆ ಒಬ್ಬರು ಮಾತನಾಡಿದ ಬಾಷಣಕಾರರೆಲ್ಲಾ 'ಹಿಂದುತ್ವ' ಶಕ್ತಿಗಳು ಎಲ್ಲಾ ಭಿನ್ನ ಅಭಿಪ್ರಾಯಗಳನ್ನು ನಾಶಮಾಡುವ ಪ್ರಯತ್ನದಲ್ಲಿ ಉಂಟು ಮಾಡಿರುವ ಅಪಾಯಕಾರಿ ಸನ್ನಿವೇಶವನ್ನು ಒತ್ತಿ ಹೇಳಿದರಷ್ಟೇ ಅಲ್ಲ, ಮಾಧ್ಯಮದ ಬಗ್ಗೆ ಸರಕಾರದ ನಿಲುವು 'ದೂರದರ್ಶನ'ವನ್ನು ವಾಣಿಜ್ಯ ಹಿತಾಸಕ್ತಿಗಳಿಗೆ ಮಾರಿಕೊಂಡದ್ದನ್ನು ತೀವ್ರವಾಗಿ ಖಂಡಿಸಿದರು. ಡಿಸೆಂಬರ್ 6 ರಂದು ಪತ್ರಕರ್ತರ ಮೇಲೆ ವಿ.ಹೆಚ್.ಪಿ. ಗೂಂಡಾಗಳು ನಡೆಸಿದ ಹಿಂಸಾಛಾರ, ಬಿಜೆಪಿ ಚಿತ್ರ ತಯಾರಕರ ಮೇಲೆ ಹೇರಿರುವ ಕುಖ್ಯಾತ "ನೀತಿ-ಸಂಹಿತೆ" "ಹಿಂದೂರಾಷ್ಟ್ರ" ದ ನಿಜ ಸ್ವರೂಪಕ್ಕೆ ಸಾಕ್ಷಿ ಎಂದರು.

ಪ್ರಸಿದ್ಧ ಪತ್ರಕರ್ತ ಕುಲದೀಪ್ ನಯ್ಯಾರ್ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯ ಮೇಲಿದ್ದ ಇತರರೆಂದರೆ ಸಮಾವೇಶದ ಸಂಚಾಲಕರಾದ ಮಲಯ ಶ್ರೀ ಹಾಶ್ಮಿ ಸುಹಾಸ್ ಬೋರ್ಕರ್ ಹಾಗೂ ಪ್ರತಾಪ್ ಸಮಲ್. ಪ್ರಖ್ಯಾತ ಉರ್ದು ಕವಿ ಕೈಫಿ ಆಜ್ಮಿಯವರನ್ನು ವೇದಿಕೆಯ ಮೇಲೆ ಆಹ್ವಾನಿಸಲಾಯಿತು. ಚಿತ್ರನಟಿ ಶಬಾನಾಆಜ್ಮಿ ರಂಗ ನಿರ್ದೇಶಕರಾದ ಹಬೀಬ್ ತನ್ವೀರ್ ಹಾಗೂ ಎಂ.ಕೆ. ರೈನಾ, ಪ್ರಖ್ಯಾತ ಪತ್ರಕಾರರಾದ ಬಿ.ಜಿ. ವರ್ಗೀಸ್, ಪ್ರಫುಲ್ ಬಿದ್ವಾಯಿ ಹಾಗೂ ಹಾಗೂ ಅಚಿನ್ ವಿನಾಯ್ಕ್, 'ಮಾನುಷಿ' ಪತ್ರಿಕೆಯ ಸಂಪಾದಕಿ ಮಧು ಕಿಶ್ವರ್, ಸಾಮಾಜಿಕ ಕಾರ್ಯಕರ್ತರಾದ ಸ್ವಾಮಿ ಅಗ್ನಿವೇಶ್, ಪ್ರಸಿದ್ಧ ಶಿಕ್ಷಣ ತಜ್ಞ ಕೃಷ್ಣ ಕುಮಾರ್ ಹಾಗೂ ನಾಗರಿಕ ಹಕ್ಕುಗಳ ಕಾರ್ಯಕರ್ತ ರಾಜಿಂದರ್ ಸಾಚಾರ್ ಮತ್ತಿತರರು ಸಮಾವೇಶವನ್ನುದ್ದೇಶಿ ಮಾತನಾಡಿದರು.

### "ನಾವೆಲ್ಲೇ ಇರಲಿ, ನಾವೆಷ್ಟೇ ಇರಲಿ..........."

ಖ್ಯಾತ ಕವಿ ಕೈಫಿ ಆಜ್ಮಿ ತಮ್ಮ ಕವನ "ದೂಸ್ರಾ ವನವಾಸ್" (ಎರಡನೇ ವನವಾಸ - 'ಐಕ್ಯರಂಗ'ದಲ್ಲಿ ಈಗಾಗಲೇ ಪ್ರಕಟವಾಗಿದೆ) ಓದಿ ಸಭಿಕರ ಮನಸ್ಸನ್ನು ತಟ್ಟಿದರು.

ಸಮಾವೇಶ ಅಂಗೀಕರಿಸಿದ "ಸೃಜನ ಶೀಲ ಸಮುದಾಯದ ನವದೆಹಲಿ ಘೋಷಣೆ" ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹೆಚ್ಚುತ್ತಿರುವ ಬೆದರಿಕೆಯ ಹಲವು ಉದಾಹರಣೆಗಳನ್ನು ನೀಡುತ್ತಾ "ಸ್ವಾತಂತ್ರ್ಯ ದೊಡನೆ ಸಮಾಗಮದಂತೆ ನಾವು ಮಾಡಿದ್ದ ಒಂದು ನಿರ್ಣಯವೆಂದರೆ ಒಂದು ಅಭಿಪ್ರಾಯ ಅದು ಎಷ್ಟೇ ಭಿನ್ನವಾಗಿರಲಿ, ಸಣ್ಣದಾಗಿರಲಿ ಯಾವುದೇ ಸರಕಾರ, ಪಕ್ಷ ಅಥವಾ ವ್ಯಕ್ತಿ ಅದನ್ನು ದಮನ ಮಾಡಲು ನಾವು ಬಿಡುವುದಿಲ್ಲ ಎಂದು. ಇಂದು, ಮತಾಂಧತೆಯ ನೆರಳು ಉದ್ಭವಾಗುತ್ತಿರುವಾಗ, ಜಾತ್ಯಾತೀತ ನೀತಿಗಳಲ್ಲಿ ನಮ್ಮ ವಿಶ್ವಾಸಕ್ಕೆ ಹಲವು ಸವಾಲುಗಳು ಬರುತ್ತಿರುವಾಗ ಅವನ್ನೆದುರಿಸಲು ನಾವೆಲ್ಲ ಎದ್ದು ನಿಲ್ಲಬೇಕು. ನಮ್ಮ ಶ್ರೀಮಂತ ಭವ್ಯ ಪರಂಪರೆಯಿಂದ ಮತ್ತು ಪ್ರತಿಯೊಂದು ವಲಯದಲ್ಲೂ ಸೃಜನಶೀಲ ಕಲಾವಿದರೂ ಧೈರ್ಯವಾಗಿ, ನೇರವಾಗಿ ಎದ್ದು ನಿಲ್ಲುತ್ತಿದ್ದಾರೆ ಎಂಬ ಸಂಗತಿಯಿಂದ ಹೊಮ್ಮಿ ಬಂದಿರುವ ಆಶಾವಾದ ನಮ್ಮದ್ದು. ನಮಗೆ ಜಾತ್ಯಾತೀತತೆಯೆದರೆ ಧಾರ್ಮಿಕ ಸಹಿಷ್ಣುತೆ, ಭಿನ್ನ ಅಭಿಪ್ರಾಯಗಳಿಗೆ ಮನ್ನಗೆ ಹಾಗೂ ಧರ್ಮವನ್ನು ಪ್ರಭುತ್ವದೊಂದಿಗೆ ಬೆರೆಸಬಾರದು ಎಂದರ್ಥ. ನಾವು ಎಲ್ಲೇ ಎರಲಿ, ನಮ್ಮ 'ಸಂಖ್ಯೆಎಷ್ಟೇ ಇರಲಿ, ನಾವು ಒಗ್ಗಟ್ಟಾಗಬೇಕು, ಪ್ರತ್ಯೇಕವಾಗಿದ್ದರೆ ನಾವು ಸೋಲುತ್ತೇವೆ' ಎಂದಿದೆ.

### ಬಿಜೆಪಿಯ ಮೊದಲ ಗುರಿ
-- ಹಬೀಬ್ ತನ್ವೀರ್

ಇತ್ತೀಚೆಗೆ "ಹಿಂದುತ್ವ" ಪಡೆಗಳ ಅಪಪ್ರಚಾರಗಳಿಗೆ ತುತ್ತಾಗಿರುವ ನಾಟಕಕಾರ ಹಬೀಬ್ ತನ್ವೀರ್ 1982 ರಿಂದ ತಮ್ಮ ಅನುಭವಗಳನ್ನು ವಿವರಿಸಿದರು. ಮಧ್ಯಪ್ರದೇಶದ ಛತ್ತೀಸ್‌ಗಢ ಜಾನಪದ ಪರಂಪರೆಯ ನಾಟಕಗಳ ನಿರ್ದೇಶನ, ಪ್ರದರ್ಶನಕ್ಕೆ ಪ್ರಖ್ಯಾತರಾದ ತನ್ವೀರ್ ಮೇಲೆ ಮೊದಲ ಗುರಿಯಿಟ್ಟದ್ದು ಮಧ್ಯಪ್ರದೇಶದ ಬಿಜೆಪಿ. ಇತ್ತೀಚೆಗೆ ದಿಲ್ಲಿ ವಿಶ್ವವಿದ್ಯಾಲಯದಲ್ಲೂ ಅವರ ಮೇಲೆ ಹಲ್ಲೆ ನಡೆಸಲಾಯಿತು. ಇಂಗ್ಲೇಂಡಿನಲ್ಲಿ ಅವರ ನಾಟಕಗಳ ಪ್ರದರ್ಶನವನ್ನು ತಡೆಯಲು ವಿ.ಹೆಚ್.ಪಿ. ಪ್ರಯತ್ನಿಸಿತು. ಆರಂಭದಲ್ಲಿ ತಾನು ಈ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ, ಆದರೆ ಕ್ರಮೇಣ ಎಲ್ಲಾ ಕಲಾವಿದರೂ ಈ ಶಕ್ತಿಗಳ ವಿರುದ್ಧ ಹೋರಾಡಲು ಒಂದಾಗಲೇಬೇಕು ಎಂಬ ಅರಿವು ತನ್ನಲ್ಲಿ ಉಂಟಾಯಿತು ಎಂದರು ಹಬೀಬ್ ತನ್ವೀರ್. ಈಗಿನ ಸಂದರ್ಭದಲ್ಲಿ ಪ್ರತಿಯೊಬ್ಬ ಕಲಾವಿದ ಮೂಲಭೂತವಾದೀ ಶಕ್ತಿಗಳ ವಿರುದ್ಧ ಆಂದೋಲನದಲ್ಲಿ ಭಾಗವಹಿಸುವುದು ಆತನ ಕಲಾತ್ಮಕ ಚಟುವಟಿಕೆಗಳಷ್ಟೇ ಮಹತ್ವದ್ದು ಎಂದು ತನ್ವೀರ್ ಒತ್ತಿ ಹೇಳಿದರು.

---

# ಬಳ್ಳಾರಿಯ ವಿದ್ಯುತ್ ಕಳ್ಳರು

ಬಳ್ಳಾರಿ: ರಾಜ್ಯದ ಕಾಂಗ್ರೆಸ್ ಸರಕಾರವು ವಿದ್ಯುತ್ ದರಗಳನ್ನು ಏಕಾಏಕಿ ಹೆಚ್ಚು ಮಾಡಿರುವುದನ್ನು ಸಿಪಿಐ(ಎಂ) ಜಿಲ್ಲಾ ಸಮಿತಿ ಖಂಡಿಸಿದೆ. ಬಳ್ಳಾರಿ ಜಿಲ್ಲೆಯಲ್ಲಿ ಜನತೆ, ಅಲ್ಪಸ್ವಲ್ಪ ಮಳೆಯಾದರೂ, ತೀವ್ರ ಬರಗಾಲದಲ್ಲಿ ಸಿಕ್ಕಿಕೊಂಡಿದ್ದು, ನೀರಿರುವ ಬಾವಿಗಳ ನೀರನ್ನು ಉಪಯೋಗಿಸುವುದಕ್ಕೆ ಆಗದೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಕಾಂಗ್ರೆಸ್ ಸರ್ಕಾರವು ದೊಡ್ಡ, ದೊಡ್ಡ ಬಂಡವಾಳಶಾಹಿಗಳ ಕಾರ್ಖಾನೆ ಮಾಲೀಕರು ಮಾಡುತ್ತಿರುವ ಸಾವಿರ ಸಾವಿರ ಯುನಿಟ್‌ಗಳ ವಿದ್ಯುತ್ ಕಳ್ಳತನವನ್ನು ತಡೆಯಲು ವಿಫಲವಾಗಿದೆ. ಅಲ್ಲದೆ ಅಂತಹ ಶಕ್ತಿಗಳೊಂದಿಗೆ ಸರ್ಕಾರ, ಇಲಾಖಾಧಿಕಾರಿಗಳ ಶಾಮೀಲಾಗಿ ತೀವ್ರ ಭ್ರಷ್ಟಚಾರದಲ್ಲಿ ತೊಡಗಿದ್ದು, ಸದರಿ ಹೊರೆಯನ್ನು ಅಮಾಯಕ ಜನರ ಮೇಲೆ ಹಾಕಲಾಗುತ್ತಿರುವುದು ಜನವಿರೋಧಿ ಕ್ರಮವಾಗಿದೆ ಎಂದಿದೆ.

ಕಾಂಗ್ರೆಸ್ ರಾಜ್ಯ ಸರ್ಕಾರದ ಕ್ಯಾಬಿನೆಟ್ ಸಚಿವಾರಾದ ಎಂ.ವೈ..ಘೋರ್ಪಡೆಯವರ ಕಾರ್ಖಾನೆಗಳಿಂದ ಲಕ್ಷಾಂತರ ರೂಪಾಯಿಗಳ ವಿದ್ಯುತ್ ಬಾಕಿ ಹಾಗೂ ಇತರ ಬಂಡವಾಳಿಗರಿಂದ ಬಾಕಿ ವಸೂಲು ಮಾಡಲು ಯೋಗ್ಯತೆ ಇಲ್ಲದ ಸರ್ಕಾರ ಸಾಮಾನ್ಯ ಜನರ ಮೇಲೆ "ಗದಾಪ್ರಹಾರ" ಮಾಡುತ್ತಿದೆ. ಬಳ್ಳಾರಿ ಸ್ಟೀಲ್ಸ್ ಅಂಡ್ ಅಲಾಯ್ಸ್ ಕಾರ್ಖಾನೆ ಮಾಲೀಕರಿಗೆ ವಿದ್ಯುತ್ ಕಳ್ಳತನ ಮಾಡುವುದು ಒಂದು ಸಾಧಾರಣ ವಾಡಿಕೆಯಾಗಿಬಿಟ್ಟಿದೆ ಎಂಬ ಅಂಶಗಳನ್ನು ಸಿಪಿಐ(ಎಂ) ಜಿಲ್ಲಾ ಸಮಿತಿ ಬಹಿರಂಗಪಡಿಸಿದೆ.

### ದಾವಣಗೆರೆ ಹರಿಹರದಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆ

ಚಿತ್ರದುರ್ಗ: ಹೈಸ್ಕೂಲ್ ಹಂತದಲ್ಲಿ ಹಿಂದಿ ಭಾಷೆ ಕಡ್ಡಾಯ ಬೇಡವೇ-ಬೇಡ ಹೆಚ್ಚಿಸಿರುವ ಎಲ್ಲಾ ಶುಲ್ಕಗಳನ್ನು ಇಳಿಸಲೇಬೇಕು, ವೃತ್ತಿಪರ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಸರ್ವೋಚ್ಚ ನ್ಯಾಯಲಯದ ತೀರ್ಪನ್ನು ರಾಜ್ಯ ಸರಕಾರ ಯಥಾವತ್ತಾಗಿ ಜಾರಿಗೊಳಿಸಬೇಕು ಈ ವಿಷಯದಲ್ಲಿ ಯಾವುದೇ ಮಠಾಧಿಪತಿಗಳಿಗೂ-ಶ್ರೀಮಂತ ಶಿಕ್ಷಣ ಲಾಬೀಗಳಿಗೆ ಸರ್ಕಾರ ಮಣಿದರೆ ಉಗ್ರ ಪ್ರತಿಭಟನೆ ತೀರ ಅನಿವಾರ್ಯ ಅಲ್ಲದೇ ಪ್ರಸಕ್ತ ಸಾಲಿನಲ್ಲಿ ಹಿಂದಿ ಒಂದೇ ವಿಷಯದಲ್ಲಿ ಫೇಲ್ ಆಗಿರುವ ಎಲ್ಲಾ ವಿದ್ಯಾರ್ಥಿಗಳನ್ನು 'ಪಾಸ್' ಎಂದು ಸರ್ಕಾರ ಘೋಷಿಸಬೇಕು ಎಂದು ಆಗ್ರಹಿಸಿ ಚಿತ್ರದುರ್ಗ ಜಿಲ್ಲೆಯ ಎರಡು ಕೇಂದ್ರಗಳಲ್ಲಿ ಜುಲೈ 22 ರಂದು ಸಹಸ್ರಾರು ವಿದ್ಯಾರ್ಥಿ-ವಿದ್ಯಾರ್ಥಿನಿಯರು ತರಗತಿಗಳನ್ನು ಬಹಿಷ್ಕರಿಸಿ ಭಾರೀ ಪ್ರತಿಭಟನೆ ವ್ಯಕ್ತಪಡಿಸಿದರು.

ರಾಜ್ಯಾದ್ಯಂತ ಎಸ್.ಎಫ್.ಐ- ಎ.ಐ.ಎಸ್.ಎಫ್ ಡಿ.ಎಸ್.ಎಫ್‌ಗಳು ಸಂಘಟಿಸಿದ್ದ ಈ ಹೋರಾಟ ವಿದ್ಯಾರ್ಥಿ ಚಳುವಳಿಯಲ್ಲಿ ಒಂದು ಮೈಲುಗಲ್ಲಾಗಿತ್ತು. ದಾವಣಗೆರೆಯಲ್ಲಿ ಅಂದು ಸಾವಿರಾರು ವಿದ್ಯಾರ್ಥಿ-ವಿದ್ಯಾರ್ಥಿನಿಯರು ನಗರದ ಎಲ್ಲಾ ಶಾಲಾ-ಕಾಲೇಜುಗಳನ್ನು ಬಂದ್ ಮಾಡಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಉಪವಿಭಾಗಧಿಕಾರಿಗಳಿಗೆ ಮನವಿ ಸಲ್ಲಿಸಿದರು. ನಂತರ ನಡೆದ ಸಭೆಯನ್ನುದ್ದೇಶಿಸಿ ಎಸ್.ಎಫ್.ಐ ಜಿಲ್ಲಾ ಕಾರ್ಯದರ್ಶಿ ಕೆ. ಮಹಾಂತೇಶ್, ಜೆ. ಲತಾ, ಮಹಬೂಬ ಬಾಷಾ, ಸಿ. ಮಂಜುನಾಥ್ ಹಾಗೂ ಡಿ.ಎಸ್.ಎಫ್‌ನ ಬಿ.ಎಂ. ಹನುಮಂತಪ್ಪ, ಮಾಳಪ್ಪ, ಲೋಹಿತ್ ಮಾತನಾಡಿದರು. ಈ ಹೋರಾಟದ ನೇತೃತ್ವವನ್ನು ಎಸ್.ಎಫ್.ಐ ನಗರ ಕಾರ್ಯದರ್ಶಿ ಎಲ್ ಮಹಾದೇವಸ್ವಾಮಿ, ಸೋಮಶೇಖರ್ ಶಿವನಾಗರಾಜ್, ಗೀತಾ, ಚನ್ನಬಸಪ್ಪ ಮುಂತಾದವರು ವಹಿಸಿದ್ದರು. ಡಿ.ಎಸ್.ಎಫ್ ನಿಂದ ನಾಗಲಿಂಗಪ್ಪವಹಿಸಿದ್ದರು. ಈ ಹೋರಾಟಕ್ಕೆ ಮುಂಚಿತವಾಗಿ ಜುಲೈ-15 ರಂದು ಎಲ್ಲಾ ಸಂಘಟನೆಗಳ ಕಾರ್ಯಕರ್ತರ ಸಭೆ ಮತ್ತು ಪತ್ರಿಕಾಗೋಷ್ಠಿಯನ್ನು ನಡೆಸಲಾಯಿತು.

-ಹರಿಹರ ನಗರದಲ್ಲಂತೂ ನೂರಾರು ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಮೆರವಣಿಗೆ ನಡೆಸಿ ತಹಸಿಲ್ದಾರ್‌ಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ನಡೆದ ಸಭೆಯನ್ನುದ್ದೇಶಿಸಿ ಎಸ್.ಎಫ್.ಐ ಹರಿಹರ ಕಾರ್ಯದರ್ಶಿ ಸದಾಶಿವಪ್ಪ, ಮಾತನಾಡಿ ಸರಕಾರದ ವಿದ್ಯಾರ್ಥಿ ವಿರೋಧಿ ಧೋರಣೆಯನ್ನು ಖಂಡಿಸಿದರು. ಸಭೆಯಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿ ನಿತ್ಯಾನಂದಸ್ವಾಮಿ ಮಾತನಾಡಿದರು. ಮೆರವಣಿಗೆಯ ನೇತೃತ್ವವನ್ನು ಉಪಾಧ್ಯಕ್ಷ ಎಂ.ಎಸ್. ರಾಮಚಂದ್ರ ಮುಂತಾದವರು ವಹಿಸಿದ್ದರು.

### ಹೊಸಪೇಟೆ ರಿಕ್ಷಾಚಾಲಕರ ಸಭೆ

ಹೊಸಪೇಟೆ ಆಟೋರಿಕ್ಷಾಚಾಲಕರ ಸಂಘದ ಸರ್ವ ಸದಸ್ಯರ ಸಭೆ ನಗರ ಶ್ರೀರಾಮುಲು ಪಾರ್ಕ್‌ನಲ್ಲಿ ಜರುಗಿತು. ಈ ಸಭೆಯಲ್ಲಿ ಚಾಲಕರ ಕುಂದು ಕೊರತೆಗಳ ಬಗ್ಗೆ ಮತ್ತು ಸಂಘದ ಚಟುವಟಿಕೆಗಳ ಬಗ್ಗೆ ಚರ್ಚಿಸಲಾಯಿತು. ಅಲ್ಲದೇ ಕೆಲವು ಮಹತ್ವದ ತೀರ್ಮಾನಗಳನ್ನು ಸರ್ವಾನುಮತದಿಂದ ಸಭೆಯಲ್ಲಿ ಅಂಗೀಕರಿಸಲಾಯಿತು.

ಈ ಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಪದಾಧಿಕಾರಿಗಳ ಮತ್ತು ಕಾರ್ಯಕಾರಿ ಸಮಿತಿಗಳ ಸದಸ್ಯರ ಹೆಸರುಗಳು ಈ ಕೆಳಗಿನಂತಿವೆ.

ಎಂ. ಜಂಬಯ್ಯನಾಯಕ್ ಗೌರವಾಧ್ಯಕ್ಷರು, ಎಸ್. ಚಿತ್ತವಾಡ್ಗಿಪ್ಪ ಅದ್ಯಕ್ಷರು, ಎ. ಕೋದಂಡಪಾಣಿ, ಜೆ. ಗುರುರಾಜ್ ಉಪಾಧ್ಯಕ್ಷರುಗಳು, ಡಿ. ವೆಂಕಟರಮಣ ಪ್ರಧಾನ ಕಾರ್ಯದರ್ಶಿ (ಡಿ.ವೈ. ಎಫ್.ಐ ಹೊಸಪೇಟೆ ತಾಲೂಕು ಅಧ್ಯಕ್ಷರು.) ಸಹ ಕಾರ್ಯದರ್ಶಿಯಾಗಿ ಹೊನ್ನಪ್ಪ, ಎಂ. ತಿಪ್ಪಣ್ಣ, ಖಜಾಂಚಿಯಾಗಿ ಆರ್.ಎಸ್. ರವಿ

ಸಭೆಯು ತನ್ನ ಯೂನಿಯನ್‌ಗೆ ಕಾನೂನು ಸಲಹೆಗಾರರಾಗಿ ಎಂ. ವಿರುಪಾಕ್ಷನಾಯಕ್, ವಕೀಲರು, ಹೋಸಪೇಟೆ ಎಸ್. ಪ್ರಸನ್ನ ಕುಮಾರ್, ಕಾರ್ಮಿಕ ಮುಖಂಡರು ಬಳ್ಳಾರಿ ಇವರನ್ನು ಆಯ್ಕೆ ಮಾಡಿತು.

ಸಭೆಯನ್ನು ಉದ್ದೇಶಿಸಿ ಹೊಸ ಅಧ್ಯಕ್ಷರಾದ ಎಸ್. ಚಿತ್ತವಾಡ್ಗಿಪ್ಪರವರು ಮಾತನಾಡಿ ಸಂಘದ ಸದಸ್ಯರ ಶಿಸ್ತನ್ನು ಕಾಪಾಡಿಕೊಂಡು ನಾಗರೀಕರೊಂದಿಗೆ ಸಹಕರಿಸಬೇಕಾಗಿ ಹಿತವಚನ ನೀಡಿದರು. ಹೊಸ ಪ್ರಧಾನ ಕಾರ್ಯದರ್ಶಿ ಡಿ. ವೆಂಕಟರಮಣ ವಂದಿಸಿದರು.

### ಮುಖಂಡರನ್ನು ಸತ್ಕರಿಸಿದ ಕಾರ್ಮಿಕರು

ಕಣಗಲಾ: ಆಗಸ್ಟ್ 4, 1993 ರಂದು ಹಿಂದುಸ್ತಾನ್ ಲೆಟೆಕ್ಸ್ ಲಿ. ಕಣಕಲಾ (ಬೆಳಗಾಂವ) ಇದರ ಗೇಟ್ ಹತ್ತಿರ ಸಾಯಂಕಾಲ ಐದು ಗಂಟೆಗೆ ಸಿ.ಐ.ಟಿ.ಯು. ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ಹಾಗೂ ರಾಜ್ಯ ಕಾರ್ಯದರ್ಶಿ ಎಂ. ಬಿ. ಕಟ್ಟಿ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ವಿ.ಪಿ. ಕುಲಕರ್ಣಿ ಇವರುಗಳಿಗೆ ಹಿಂದುಸ್ತಾನ್ ಲೆಟೆಕ್ಸ್ ಕಾರ್ಮಿಕ ಸಂಘದ ಪರವಾಗಿ ಸತ್ಕರಿಸಲಾಯಿತು.

ಈ ಹಿಂದೆ ಕ್ಯಾಜ್ಯುವಲ್ ಕಾರ್ಮಿಕರನ್ನು ಕೆಲಸದಿಂದ ಕಡಿಮೆ ಮಾಡಿದ ಬಗ್ಗೆ ಅವರನ್ನು ಸಂಘಟಿಸಿ ದೀರ್ಘ ಹೋರಾಟ ನಡೆಸಿ ವಿಜಯ ಗಳಿಸಿದ್ದ ಹಿನ್ನೆಲೆಯಲ್ಲಿ ಈ ಸಮಾರಂಭ ನಡೆಯಿತು.

ಸಭೆಯಲ್ಲಿ ವಿ.ಜೆ.ಕೆ.ನಾಯರ್, ವಿ.ಪಿ.ಕೆ ಮತ್ತು ಎಮ್.ಬಿ.ಕೆ. ಮಾತನಾಡಿ ಕೇಂದ್ರ ಸರಕಾರ ಜನವಿರೋಧಿ ಕಾರ್ಮಿಕ ವಿರೋಧಿ ನೀತಿಯನ್ನು ಹಾಗೂ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳನ್ನು ಖಾಸಗೀಕರಣ ಮಾಡುವ ಎಲ್ಲ ನೀತಿಗಳ ವಿರೋಧವಾಗಿ ಐಕ್ಯ ಹೋರಾಟಕ್ಕೆ ತಯಾರಾಗುವಂತೆ ಕರೆ ಕೊಟ್ಟರು. ಕಾರ್ಮಿಕರು ತಮಗೆ ಕಾಣಿಕೆಯಾಗಿ ಕೊಟ್ಟ ಹಣವನ್ನು ಅಸಂಘಟಿತ ಕಾರ್ಮಿಕರ ಚಳುವಳಿ ಹಾಗೂ ಕಾರ್ಮಿಕರ ಚಳುವಳಿಗೆ ವಿನಿಯೋಗಿಸುವುದಾಗಿ ಘೋಷಿಸಿದರು. ಹಿಂದುಸ್ತಾನ್‌ದ ಲೇಟೆಕ್ಸ್‌ದ ಲಿ. ಉಪ ಪ್ರಧಾನ ಕಾರ್ಯದರ್ಶಿ ಸುಬಣ್ಣವರ ವಂದಿಸಿದರು.

### ಶಿವಮೊಗ್ಗದಲ್ಲಿ ಸಮಾವೇಶ

ಶಿವಮೊಗ್ಗ: ಕೇಂದ್ರ ಸರ್ಕಾರದ ಹೊಸ ಆರ್ಥಿಕ ಕೈಗಾರಿಕಾ ನೀತಿಗಳನ್ನು ವಿರೋಧಿಸಿ ಶಿವಮೊಗ್ಗದಲ್ಲಿ ಜುಲೈ 30 ರಂದು ಜಿಲ್ಲಾ ಸಮಾವೇಶವೊಂದನ್ನು ನಡೆಸಲಾಯಿತು.

ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ, ಶಾಸಕ ಬಿ. ಮಾದಪ್ಪ ಇವರು ಹೊಸ ಕೈಗಾರಿಕಾ, ಆರ್ಥಿಕ ನೀತಿಯಿಂದ ದೇಶವು ದಿವಾಳಿ ಎದ್ದಿದೆ ಹಾಗೂ ದೇಶದ ಸ್ವಾವಲಂಬನೆಗೆ ಸ್ವಾತಂತ್ರ್ಯಕ್ಕೆ ಅಪಾಯ ಎದುರಾಗಿದೆ. ದೇಶೀಯ ಕೈಗಾರಿಕೆಗಳ ನಾಶದ ಅಂಚಿಗೆ ಬಂದಿದೆ ಎಂದು ಪ್ರಾಯೋಜಕ ಸಮಿತಿ ಸಂಚಾಲಕರಾದ ಎಸ್.ಬಿ. ಶಿವಶಂಕರ್ ಇವರು ಮಾತನಾಡಿ, ಗ್ಯಾಟ್ ಬಗ್ಗೆ ವಿವರಿಸಿದರು. ಡಂಕೆಲ್ ಪ್ರಸ್ತಾಪಗಳ ವಿರುದ್ಧ ಹೋರಾಟಬೇಕೆಂದರು. ಎಸ್.ಡಬ್ಲ್ಯು.ಎಫ್.ಐ. ನ ಎಲ್. ರಂಗೇಗೌಡ ಇವರು ಮಾತನಾಡಿ ವಿದೇಶಿ ವಸ್ತುಗಳು ಸುಲಭವಾಗಿ ನಮ್ಮ ದೇಶದೊಳಗೆ ಬಂದು ನಮ್ಮ ದೇಶದ ಕೈಗಾರಿಕೆಗಳು ಮುಚ್ಚುತ್ತಿವೆ ಎಂದರು.

# ಕೈ ಮಗ್ಗ ನೇಕಾರರ ಚಳುವಳಿ: ಸರ್ಕಾರದ ಗಮನ ಸೆಳೆಯುವಲ್ಲಿ ಯಶಸ್ವಿ

**-- ಕಾಂ. ನಿತ್ಯಾನಂದ ಸ್ವಾಮಿ**

*ಇತ್ತೀಚಿನ ಮುಖ್ಯವಾದ ಎಲ್ಲಾ ಕೇಂದ್ರಗಳಲ್ಲೂ ಯಶಸ್ವಿ ಮುಷ್ಕರ ನಡೆಸಿದ ನೇಕಾರರು ಮುಷ್ಕರ ಹೂಡಿದ್ದೇಕೆ? ಈ ಮುಷ್ಕರದ ಫಲವಾಗಿ ಸರ್ಕಾರದೊಂದಿಗೆ ಮಾತುಕತೆನಡೆಸಿ ಪಡೆದ್ದೇನು ಎಂದು ನೇಕಾರರ ಸಂಘದ ನಾಯಕ ಕಾಂ. ನಿತ್ಯಾನಂದನಸ್ವಾಮಿ ವಿವರಿಸುತ್ತಾರೆ.*

*ನೇಕಾರರು ತಮ್ಮ ಹೋರಾಟದ ಫಲವಾಗಿ ರಾಜ್ಯಮಟ್ಟದ ಕ್ಷೇಮನಿಧಿ ಸಲಹಾ ಸಮಿತಿ ನೇಕಾರರ ಗಣತಿ ನೂಲಿನ ಪೂರೈಕೆಗೆ ಸಂಬಂಧಿಸಿದ ಪ್ರಮುಖ ಬೇಡಿಕೆಗಳ ಬಗ್ಗೆ ಹಾಗೂ ಕನಿಷ್ಠ ವೇತನದ ಬಗ್ಗೆ ಖಚಿತ ಭರವಸೆ ಪಡೆದಿದ್ದಾರೆ.*

ಸಿಐಟಿಯು ನೇತೃತ್ವದ ಕರ್ನಾಟಕ ರಾಜ್ಯ ಕೈಮಗ್ಗ ನೇಕಾರರ ಕಾರ್ಮಿಕರ ಸಮನ್ವಯ ಸಮಿತಿಯು ಕೈಗೊಂಡ ಕೈಮಗ್ಗ ನೇಕಾರರ ವಿವಿಧ ಹಂತಗಳ ಚಳುವಳಿಯು ರಾಜ್ಯ ಸರ್ಕಾರದ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಸಮನ್ವಯ ಸಮಿತಿಯು ರೂಪಿಸಿದ ಚಳುವಳಿಯ ಕಾರ್ಯಕ್ರಮ ಪತ್ರಿಕೆಗಳಲ್ಲಿ ವರದಿಯಾದದ್ದೆ ತಡ; ಅಖಿಲ ಕರ್ನಾಟಕ ಕೈಮಗ್ಗ ನೇಕಾರರ ಸಂಘ ಎಂದು ಕರೆಯಿಸಿಕೊಳ್ಳುವ ಕಾಂಗ್ರೆ ಕೃಪಾಪೋಷಿತ ಸಂಘದ ಸ್ವಯಂ ಘೋಷಿತ ಮುಖಂಡರೊಬ್ಬರು ಪತ್ರಿಕೆಗಳಿಗೆ ಹೇಳಿಕೆಯೊಂದನ್ನು ನೀಡಿ ಜವಳಿ ಸಚಿವರಾದ ಶ್ರೀಯುತ ಎಚ್.ಕೆ. ಪಾಟೀಲರು ನೇಕಾರರ ಸಮಸ್ಯೆಗಳನ್ನು ಖುದ್ದಾಗಿ ಬಗೆಹರಿಸುತ್ತಿದ್ದಾಗ ಸಮನ್ವಯ ಸಮಿತಿಯು ಹೋರಾಟಕ್ಕೆ ಕರೆ ನೀಡಿ ರಾಜಕೀಯ ಮಾಡುತ್ತಿದೆ ಎಂದು ಟೀಕಿಸಿದರು. ಆದರೆ ಮಾನ್ಯ ಮಂತ್ರಿಗಳು ಕೈಮಗ್ಗ ನೇಕಾರರಿಗೆ ಕೊಟ್ಟ ಭರವಸೆಗಳನ್ನು ಅನುಕೂಲಕರವಾಗಿ ಮರೆತುಬಿಟ್ಟು ವಿದ್ಯುತ್ ಮಗ್ಗಗಳಿಗೆ ಪ್ರೋತ್ಸಾಹ ನೀಡಲು ಹೊರಟಾಗ ಮಂತ್ರಿಗಳು ತಮ್ಮ ಪಕ್ಷದವರು ಎಂದು ಬಾಯಿಮುಚ್ಚಿಕೊಂಡಿರುವುದು ರಾಜಕೀಯ ಅಲ್ಲವೆ ಎಂದು ನೇಕಾರರ ಮರುಪ್ರಶ್ನೆ ಹಾಕಿದಾಗ ಹುಬ್ಬಳ್ಳಿಯ 'ಮಾಳೋದೆ ತುತ್ತೂರಿ'ಯ ಉಸಿರುಕಟ್ಟಿತು.

ಸಮನ್ವಯ ಸಮಿತಿಯು ತೀರ್ಮಾನದ ಪ್ರಕಾರ ಜುಲೈ 14 ರ ಮುಷ್ಕರದ ಸಿದ್ಧತೆಯು ಅಂಗವಾಗಿ ರಾಜ್ಯದ ಹಲವಾರು ಕಡೆಗಳಲ್ಲಿ ನೇಕಾರರು ಪ್ರದರ್ಶನಗಳನ್ನು ನಡೆಸಿದರು. ಮೆರವಣಿಗೆಗಳನ್ನು ಹೊರಡಿಸಿ ತಾಲ್ಲೂಕ ತಹಶಿಲ್ದಾರರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಜವಳಿ ಮಂತ್ರಿಗಳಿಗೆ ತಂತಿಗಳನ್ನು ಕಳುಹಿಸಿ ನೇಕಾರರ ಪ್ರತಿನಿಧಿಗಳನ್ನು ಚರ್ಚೆಗೆ ಕರೆಯುವಂತೆ ಒತ್ತಾಯಿಸಿದರು. ಸಮನ್ವಯ ಸಮಿತಿಯ ಅಧ್ಯಕ್ಷರಿಗೆ ಜವಳಿ ಮಂತ್ರಿಗಳಿಂದ ಕರೆ ಬಂದೇಬಿಟ್ಟಿತು. ಜುಲೈ 14ರ ಮುಷ್ಕರದ ನೋಟಿಸನ್ನು ಜವಳಿ ಮಂತ್ರಿಗಳಿಗೂ, ಜವಳಿ ಆಯುಕ್ತರಿಗೂ ಮತ್ತು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೂ ಕಳುಹಿಸಲಾಗಿತ್ತು.

ಅಷ್ಟರಲ್ಲಿ ಜವಳಿ ಮಂತ್ರಿಗಳಿಂದ ಇನ್ನೊಂದು ಕರೆ. ಜುಲೈ 15 ರಂದು ವಿಧಾನಸೌಧದಲ್ಲಿರುವ ಮೀಟಿಂಗ್ ಹಾಲ್‌ನಲ್ಲಿ ಜವಳಿ ಮಂತ್ರಿಗಳೊಂದಿಗೆ ಮಾತುಕತೆ. ಜವಳಿ ಮಂತ್ರಿಗಳಿಂದ ಚರ್ಚೆಗೆ ಆಮಂತ್ರಣ ಬಂದರೂ ಜುಲೈ 14 ರ ಮುಷ್ಕರ ನಿಲ್ಲಲಿಲ್ಲ. ಗುಲ್ಬರ್ಗಾ, ಬಿಜಾಪುರ, ಬೆಳಗಾಂವ್, ಧಾರವಾಡ, ಬಳ್ಳಾರಿ, ಶಿವಮೊಗ್ಗ, ದಕ್ಷಿಣ ಕನ್ನಡ ಮೊದಲಾದ ಜಿಲ್ಲೆಗಳ ಪ್ರಮುಖ ನೇಕಾರ ಕೇಂದ್ರಗಳಲ್ಲಿ ಮುಷ್ಕರ ಯಶಸ್ವಿಯಾಗಿತ್ತು. ರಾಣೇಬೆನ್ನೂರಿನಲ್ಲಿ ಮುಷ್ಕರ ನೂರಕ್ಕೆ ನೂರು ಯಶಸ್ವಿಯಾಗಿತ್ತು. ನಿಗಮದ ಕಚೇರಿಯಲ್ಲಿಯೂ ಎಲ್ಲ ವ್ಯವಹಾರವನ್ನು ಸ್ಥಗಿತಗೊಳಿಸಲಾಗಿತ್ತು.

ಜವಳಿ ಮಂತ್ರಿ ಶ್ರೀಯುತ ಎಚ್.ಕೆ. ಪಾಟೀಲರು ಜುಲೈ 15 ರಂದು ಕರೆದ ಸಭೆಯಲ್ಲಿ ಸಮನ್ವಯ ಸಮಿತಿಯ ಪರವಾಗಿ ನಿತ್ಯಾನಂದಸ್ವಾಮಿ, ಪ್ರಸನ್ನಕುಮಾರ್, ವಿ.ಜಿ. ಮಾಗಿನಹಳ್ಳಿ, ಸದಾಶಿವ ಗೋಂದಕರ, ಹನುಮಂತಪ್ಪ ಕದರಮಂಡಲಗಿ, ಪ್ರಕಾಶ್ ರಾವಳ್, ಈಶ್ವರಪ್ಪ ಬಕ್ಕಣ್ಣನವರ, ಶಿವರಾಮ ಗೋಂದಕರ್, ರಾಮಕೃಷ್ಣ ಕೋಪರ್ಡೆ, ಮತ್ತು ಲಕ್ಷ್ಮಣ ಹೊಸ ಕೋಟೆ ಅವರು ಭಾಗವಹಿಸಿದ್ದರು.

## ಸಬ್ಸಿಡಿ

ಸಮನ್ವಯ ಸಮಿತಿಯ ಪರವಾಗಿ ವಿಚಾರಗಳನ್ನು ಮಂಡಿಸಿದ ಸಮಿತಿಯ ಅಧ್ಯಕ್ಷರು ಕೈಮಗ್ಗ ಉದ್ದಿಮೆಯ ಬಗ್ಗೆ ಕೇಂದ್ರ ಸರ್ಕಾರದ ಧೋರಣೆಯನ್ನು ಕುರಿತು ತೀವ್ರ ಆತಂಕ ವ್ಯಕ್ತಪಡಿಸಿದರು. ಸಬ್ಸಿಡಿಗಳನು ಕಡಿತಗೊಳಿಸುವ ಕೇಂದ್ರ ಸರ್ಕಾರದ ಧೋರಣೆಯಿಂದಾಗಿ ಕೈಮಗ್ಗ ಉದ್ದಿಮೆಗೆ ಪೆಟ್ಟು ಬೀಳದಿರಲಾರದು. ಸರ್ಕಾರದ ನೆರವು ಇಲ್ಲದೆ ಕೈಮಗ್ಗ ಉದ್ದಿಮೆಯು ಮಿಲ್ಲ್ ಹಾಗೂ ವಿದ್ಯುತ್ ಮಗ್ಗಗಳ ಪೈಪೋಟಿಯನ್ನು ಎದುರಿಸಿ ಬದುಕಲಾರದು. ಕೈಮಗ್ಗದ ಉದ್ದಿಮೆಯನ್ನು ಕೇವಲ ಲಾಭದ ದೃಷ್ಟಿಯಿಂದ ನೋಡದೆ ವ್ಯವಸಾಯ ರಂಗದ ನಂತರ ಅತೀ ಹೆಚ್ಚು ಉದ್ಯೋಗದ ಅವಕಾಶಗಳನ್ನು ಒದಗಿಸುವ ಕೈಮಗ್ಗ ರಂಗಕ್ಕೆ ವಿಶೇಷ ರಕ್ಷಣೆ ನೀಡುವಂತಾಗಬೇಕು. ಈ ಉದ್ದಿಮೆಗೆ ಈಗ ನೀಡಲಾಗುತ್ತಿರುವ ಸಬ್ಸಿಡಿ ರೂಪದ ನೆರವು ಮುಂದುವರೆಯ ಬೇಕು ಮಾತ್ರವಲ್ಲದೆ ಅದು ಪ್ರತಿವರ್ಷವೂ ಹೆಚ್ಚಾಗಬೇಕು. ಕೈಮಗ್ಗ ಉದ್ದಿಮೆಗೆ ನೀಡಲಾಗುತ್ತಿರುವ ಸುಂಕ ರಿಯಾಯ್ತಿಗಳನ್ನು ವಿದ್ಯುತ್ ಮಗ್ಗಗಳು ಕಬಳಿಸದಂತೆ ಬಿಗಿಯಾದ ಕ್ರಮಗಳನ್ನು ಕೈಗೊಳ್ಳುವಂತಾಗಬೇಕು.

## ಗುಣಮಟ್ಟ

ಕೈಮಗ್ಗ ಬಟ್ಟೆಯ ಗುಣಮಟ್ಟವನ್ನು ಉತ್ತಮ ಪಡಿಸುವ ಬಗ್ಗೆ ಎರಡು ಮಾತಿಲ್ಲ. ಬದಲಾಗುತ್ತಿರುವ ಅಭಿರುಚಿಗಳಿಗೆ ಅನುಗುಣವಾಗಿ ಹೊಸ ಹೊಸ ವಿನ್ಯಾಸಗಳನ್ನು ಅಳವಡಿಸಿಕೊಳ್ಳುವಂತಾಗಬೇಕು. ತರಬೇತಿ ನೀಡುವ ಮೂಲಕ ನೇಕಾರರ ಕುಶಲತೆಯನ್ನು ಹೆಚ್ಚಿಸಲು ಕ್ರಮಕೈಗೊಳ್ಳುವಂತಾಗಬೇಕು. ಮಗ್ಗಗಳನ್ನು ಹೆಚ್ಚೆಚ್ಚು ಆಧುನೀಕರಿಸಿ ನೇಯ್ಗೆ ಕೆಲಸ ಹಗುರವಾಗುವಂತೆ ಮತ್ತು ಉತ್ಪಾದನೆ ಹೆಚ್ಚಾಗುವಂತೆ ಮಾಡುವಂತಾಗಬೇಕು. ಎಲ್ಲಕ್ಕೂ ಮುಖ್ಯವಾಗಿ ನೇಕಾರರಿಗೆ ಉತ್ತಮ ಗುಣಮಟ್ಟದ ನೂಲನ್ನು ನಿರಾತಂಕವಾಗಿ ಒದಗಿಸುವ ವ್ಯವಸ್ಥೆಯಾಗಬೇಕು.

## ಹತ್ತಿಯ ನೂಲಿನ ರಫ್ತು

ವಿದೇಶಿ ವಿನಿಮಯಗಳಿಸುವ ಹೆಸರಿನಲ್ಲಿ ಆಂತರಿಕ ಮಾರುಕಟ್ಟೆಯನ್ನು ಕಡೆಗಣಿಸಿ ಹತ್ತಿಯನ್ನೂ, ಹತ್ತಿಯ ನೂಲನ್ನು ವಿವೇಚನೆಯಿಲ್ಲದೆ ವಿದೇಶಗಳಿಗೆ ರಫ್ತು ಮಾಡುವುದನ್ನು ಕೇಂದ್ರ ಸರ್ಕಾರ ನಿಲ್ಲಿಸಬೇಕು. ನೂಲಿನ ಕೊರತೆಯಿಂದ ನೇಕಾರರು ನಿರುದ್ಯೋಗಕ್ಕೆ ಒಳಗಾಗುವುದನ್ನು ತಪ್ಪಿಸಲು ಈ ಕ್ರಮ ಅವಶ್ಯವಾಗಿದೆ. ಕೇವಲ ವಿದೇಶಿ ವ್ಯಾಪಾರ ಈ ದೇಶದ ಆರ್ಥಿಕ ಸಮಸ್ಯೆಗಳಿಗೆ ಪರಿಹಾರವಲ್ಲ. ದುಡಿಯುವ ಕೈಗಳಿಗೆ ಕೆಲಸ ಸಿಗುವಂತಾದರೆ ಆಂತರಿಕ ಮಾರುಕಟ್ಟೆ ವಿಕಾಸವಾಗುತ್ತದೆ. ದುಡಿಯುವವರಿಗೆ ಉದ್ಯೋಗ ಒದಗಿಸುವ ಜವಾಬ್ದಾರಿಯಿಂದ ಸರ್ಕಾರ ಓಡಿ ಹೋಗುವುದು ಸಾಧ್ಯವಿಲ್ಲ ಮಾತ್ರವಲ್ಲ ದೇಶದ ಸಾಮಾನ್ಯ ಪ್ರಜೆಗಳಿಗೆ ಅಗ್ಗದ ಬೆಲೆಯಲ್ಲಿ ಬಾಳಿಕೆ ಬರುವ ಬಟ್ಟೆಯನ್ನು ಒದಗಿಸುವ ಜವಾಬ್ದಾರಿಯನ್ನು ಸರ್ಕಾರ ಕಡೆಗಣಿಸುವಂತಿಲ್ಲ.

## ವಿದ್ಯುತ್ ಮಗ್ಗಗಳು

ವಿದ್ಯುತ್ ಮಗ್ಗಗಳ ಬೆಳವಣಿಗೆಯೂ ಕೈಮಗ್ಗ ಉದ್ಯಮ ಮೂಲೆಗುಂಪಾಗಲು ಒಂದು ಕಾರಣವಾಗಿದೆ. ಕೈಮಗ್ಗಗಳಲ್ಲಿ ತಯಾರಿಸಲಾಗದ ವಿನ್ಯಾಸಗಳನ್ನು ವಿದ್ಯುತ್ ಮಗ್ಗಗಳಿಗೆ ನೀಡುವ ಬದಲು ಕೈಮಗ್ಗಗಳಲ್ಲಿ ತಯಾರಿಸಲಾಗುತ್ತಿರುವ ಬಟ್ಟೆಗಳನ್ನೇ ವಿದ್ಯುತ್ ಮಗ್ಗಗಳಲ್ಲಿ ತಯಾರಿಸಲಾಗುತ್ತಿದೆ. ವಿದ್ಯುತ್ ಮಗ್ಗಗಳ ಪೈಪೋಟಿಯನ್ನು ಎದುರಿಸಲಾಗದೆ ಕೈಮಗ್ಗಗಳು ಬಂದ್ ಆಗುತ್ತವೆ. ಆದ್ದರಿಂದ ಕೈಮಗ್ಗಕ್ಕೆ 22 ಬಗೆಯ ಉತ್ಪನ್ನಗಳನ್ನು ಮೀಸಲಿಡುವ ಸುಪ್ರಿಂ ಕೋರ್ಟಿನ ಇತ್ತೀಚೆಗಿನ ತೀರ್ಪನ್ನು ಸರಕಾರ ಕಟ್ಟುನಿಟ್ಟಾಗಿ ಜಾರಿಗೆ ತರಬೇಕಾಗಿದೆ.

## ಕನಿಷ್ಠ ವೇತನ

ಕೈಮಗ್ಗ ನೇಕಾರರಿಗೆ ರಾಜ್ಯದಲ್ಲಿ ಕನಿಷ್ಠ ವೇತನವನ್ನು ಪರಿಷ್ಕರಿಸದೆ ಹತ್ತಾರುವ ವರ್ಷಗಳಾಗಿವೆ. ನೇಕಾರರಿಗೆ, ಮುಖ್ಯವಾಗಿ ಮಾಸ್ಟರ್ ವೀವರ್ಸ್ ಅಡಿಯಲ್ಲಿ ಕೆಲಸಮಾಡುತ್ತಿರುವ ನೇಕಾರರಿಗೆ ಸಾಮೂಹಿಕ ಚೌಕಾಸಿಯ ಶಕ್ತಿ ಇರುವುದಿಲ್ಲ. ಸರ್ಕಾರವೇ ಕಾಲ ಕಾಲಕ್ಕೆ ಅವರ ಕೂಲಿಯನ್ನು ಪರಿಷ್ಕರಿಸಿ ಜಾರಿಗೊಳಿಸಬೇಕು. ನೇಯ್ಗೆ ಕೂಲಿಯನ್ನು ನಿಗದಿಪಡಿಸುವಾಗ ನೇಯ್ಗೆಗೆ ಸಂಬಂಧಪಟ್ಟ ಲಡಿ ತೋಡುವ ಕಂದಕಿ ಸುತ್ತುವ, ಗಂಜಿ ಮಾಡುವ, ಅಂಟು ಹಾಕುವ, ಹಣಿಗಿ ಕೆಚ್ಚುವ ಇತ್ಯಾದಿ ಕೆಲಸಗಳಿಗೂ ಪ್ರತ್ಯೇಕವಾದ ಕನಿಷ್ಠ ವೇತನವನ್ನು ನಿಗದಿಮಾಡಬೇಕು. 8 ಗಂಟೆಗಳ 26 ದಿನಗಳಿಗೆ ರೂ. 1.250 ಸಂಪಾದನೆ ದೊರೆಯುವ ರೀತಿಯಲ್ಲಿ ಮೀಟರ್ ಒಂದರ ತುಂಡು ದರವನ್ನು ನಿಗದಿಗೊಳಿಸಬೇಕು. ಬೀಡಿ ಕಾರ್ಮಿಕರಂತೆ ನೇಕಾರರಿಗೂ ತುಟ್ಟಿಭತ್ತೆ ಸಹಿತವಾದ ಕನಿಷ್ಠ ವೇತನವನ್ನು ನಿಗದಿಗೊಳಿಸಿ ಜಾರಿ ಮಾಡಬೇಕು. ನೂಲು ಒದಗಿಸಲಾಗದೆ ನಿರುದ್ಯೋಗಕ್ಕೆ ಒಳಗಾಗುವ ದಿನವೊಂದಕ್ಕೆ ಸರಾಸರಿ ಸಂಪಾದನೆಯ 50 ರಷ್ಟನ್ನು ಗ್ಯಾರಂಟೀಡ್ ವೇತನವವಾಗಿ ಕೊಡಬೇಕು. ಬೀಡಿ ಕಾರ್ಮಿಕರಿಗೆ ರಚಿಸಿರುವಂತೆ

ಪುಟ 6ನೋಡಿ

# ಮಂಗಳೂರಿನಲ್ಲಿ —— ಸಾಮೂಹಿಕ ಸಂಘಟನೆಗಳ ಸಮಾವೇಶ ——

ಕೇಂದ್ರ ಸರಕಾರದ ಹೊಸ ಆರ್ಥಿಕ ನೀತಿಯ ವಿರುದ್ಧ ಮತ್ತು ಕೋಮುವಾದದ ವಿರುದ್ಧ ಆಗಸ್ಟ್ 19 ರಂದು ಜೈಲ್ ಭರೋ ಮತ್ತು ಸೆಪ್ಟೆಂಬರ್ 9 ರಂದು ಭಾರತ್ ಬಂದ್ ನಡೆಸಲು ರಾಷ್ಟ್ರೀಯ ಸಮಾವೇಶವು ನೀಡಿದ ಕರೆಗೆ ಅನುಗುಣವಾಗಿ ದ.ಕ. ಜಿಲ್ಲೆಯಾದ್ಯಂತ ಈ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಜಿಲ್ಲೆಯ ವಿವಿಧ ಸಾಮೂಹಿಕ ಸಂಘಟನೆಗಳ ಸಮಾವೇಶವು ತೀರ್ಮಾನಿಸಿದೆ. ಜುಲೈ 27 ರಂದು ಮಂಗಳೂರಿನ ಪುರಭವನದಲ್ಲಿ ಜರಗಿದ ಸಮಾವೇಶದಲ್ಲಿ ವಿವಿಧ ಕಾರ್ಮಿಕ, ರೈತ, ವಿದ್ಯಾರ್ಥಿ, ಯುವಜನ ಮತ್ತು ಸಾಂಸ್ಕೃತಿಕ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಶ್ರೀ ಎಂ. ಲೋಕಯ್ಯ ಶೆಟ್ಟಿ ಕೆ. ಮೂಸಬ್ಬ ಮತ್ತು ಬಿ.ಕೆ. ಕೃಷ್ಣಪ್ಪನವರನ್ನೊಳಗೊಂಡ ಅಧ್ಯಕ್ಷ ಮಂಡಲಿಯು ಸಮಾವೇಶದ ಕಾರ್ಯಕಲಾಪಗಳನ್ನು ನಡೆಸಿತು.

ಸಮಾವೇಶನವನ್ನು ಉದ್ದೇಶಿಸಿ ಎಚ್.ಎಂ.ಎಸ್.ನ ರಾಜ್ಯಾಧ್ಯಕ್ಷ ಎಂ. ಲೋಕಯ್ಯ ಶೆಟ್ಟರು ಮಾತನಾಡುತ್ತಾ, ಪಿ.ವಿ. ನರಸಿಂಹ ರಾವ್ ನೇತೃತ್ವದ ಕೇಂದ್ರ ಸರಕಾರದ ವಿನಾಶಕಾರಿ ಆರ್ಥಿಕ ನೀತಿಯಿಂದಾಗಿ ಬೆಲೆ ಏರಿಕೆ ಮತ್ತು ನಿರುದ್ಯೋಗದ ಸಮಸ್ಯೆ ಉಲ್ಬಣಗೊಂಡಿದ್ದು ಜನ ಸಾಮಾನ್ಯರ ಬದುಕು ದುಸ್ತರವಾಗಿದೆ. ಎಂದು ವಿವರಿಸಿದರು.

ಎಐಟಿಯುಸಿ ಮುಂದಾಳು ಎಚ್. ಉಮಾನಾಥ್ ನಾಯಕರು ಮಾತನಾಡುತ್ತಾ, ಸರಕಾರವು ಐ.ಎಂ.ಎಫ್ ಮತ್ತು ವಿಶ್ವ ಬ್ಯಾಂಕಿನ ಶರತ್ತುಗಳಿಗೆ ಮಣಿದು ಸಾರ್ವಜನಿಕ ವಿತರಣಾ ವ್ಯವಸ್ಥೆಯು ಮತ್ತು ರಸಗೊಬ್ಬರದ ಮೇಲಿನ ಸಬ್ಸಿಡಿಗಳನ್ನು ಕಡಿತ ಮಾಡಿರುವುದರಿಂದ ಎಲ್ಲಾ ಅವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರಿವೆ ಎಂದು ವಿವರಿಸಿದರು. ದೇಶದ ಆರ್ಥಿಕ ಸಾರ್ವಭೌಮತೆಯ ರಕ್ಷಣೆಗಾಗಿ ಹೊಸ ಆರ್ಥಿಕ ನೀತಿಯನ್ನು ತಿರಸ್ಕರಿಸಲು ಎಲ್ಲಾ ವಿಭಾಗಗಳ ಜನರು ಹೋರಾಟಕ್ಕೆ ಸಿದ್ಧರಾಗಬೇಕೆಂದು ಅವರು ಕರೆ ನೀಡಿದರು.

ಸಿಐಟಿಯು ಜಿಲ್ಲಾ ಅಧ್ಯಕ್ಷ ಬಿ. ಮಾಧವನವರು ಮಾತನಾಡುತ್ತಾ ಸಾರ್ವಜನಿಕ ಕ್ಷೇತ್ರದಖಾಸಗಿಕರಣವನ್ನು ಉಗ್ರವಾಗಿ ಖಂಡಿಸಿದರು. ದೇಶದ ಆರ್ಥಿಕ ಸ್ವಾವಲಂಬನೆಯ ಆಧಾರ ಸ್ತಂಬಗಳಾಗಿ ಬೆಳೆದು ಬಂದಿರುವ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳನ್ನು ಖಾಸಗೀ ಬಂಡವಾಳಗಾರರಿಗೂ ಬಹುರಾಷ್ಟ್ರೀಯ ಸಂಸ್ಥೆಗಳಿಗೂ ಹಸ್ತಾಂತರಿಸುವ ನೀತಿಯು ಸಂಪೂರ್ಣವಾಗಿ ಜಾರಿಯಾದಲ್ಲಿ ಈ ದೇಶವು ತನ್ನ ಸ್ವಾತಂತ್ರ್ಯವನ್ನೇ ಕಳಕೊಳ್ಳುವ ಅಪಾಯವಿದೆ ಎಂದು ಅವರು ಎಚ್ಚರಿಸಿದರು. ತೀವ್ರ ಆರ್ಥಿಕ ಹಿಂಜರಿತದಿಂದ ತತ್ತರಿಸುತ್ತಿರುವ ಅಮೇರಿಕಾ, ಬ್ರಿಟನ್, ಜರ್ಮನಿ, ಫ್ರಾನ್ಸ್, ಇಟಲಿ, ಕೆನಡಾ, ಜಪಾನ್ ಮೊದಲಾದ ದೇಶಗಳು ಭಾರತದ ಮಾರುಕಟ್ಟೆಯನ್ನು ಸ್ವಾಧೀನ ಪಡೆಸಿಕೊಳ್ಳಲು ಪ್ರಯತ್ನಿಸುತ್ತಿವೆ ಎಂದ ಅವರು ಇದರಿಂದಾಗಿ ಭಾರತದ ಕೈಗಾರಿಕೆಗಳ ಬೆಳವಣಿಗೆಗೆ ಗಂಭೀರ ಅಪಾಯವಿದೆ ಎಂದು ಎತ್ತಿ ತೋರಿಸಿದರು. "ದೇಶದ ಐಕ್ಯತೆ, ಸಮಗ್ರತೆ ಮತ್ತು ಸಾರ್ವಭೌಮತೆಯ ರಕ್ಷಣೆಗಾಗಿ ಎಲ್ಲಾ ವಿಭಾಗಗಳ ಜನರು ಐಕ್ಯ ಹೋರಾಟ ನಡೆಸಬೇಕಾದ ಇಂದಿನ ಕಾಲಘಟ್ಟದಲ್ಲಿ, ಕೋಮುವಾದಿ ಶಕ್ತಿಗಳು ಜನರ ಐಕ್ಯತೆಯನ್ನು ಒಡೆಯುತ್ತಿರುವುದರಿಂದ ಕೋಮುವಾದದ ವಿರುದ್ಧ ಹೋರಾಡಿ ಜಾತ್ಯಾತೀತತೆಯನ್ನು ಎತ್ತಿ ಹಿಡಿಯಬೇಕೆಂದು ಅವರು ಕರೆ ನೀಡಿದರು.

ಕರ್ನಾಟಕ ಪ್ರಾಂತ ರೈತ ಸಂಘ ಅಧ್ಯಕ್ಷರಾದ ಪಿ. ರಾಮಚಂದ್ರ ರಾಯರು ಮಾತನಾಡುತ್ತಾ, ಡಂಕೆಲ್ ಪ್ರಸ್ತಾಪಗಳು ಈ ದೇಶದ ಕೃಷಿ ಮತ್ತು ಕೈಗಾರಿಕೆಗಳಿಗೆ ಮಾರಕವಾಗಿವೆ ಎಂದು ವಿವರಿಸಿದರು. ಸಾಮ್ರಾಜ್ಯಶಾಹಿಗಳ ಒತ್ತಡಗಳಿಗೆ ಬಲಿಬಿದ್ದು ನರಸಿಂಹರಾವ್ ಸರಕಾರವು ಡಂಕೆಲ್ ಪ್ರಸ್ತಾಪಗಳಿಗೆ ಸಹಿ ಹಾಕಲು ಸಿದ್ಧವಾಗಿದೆ ಎಂದ ಅವರು, ಇವುಗಳ ವಿರುದ್ಧ ಹೋರಾಡುತ್ತಿರುವ ರೈತಾಪಿ ಜನತೆಯೊಂದಿಗೆ ಎಲ್ಲಾ ವಿಭಾಗಗಳ ಜನರೂ ಸಕ್ರಿಯವಾಗಿ ಸೇರಬೇಕೆಂದು ಕರೆ ನೀಡಿದರು.

ಸಮಾವೇಶವನ್ನು ಉದ್ದೇಶಿಸಿ ಸುಕುಮಾರ್ (ಬಿ.ಇ.ಎಫ್.ಐ), ಎ.ಸಿ.ಕರೀಮ್ (ಆರ್. ಎಂ.ಎಸ್.), ಸಂಜೀವ ಬಳ್ಕೂರ್ (ಎಫ್ಇಎ) ವಸಂತ ಆಚಾರಿ (ಡಿ.ವೈ.ಎಫ್.ಐ) ಮತ್ತು ರಾಜ್‌ಕುಮಾರ್ (ಎಸ್.ಎಫ್.ಐ) ಮಾತನಾಡಿದರು.

ಕೆ.ಎಸ್.ಆರ್.ಟಿ.ಸಿ. ಕಾರ್ಮಿಕರ ಮುಷ್ಕರಕ್ಕೆ ಹಾಗೂ ಕಳೆದ 65 ದಿನಗಳಿಂದ ನಡೆಯುತ್ತಿರುವ ಎಸ್.ಕೆ.ಎ.ಸಿ.ಎಂ.ಎಸ್. ನೌಕರರ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಿದ ಸಮಾವೇಶವು ಸರಕಾರ ತಕ್ಷಣ ಮಧ್ಯೆ ಪ್ರವೇಶ ಮಾಡಿ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಒತ್ತಾಯಿಸಿತು.

ಆರಂಭದಲ್ಲಿ ಕೆ.ಶಂಕರ್ ಸ್ವಾಗತಿಸಿದರು. ಕೊನೆಯಲ್ಲಿ ಪಿ. ಉಮೇಶ್ ಭಂಡಾರಿ ವಂದಿಸಿದರು.

## ಕೆಂಪು ನಮನ

ಝುಣ್ ಝುಣ್ ಝುಣಕ
ಜನರೆದೆಯ ಪುಳಕ
ಅರಳ್ಯಾದೆ ಬದುಕು ಅಲ್ಲಿ
ಢಣ್ ಢಣ್ ಢಣಕ
ದುಡಿಯೋರ ಲೋಕ
ಗರಿಬಿಚ್ಚಿ ಏಳುವಲ್ಲಿ

ಹೇಳೋಲ್ಲ ನಾನು
ಕತೆಯೊಂದ ಕಟ್ಟಿ
ಅನುಮಾನ ಬೇಡ ತಮಗ
ಮಾಡಲ್ಲ ಮೋಡಿ ॥ ಪ ॥
ಉಂಟಲ್ಲಿ ಸಗ್ಗ
ಎಂಬಂಥ ಮಾತಿನೊಳಗ

ಹಾಲುಂಟು ಅಲ್ಲಿ
ಉಂಟಯ್ಯ ವಿಷವು
ಬುದ್ಧುಳ್ಳ ಜನರೇ ಕೇಳಿ
ಇದ್ದಾನೆ ಧಣಿಯು ॥ ಪ ॥
ಬೆವರಿಳಿಸೊ ಕೂಲಿ
ಒಂದಿಷ್ಟು ಸಹನೆ ತಾಳಿ

ಗುಳಿಯೆದ್ದು ಅಂದು
ಹಸಿದಳ್ಳಿ ಜನರು
ಕಲಕತ್ತ ನಗರ ಹೊಕ್ಕು
ಗಲ್ಲಿ ಗಲ್ಲಿಯಲ್ಲಿ ॥ ಪ ॥
ಚೆಲಾಡಿ ಬದುಕು
ಕಳೆದ್ಹೋದ ಹತ್ತು ದಿಕ್ಕು

ನಗರ್‍ಕ ಬಂದು
ಕರೆದಾರು ಇಂದು
ಜನ ಗಟ್ಟಿ ಹಳ್ಳಿಯೊಳಗ-
ದೋ ಭಿಕ್ಷಾ ಭೂಮಿ ॥ ಪ ॥
ಮೆಗೆರಡು ಅರವಿ
ಸೂರೊಂದು ತಲಿ ಮ್ಯಾಗ

ದುಡ್ಡುಳ್ಳ ಧಣಿಯು
ಮೇಲ್ಜಾತಿ ಪಡೆಯು
ಅಧಿಕಾರ ಹಿಡಿದು
ಕೆಳಜಾತಿಯೋರು ॥ ಪ ॥
ಭೂಹೀನ ಜನರು
ತುಳಿತುಳಿಸಿ ಕೊಂದು ನೊಂದು

ಬುಡಕಟ್ಟು ಹೆಂಣೂs
ಪಡೆದಾಳೆ ಕಂಣೂs
ಪಂಚಾಯ್ತು ಇಂದು ಅರಳಿ
ಜನಬಲದ ಕನಸು ॥ ಪ ॥
ನನಸಾಗೋ ಬಿರಸು
ನೋಡ್ಯಾವೆ ದೇಶ ಹೊರಳಿ

ಪಡುವಂಗ ಓ!
ಎಡರಂಗ
ಹೇಳ್ತೇವಿ ನಿಮಗ ನಮನ
ಜೀವ ತೆತ್ತ ಜನರೇ ॥ ಪ ॥
ಪ್ರತಿ ಮುಖಾಫರರೇ
ಇದೋ ಕೆಂಪು ನಮನ!

-'ಘರಾಜ್'

ಭಾರತ್ ಬಂದ್ ಏಕೆ?

# ನಾವು ಹೊಸ ಆರ್ಥಿಕ ನೀತಿಯನ್ನು ವಿರೋಧಿಸುವುದೇಕೆ?

-- ಲೇಖನ ಮಾಲಿ

*ಭಾರತ ಬಂದ್ ಏಕೆ? ಎಂಬ ಬಗ್ಗೆ ಸಾಮೂಹಿಕ ಸಂಘಟನೆಗಳ ವಿಶಾಲ ವೇದಿಕೆಯ 20 ಬೇಡಿಕೆಗಳ ಬಗ್ಗೆ "ಐಕ್ಯರಂಗ"ದಲ್ಲಿ ಓದಿದ್ದೀರಿ.*

*ಈ ಎಲ್ಲ ಬೇಡಿಕೆಗಳ ಅಂತರಾಳದಲ್ಲಿರುವ ಆರ್ಥಿಕ ಚಿಂತನೆ ಏನು ಎಂಬ ಬಗ್ಗೆ ನಿರಂತರವಾಗಿ ಐಕ್ಯರಂಗದಲ್ಲಿ ಲೇಖನಗಳು ಪ್ರಕಟವಾಗುತ್ತಿವೆ.*

*ಭಾರತ ಬೆಳೆಯಲು ಹೊಸ ಆರ್ಥಿಕ ನೀತಿಯೊಂದೇ ಮಾರ್ಗ ಎಂದು ನಮ್ಮ ದೇಶವನ್ನಾಳುವ ವ್ಯಕ್ತಿಗಳು ಹೇಳುತ್ತಿದ್ದಾರೆ. ಇಡೀ ಜಗತ್ತಿನ ಬಡದೇಶಗಳಿಗೆ ಇದೊಂದೇ ಮದ್ದು ಎಂದು ಐ.ಎಂ.ಎಫ್ ಎಲ್ಲರ ಮೇಲೂ ಇದನ್ನು ಹೇರುತ್ತಿದೆ.*

*ಇದು ನಿಜವೇ, ಎಂಬ ಬಗ್ಗೆ ಬೆಳಕು ಬೀರುವ ಲೇಖನ ಇಲ್ಲಿದೆ.*

ಹಣದುಬ್ಬರ ಭಾರತದ ಇಂದಿನ ಅತ್ಯಂತ ದೊಡ್ಡ ಸಮಸ್ಯೆ ಈ ಹಣದುಬ್ಬರಕ್ಕೂ ಒಂದು ನಿರ್ದಿಷ್ಟ ವರ್ತನೆ ಇದೆ. ಆಹಾರ ವಸ್ತುಗಳ ಬೆಲೆ ಯದ್ವಾ ತದ್ವಾ ಏರಿದೆ ಸಿದ್ದಪಡಿಸಿದ ವಸ್ತುಗಳ ಬೆಲೆಯೂ ಏರಿದೆ. -ಆದರೆ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ. ಸರ್ಕಾರ ಹೇಳುವುದು ವಸ್ತುಗಳ ಉತ್ಪಾದನೆ ಕಡಿಮೆಯಾಗಿರುವುದರಿಂದ ಹೀಗೆ ಆಗಿದೆ. ಆದರೆ ಇದು ಟೊಳ್ಳುವಾದ ಯಾಕೆಂದರೆ ಕಳೆದ ಕೆಲವು ವರ್ಷಗಳ ಕೃಷಿ ಉತ್ಪಾದನೆ ತೆಗೆದುಕೊಂಡರೆ ಅದು ಉತ್ತಮವಾಗೇ ಇದೆ. ಸರ್ಕಾರದ ವಾದ ಸರಿಯಾಗಿದ್ದರೆ ಆಹಾರ ವಸ್ತುಗಳ ಬೆಲೆ ಕಡಿಮೆಯಾಗಬೇಕಾಗಿತ್ತು. ಆದರೆ ಹಾಗಾಗಿಲ್ಲ.

ಇಂತಹ ಹಣದುಬ್ಬರ ಮತ್ತು ಬೆಲೆ ಏರಿಕೆಯ ಪರಿಣಾಮ ಹೆಚ್ಚಾಗಿ ಬಡವರ ಮೇಲಾಗುತ್ತದೆ. ಅವರ ಎಲ್ಲ ದುಡಿಮೆಯನ್ನು ಆಹಾರ ಬಟ್ಟೆಗಾಗಿ ಖರ್ಚು ಮಾಡಿದರೂ ಹೊಟ್ಟೆ ತುಂಬುವುದಿಲ್ಲ. ಅವರ ಮೈಯೂ ಮುಚ್ಚುವುದಿಲ್ಲ.

ಇದಕ್ಕೆ ಪರಿಹಾರವನ್ನು ಐ.ಎಂ.ಎಫ್ ಮತ್ತು ವಿಶ್ವಬ್ಯಾಂಕ್‌ಗಳು ಸೂಚಿಸಿವೆ. ಅವರ ಪ್ರಕಾರ ನಮ್ಮ ಸರ್ಕಾರ ಹಣಕಾಸಿನ ಖೋತಾವನ್ನು ಕಡಿಮೆ ಮಾಡಬೇಕು ಮತ್ತು ಆಮದಿನ ಮೇಲಿನ ನಿಬಂಧನೆಗಳನ್ನು ಸಡಿಲಿಸಬೇಕು. ಸರ್ಕಾರ ಈ ಸೂಚನೆಯನ್ನು ಅಂಗೀಕರಿಸಿ ಈ ಕ್ರಮಗಳನ್ನು ಸಮರ್ಥಿಸುತ್ತದೆ. ಅದರ ಪ್ರಕಾರ ಈ ಹಣಕಾಸು ಖೋತಾ ಕಡಿಮೆ ಮಾಡುವ ಕ್ರಮ ಬೆಲೆಗಳನ್ನು ಇಳಿಸುತ್ತದೆ. ಹೊರತು ಉತ್ಪಾದನೆಯನ್ನು ಕಡಿಮೆ ಮಾಡುವುದಿಲ್ಲ.

ಆದರೆ ಮುಖ್ಯವಾಗಿ ಆಹಾರ ದಾನ್ಯಗಳ ಬೆಲೆ ತೀವ್ರವಾಗಿ ಏರಿರುವುದು ಖಾಸಗಿಯವರ ಅಕ್ರಮ ದಾಸ್ತಾನುಗಳಿಂದ ಹೊರತು ಉತ್ಪಾದನೆಗಿಂತ ಹೆಚ್ಚಿಗೆ ಬೇಡಿಕೆ ಇರುವುದರಿಂದ ಅಲ್ಲ. ಅವರು ಈ ದಾಸ್ತಾನು ಮಾಡುತ್ತಿರುವುದು ಬೆಲೆಗಳು ಇನ್ನೂ ತೀವ್ರವಾಗಿ ಏರುವ ನಿರೀಕ್ಷೆಯಿಂದ. ಇಂತಹ ನಿರೀಕ್ಷೆಗೆ ಹೊಸ ಆರ್ಥಿಕ ನೀತಿಯೇ ಕಾರಣ.

ಹಣಕಾಸು ಖೋತಾ ಕಡಿಮೆ ಮಾಡುವ ನೆಪದಲ್ಲಿ ಸರ್ಕಾರ ಎಲ್ಲ ತರಹದ ಸಹಾಯಧನಗಳನ್ನು ತೆಗೆದು ಹಾಕುತ್ತಿದೆ. ಅಥವಾ ಕಡಿತಮಾಡುತ್ತಿದೆ. ಇವುಗಳಲ್ಲಿ ಮುಖ್ಯವಾದದ್ದು ರಸಗೊಬ್ಬರ ಮತ್ತು ಆಹಾರ ಧಾನ್ಯಗಳ ಮೇಲಿನ ಸಹಾಯಧನ. ರಸಗೊಬ್ಬರಗಳ ಮೇಲಿನ ಸಹಾಯಧನದಲ್ಲಿ ಕಡಿತ ಮಾಡಿದಾಗ ಅವುಗಳ ಬೆಲೆ ಏರುತ್ತದೆ. ಈ ಬೆಲೆ ಏರಿಕೆಯೊಂದಿಗೆ ಕೃಷಿ ಉತ್ಪನ್ನಗಳ ಉತ್ಪಾದನಾ ವೆಚ್ಚ ಏರಲೇಬೇಕು ತಾನೆ. ಇದರಿಂದ ಆಹಾರಧಾನ್ಯಗಳ ಖರೀದಿ ಮತ್ತು ಮಾರಾಟದ ಬೆಲೆಯೂ ಏರಲೇಬೇಕು. ಇದು ಅಕ್ರಮ ದಾಸ್ತಾನನ್ನು ಹೆಚ್ಚು ಮಾಡುತ್ತದೆ.

ಈ ಹಣಕಾಸಿನ ಖೋತಾ ಕಡಿಮೆ ಮಾಡುವುದರಿಂದ ನೇರವಾಗಿ ಬಳಕೆದಾರರ ಬೇಡಿಕೆ ಕಡಿಮೆಯಾಗುವುದಿಲ್ಲ. ಆದರೆ ಬಡವರ ಕೊಳ್ಳುವ ಸಾಮರ್ಥ್ಯಕ್ಕೆ ಈ ಕ್ರಮ ಕೊಡಲಿಯೇಟು ಹಾಕುವುದರಿಂದ ಬಡವರು ಕೊಳ್ಳುವುದನ್ನು ಬಿಡಬೇಕಾಗುತ್ತದೆ. ಅಂದರೆ ಅವರು ಉಪವಾಸವಿರಬೇಕಾಗುತ್ತದೆ. ಅಥವಾ ಅರೆ ಹೊಟ್ಟೆ ಉಣ್ಣಬೇಕಾಗುತ್ತದೆ. ಸರ್ಕಾರ ಹೇಳುವುದು ಸಾಲದ ಮೇಲೆ ಬಡ್ಡಿಯ ದರ ಹೆಚ್ಚಿಗೆ ಇರುವುದರಿಂದ ಹೆಚ್ಚು ದಾಸ್ತಾನು ಮಾಡಲು ಸಾಧ್ಯವಾಗುವುದಿಲ್ಲವೆಂದು. ಆದರೆ ಇದು ನಿಜವಲ್ಲ. ಹೂಡಿದ ಬಂಡವಾಳದ ಮೇಲೆ ಅಪಾರ ಲಾಭ ಬರುವುದರಿಂದ ಅದೇ ಈ ಹೆಚ್ಚು ದಾಸ್ತಾನುಗಳಿಗೆ ಸಹಾಯ ಮಾಡುತ್ತದೆ.

ಭಾರತದ ಕೃಷಿಯಲ್ಲಿ ಹಣಹೂಡಿಕೆ ಕಳೆದ ಕೆಲ ವರ್ಷಗಳಲ್ಲಿ ಬಹಳ ಕಡಿಮೆಯಾಗಿದೆ. ಕಳೆದ ದಶಕಗಳಲ್ಲಿ ಸಾಧಿಸಿರುವ ಪ್ರಗತಿಯನ್ನು ಬರುವ ವರ್ಷಗಳಲ್ಲಿ ಉಳಿಸಿಕೊಂಡು ಹೋಗುವುದು ಕಷ್ಟಸಾಧ್ಯ. ಹಾಗೆ ಮಾರುಕಟ್ಟೆ ಪರ ನೀತಿಗಳು ಕಷ್ಟಗಳ ಸರಮಾಲೆಯನ್ನೇ ಹೆಣೆಯುತ್ತವೆ.

ಹಣದುಬ್ಬರದ ಬಗೆಗಿನ ಸರ್ಕಾರದ ವಿಶ್ಲೇಷಣೆ ತಪ್ಪು. ಯಾಕೆಂದರೆ ಹಣದುಬ್ಬರ ವಸ್ತುಗಳ ಬೇಡಿಕೆ ಹೆಚ್ಚುವುದರಿಂದಲೇ ಉಂಟಾಗುವುದಿಲ್ಲ. ಬದಲಿಗೆ ವಸ್ತುಗಳ ಉತ್ಪಾದನಾ ವೆಚ್ಚದ ಹೆಚ್ಚಳದಿಂದಲೂ ಆಗುತ್ತದೆ. ಈ ಉತ್ಪಾದನಾ ವೆಚ್ಚಗಳನ್ನು ಹತೋಟಿಯಲ್ಲಿಡಬಹುದು. ಆದರೆ ಸರ್ಕಾರದ ನೀತಿಗಳು ಇವಕ್ಕೆ ವಿರುದ್ಧವಾಗಿವೆ.

ವಿದೇಶಿ ವ್ಯಾಪಾರ ಬಾಕಿ ದೊಡ್ಡದಾಗಿದ್ದು ಅದು ಸಮಸ್ಯೆಯಾಗಿದೆ. ರಫ್ತಿಗಿಂತ ಆಮದು ಹೆಚ್ಚಿರುವುದರಿಂದು ಇದು ಉದ್ಭವವಾಗಿದೆ. ಇದನ್ನು ಹತೋಟಿಯಲ್ಲಿಡಲು ಆಮದನ್ನು ಕಡಿಮೆ ಮಾಡಬೇಕು. ಎಲ್ಲಿ ತಂತ್ರಜ್ಞಾನಗಳ ಅವಶ್ಯಕತೆ ಇದೆಯೋ ಅದನ್ನು ದೇಶೀಯವಾಗಿ ನಾವು ಕಂಡು ಹಿಡಿಯಬೇಕು. ಇದು ಸ್ವಾವಲಂಬನೆಯ ದಾರಿ. ಆದರೆ ಹೊಸ ಆರ್ಥಿಕ ನೀತಿಯಲ್ಲಿ ಇದಕ್ಕೆ ಅವಕಾಶವಿಲ್ಲ. ತಂತ್ರಜ್ಞಾನ ಮತ್ತು ಭೋಗ ವಸ್ತುಗಳ ಆಮದನ್ನು ಉತ್ತಮ ಗುಣಮಟ್ಟದ ನೆಪದಲ್ಲಿ ಹೆಚ್ಚಿಸಲಾಗಿದೆ. ಪರಿಣಾಮವಾಗಿ ಉಂಟಾಗುವ ವ್ಯಾಪಾರ ಬಾಕಿ ತೀರಿಸಲು ಐ.ಎಂ.ಎಫ್ ಮತ್ತು ವಿಶ್ವಬ್ಯಾಂಕ್ ಸಾಲಕ್ಕೆ ಮೊರೆ ಹೋಗುವುದು ಅನಿವಾರ್ಯವಾಗುತ್ತದೆ. ಈ ಸಾಲಗಳ ಕಂತುಗಳನ್ನು ಮರುಪಾವತಿಸಬೇಕಾದಾಗ ಮತ್ತೆ ಅವರಿಂದಲೇ ಸಾಲ. ಇದು ನಮ್ಮನ್ನು ಸಾಲದ ವಿಷವೃತ್ತದೊಳಗೆ ಕೊಂಡೊಯ್ಯುತ್ತದೆ.


ಸರ್ಕಾರ ಇನ್ನೊಂದು ವಾದವನ್ನು ಮುಂದಿಡುತ್ತದೆ. ಅದೇನೆಂದರೆ ಐ.ಎಂ.ಎಫ್ ವಿಶ್ವಬ್ಯಾಂಕ್‌ಗಳ ಸಾಲದ ಹಣವಷ್ಟನ್ನೇ ನಾವು ಒಳಗೆ ತರುತ್ತಿಲ್ಲ. ಹೊಸ ಆರ್ಥಿಕ ನೀತಿಯ ಫಲವಾಗಿ ವಿದೇಶೀ ಬಂಡವಾಳ ಇತರ ಜಾಗತಿಕ ಮೂಲಗಳಿಂದಲೂ ಬಂಡವಾಳ ನಮ್ಮ ದೇಶದಲ್ಲಿ ಉದ್ದಿಮೆಗಳಲ್ಲಿ ಹಣಹೂಡಿಕೆಯ ರೂಪದಲ್ಲಿ ಬರುತ್ತದೆ ಎಂದೂ, ಇದಲ್ಲದೆ ಹೊಸ ತಂತ್ರಜ್ಞಾನ ವಿದೇಶೀ ಹಣಹೂಡಿಕೆಯ ನೆರವಿನಿಂದ ನಾವು ರಫ್ತನ್ನು ತೀವ್ರವಾಗಿ ಹೆಚ್ಚಿಸಬಹುದೆಂಬುದು ಇನ್ನೊಂದು ವಾದ. ಇವೆರಡೂ ನಿರೀಕ್ಷಿತ ಮಟ್ಟದಲ್ಲಿ ಸಾಧ್ಯವಾದರೆ ವ್ಯಾಪಾರೀ ಬಾಕಿ ತೀರಿಸುವಲ್ಲಿ ತೊಂದರೆಯಿರುವುದಿಲ್ಲ ಎಂಬುದು ಸರ್ಕಾರದ ನಿಲುವು.

ಆದರೆ ನೇರ ವಿದೇಶೀ ಹಣಹೂಡಿಕೆ ಅಷ್ಟು ಸುಲಭದಲ್ಲಿ ಬರುವುದಿಲ್ಲ. ಭಾರತದ ಮಾರುಕಟ್ಟೆಯನ್ನು ಆಕ್ರಮಿಸಲು ಎಷ್ಟು ಬೇಕೋ ಅಷ್ಟನ್ನು ಮಾತ್ರ ವಿದೇಶೀ ಬಂಡವಾಳಿಗರು ಬಹುರಾಷ್ಟ್ರೀಯ ಕಂಪನಿಗಳು ಹಣ ಹೂಡಬಹುದು. ನಮ್ಮ ಅಭಿವೃದ್ಧಿ ಕಟ್ಟಿಕೊಂಡು ಅವರಿಗೇನಾಗಬೇಕಾಗಿದೆ? ಆದರೆ ಇಂತಹ ಮಾರುಕಟ್ಟೆ ಆಕ್ರಮಣದ ಹಣ ಹೂಡಿಕೆಯಿಂದ ದೇಶಕ್ಕೆ ಭಯಂಕರ ಅಪಾಯವಿದೆ. ಅದು ದೇಶದಲ್ಲಿ ಆಗಲೇ ಸ್ಥಾಪಿತವಾಗಿರುವ ಉದ್ದಿಮೆಗಳನ್ನು ನಾಶಮಾಡುತ್ತದೆ. ಈ ವಿದೇಶಿ ಬಂಡವಾಳಿಗರು ನೇರವಾಗಿ ಭಾರತಕ್ಕೆ ರಫ್ತು ಮಾಡುವ ಬದಲು ಬಿಡಿ ಭಾಗಗಳನ್ನು ಇಲ್ಲಿಗೆ ತಂದು ಇಲ್ಲಿ ಅವುಗಳನ್ನು ಜೋಡಿಸಿ ಮಾರಿ ದೇಶೀ ಉದ್ದಿಮೆಗಳಿಗೆ ಮಾರುಕಟ್ಟೆಯೇ ಇಲ್ಲದಂತೆ ಮಾಡುತ್ತಾರೆ. ಆದ್ದರಿಂದ ಇಲ್ಲಿಗೆ ಬರುವ ಹಣ ಅಂತರ್ರಾಷ್ಟ್ರೀಯ ವ್ಯವಹಾರಗಳಲ್ಲಿ ಬಳಕೆಯಲ್ಲಿರುವಂತೆ ಹಾಟ್‌ಮನಿ (Hot Money) ಆಗಿರುತ್ತದೆ. ಅಂದರೆ ಅದು ಅಲ್ಪಾವಧಿಯದ್ದಾಗಿದ್ದು ಜೂಜಿನ ಹಣದಂತಿರುತ್ತದೆ, ಇಂದು ಬಂದದ್ದು ನಾಳೆಯೇ ಹೋಗಬಹುದು. ಇಂತಹ ಬಂಡವಾಳ ಹೂಡಿಕೆಯಿಂದ ನಮ್ಮ ವಿದೇಶಿ ವ್ಯಾಪಾರದ ಬಾಕಿಯನ್ನು ಸುಧಾರಿಸುತ್ತೇವೆಂಬುದು ದೋಖೆತನವಾಗುತ್ತದೆ.

ಇನ್ನು ಬಹುರಾಷ್ಟ್ರೀಯ ಕಂಪನಿಗಳು ಭಾರತದೊಳಕ್ಕೆ ಬಂದು ರಫ್ತು ಉದ್ದೇಶಿತ

---

ಒದಲೇ ಬೇಕಾದ ಪುಸ್ತಕ




## ಗಾಂಧೀಕರಣ, ಕಾಂಗ್ರೆಸ್ಸೀಕರಣಕ್ಕೆ ತುತ್ತಾಗದ

# ಸ್ವಾತಂತ್ರ್ಯ ಚಳುವಳಿಯ ಚರಿತ್ರೆ "ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು"

-- ಶರತ್ ಚಂದ್ರ

*ನಾವು ಸ್ಕೂಲ್‌ಗಳಲ್ಲಿ ಕಲಿಸುವ ಭಾಷಣ ಚರ್ಚೆಗಳಲ್ಲಿ ಕೇಳಿ ಜನಜನಿತವಾಗಿರುವ ಸ್ವಾತಂತ್ರ್ಯ ಚಳುವಳಿಯ ಚರಿತ್ರೆಯ ಸಾರಾಂಶವೆಂದರೆ- ಗಾಂಧಿ-ನೆಹರೂ ಸತ್ಯಾಗ್ರಹ ಹೂಡಿ ಸ್ವಾತಂತ್ರ್ಯ ತಂದು ಕೊಟ್ಟರು. ಹೆಚ್ಚೆಂದರೆ ಕಾಂಗ್ರೆಸ್ ಅಹಿಂಸಾತ್ಮಕ ಚಳುವಳಿ ಹೂಡಿ ಸ್ವಾತಂತ್ರ್ಯ ತಂದುಕೊಟ್ಟಿತು. ಸ್ವಾತಂತ್ರ್ಯದ ಮೊದಲು ಕಾಂಗ್ರೆಸ್ಸಿನ ಭಾಗವೇ ಆಗಿದ್ದ ಜಯಪ್ರಕಾಶ್ ನಾರಾಯಣ್, ಲೋಹಿಯಾ, ಇ.ಎಂ.ಎಸ್. ಹೆಸರೂ ಈ ಚರಿತ್ರೆಯಲ್ಲಿ ಬರುವುದಿಲ್ಲ. ಇಲ್ಲವೇ ಒಂದೇ ವಾಕ್ಯದಲ್ಲಿ ಮುಗಿದು ಹೋಗುತ್ತದೆ. ತೆಲಂಗಾಣಾ ಚಳುವಳಿ, ಪುನ್ನಪ್ರಯಲಾರ್, ನೌಕಾ ದಂಗೆಗಳ ವೀರ ಹೋರಾಟಗಳ ಹೆಸರೂ ಈ ಚರಿತ್ರೆಯಲ್ಲಿ ಸುಳಿಯುವುದಿಲ್ಲ. ಇಂತಹ ಗಾಂಧೀಕರಣ, ಕಾಂಗ್ರೆಸ್ಸೀಕರಣಕ್ಕೆ ತುತ್ತಾಗದೆ ಸ್ವಾತಂತ್ರ್ಯ ಚಳುವಳಿಯ ಸಮಗ್ರ ಪರಿಚಯ ನೀಡುವ ಪುಸ್ತಕ - ಎಸ್. ಪಿ. ಶಂಕರ್ ನಾರಾಯಣ ರಾವ್ ಅವರ "ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು"*

*ನವಕರ್ನಾಟಕ ಪಬ್ಲಿಕೇಷನ್ಸ್‌ರವರ ಮೂರನೇ ದಶಕ ವರ್ಷದ ಪುಸ್ತಕ ಮಾಲೆಯ ಅರ್ಪಣೆ. ಕನ್ನಡದಲ್ಲಿ ಲಭ್ಯವಿರುವ ಸ್ವಾತಂತ್ರ್ಯ ಚಳುವಳಿಯ ಚರಿತ್ರೆಗಳಲ್ಲೆಲ್ಲಾ ಹೆಚ್ಚು ಸಮಗ್ರವೆನ್ನಬಹುದಾದ ಪುಸ್ತಕ ಇದು. ಮುಖ್ಯವಾಹಿನಿಯಾದ ಕಾಂಗ್ರೆಸ್ ನಾಯಕತ್ವದ ಚಳುವಳಿಯಲ್ಲದೆ ಕ್ರಾಂತಿಕಾರಿಗಳು, ಸಮಾಜವಾದಿ, ಕಮ್ಯುನಿಸ್ಟ್, ರೈತಚಳುವಳಿಗಳು, ಕಾರ್ಮಿಕ ಚಳುವಳಿಗಳು, ಆದಿವಾಸಿ ದಂಗೆಗಳು, ಸಂಸ್ಥಾನಿ ಪ್ರಜೆಗಳು, - ಹೀಗೆ ಹತ್ತು ಹಲವು ಪ್ರಮುಖ ತೊರೆಗಳ" ಪಾತ್ರದ ಸಮಗ್ರ ಪರಿಚಯ ಈ ಪುಸ್ತಕದ ವೈಶಿಷ್ಟ್ಯ*

"......... ಇಂದು ನಾವು ಎದುರಿಸುತ್ತಿರುವ ಮಿಸಲಾತಿ, ಮಂದಿರ-ಮಸೀದಿ, ಕೋಮುವಾರು ಗಲಭೆ, ವಿಚ್ಛಿದ್ರಕಾರಿ ಭಾವನೆಗಳು, ಮುಂತಾದ ರಾಜಕೀಯ- ಸಾಮಾಜಿಕ ಸಮಸ್ಯೆಗಳು ಮತ್ತು ದಾರಿದ್ರ್ಯ, ನಿರುದ್ಯೋಗ ಮುಂತಾದ ಆರ್ಥಿಕ ಸಮಸ್ಯೆಗಳ ಮೂಲ ಇರುವುದು ಬ್ರಿಟಿಷ್ ಆಳ್ವಿಕೆಯಲ್ಲಿ, ಅಂದಿನ ಆರ್ಥಿಕ ಶೋಷಣೆಯಲ್ಲಿ ಹಾಗೂ ಆಕಾಲದಲ್ಲಿ ಜರುಗಿದ ಮಹತ್ತರ ಸಾಮಾಜಿಕ ಪರಿವರ್ತನೆಯಲ್ಲಿ. ಆದ್ದರಿಂದ 19-20 ನೇ ಶತಮಾನಗಳ ಆರ್ಥಿಕ-ಸಾಮಾಜಿಕ ಅಧ್ಯಯನಗಳು ಮಹತ್ವದವು............ ಇಂದಿನ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಸ್ಥೂಲ ಮತ್ತು ಸಮಗ್ರ ಹಿನ್ನೆಲೆ ಒದಗಿಸುವುದು" ಪುಸ್ತಕದ ಉದ್ದೇಶ ಎಂಬ ಲೇಖಕ ಶಂಕರನಾರಾಯಣರಾವ್ ಅವರು ಮುನ್ನುಡಿಯಲ್ಲಿ ಹೇಳಿರುವುದು ಅರ್ಥಪೂರ್ಣವಾಗಿದೆ. ಪುಸ್ತಕ ಇದನ್ನು ಒದಗಿಸುವುದರಲ್ಲಿ ಬಹಳ ಮಟ್ಟಿಗೆ ಸಫಲವಾಗಿದೆ ಎನ್ನಬೇಕು. ಕನ್ನಡದಲ್ಲಿ ಸ್ವಾತಂತ್ರ್ಯ ಚಳುವಳಿಯ ಪರಂಪರೆಯ ಬಗ್ಗೆ ಇರುವ ಪುಸ್ತಕಗಳೇ ಕರ್ನಾಟಕದ ಪಾತ್ರದ ಬಗ್ಗೆ ಇರುವ ಪುಸ್ತಕಗಳು ಹೆಚ್ಚು. ಅಯೋಧ್ಯಾ ಸಿಂಗ್ ಅವರ ಹಿಂದೀ ಪುಸ್ತಕದ ಅನುವಾದ ಬಿಟ್ಟರೇ ಇಡೀ ಸ್ವಾತಂತ್ರ್ಯ ಚಳುವಳಿಯ ಪರಿಚಯ ನೀಡುವ ಪುಸ್ತಕಗಳು ವಿರಳ ಎನ್ನಬಹುದು. ಈ ಲೇಖಕರು 'ಮೈಸೂರು ಸಂಸ್ಥಾನದಲ್ಲಿ ಮೊದಲ ಕಮ್ಯುನಿಸ್ಟರು' ಎಂಬ ಪುಸ್ತಕ ಬರೆದಿದ್ದಾರೆ ಎಂದೂ ಇಲ್ಲಿ ನೆನಪಿಸಿ ಕೊಳ್ಳಬಹುದು.

### ಹಲವು ತೊರೆಗಳ ಪರಿಚಯ

ಈಗಾಗಲೇ ಹೇಳಿದಂತೆ ನಮ್ಮ ಸ್ವಾತಂತ್ರ್ಯ ಚಳುವಳಿಯ ಹತ್ತು ಹಲವು ತೊರೆಗಳ ಸಮಗ್ರ ಪರಿಚಯ ಈ ಪುಸ್ತಕದ ವೈಶಿಷ್ಟ್ಯಗಳಲ್ಲೊಂದು. ಕಾರ್ಮಿಕ ಚಳುವಳಿಗ್ರಳು, ರೈತ ಚಳುವಳಿಗಳನ್ನು ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಅದರ ಭಾಗವಾಗಿ ನೋಡಲಾಗಿದೆ. 'ಬಹಿರಂಗ ಚಳುವಳಿಗಳು ಸೋತು ಜನಮನ ನೀರಸವಾದಾಗ ಬಿರುಸಾಗುವ' ಸಶಸ್ತ್ರ ಕ್ರಾಂತಿಕಾರಿ ಹೋರಾಟಗಳ ಪಾತ್ರ, ಸಾಫಲ್ಯ-ವೈಫಲ್ಯದ ವಿಶ್ಲೇಷಣೆ ಮಾಡಲಾಗಿದೆ. 1930 ರವರೆಗೆ 'ಡೊಮಿನಿಯನ್ ಪ್ರಭುತ್ವ'ದಲ್ಲೇ ಸಂತುಷ್ಟವಾಗಿದ್ದ ಕಾಂಗ್ರೆಸ್ 'ಸಂಪೂರ್ಣ ಸ್ವರಾಜ್ಯದತ್ತ ಮಾತ್ರವಲ್ಲ, ಜನಕಲ್ಯಾಣ ರಾಜ್ಯದ ನಿರ್ಮಾಣ'ದತ್ತ ಹೊರಳುವಂತೆ 'ಒತ್ತಾಯ ಹೇರಿದ, ಪ್ರಭಾವ ಬೀರಿದ' ಸಮಾಜವಾದಿ ಚಳುವಳಿ, ಅದರ ಹಲವು ಕವಲುಗಳು ( ಕಾಂಗ್ರೆಸ್ ಸೋಶಲಿಸ್ಟರು, ಕಮ್ಯುನಿಸ್ಟರು, ಎಂ.ಎನ್ ರಾಯ್‌ವಾದಿಗಳು, ಸುಭಾಷ್‌ಚಂದ್ರ ಬೋಸರ ಫಾರ್ವರ್ಡ್ ಬ್ಲಾಕ್) ಏಳು-ಬೀಳುಗಳು, ಸೋಲು ಗೆಲುವುಗಳನ್ನು ವಿವರವಾಗಿ ಚಿತ್ರಿಸಲಾಗಿದೆ.

ಇವಲ್ಲದೆ ಸಾಮಾನ್ಯವಾಗಿ ಸ್ವಾತಂತ್ರ್ಯ ಚಳುವಳಿಯ ಭಾಗವೆಂದು ಪರಿಗಣಿಸಲ್ಪಡದ ಆದಿವಾಸಿ ದಂಗೆಗಳು, ಸಂಸ್ಥಾನ ಪ್ರಜೆಗಳ ಆಂದೋಲನ, ಜಾತಿ ಚಳುವಳಿಗಳು, ಕೋಮು ಚಳುವಳಿಗಳಿಗೆ ಯಾವುದೇ ಹಣೆ ಪಟ್ಟಿ ಅಂಟಿಸದೆ, ಪೂರ್ವಗ್ರಹವಿಲ್ಲದೆ ಅನುಕಂಪದಿಂದ ಚಿತ್ರಿಸಲಾಗಿದೆ. 'ಆಯಾ ಸನ್ನಿವೇಶಗಳಲ್ಲಿ ಸಿಕ್ಕಿಬಿದ್ದು ತೊಳಲುತ್ತಿರುವ ಜನರಿಗೆ ಮಾತ್ರ ಅರ್ಥವಾಗುವ' ಆ ವಿಶಿಷ್ಟ ಆಂದೋಲನಗಳು ಆಯಾ ಜನಸಮುದಾಯಗಳಲ್ಲಿ ತಲೆ ಎತ್ತುವ ಕಾರಣಗಳು, ಅದು ಸ್ವಾತಂತ್ರ್ಯ ಚಳುವಳಿಗೆ ನೀಡಿದ ಕೊಡುಗೆಯನ್ನು ಬಿಂಬಿಸಲಾಗಿದೆ. 'ನೋವು ಕಣ್ಣೀರುಗಳಿಂದ ಅಳೆಯುವುದಾದರೆ ಆಧುನಿಕ ಜಗತ್ತಿನ ಅತ್ಯಂತ ಭಾರಿ ಮಾನವೀಯ ದುರಂತ'ವಾದ, ತಮ್ಮ ಜೀವನ ವಿಧಾನದಲ್ಲಿ ಆದ ತೀವ್ರ ಮಾರ್ಪಾಡುಗಳಿಂದ ದಿಕ್ಕೆಟ್ಟು ಅದರ ವಿರುದ್ಧ ಹಿಂಸಾತ್ಮಕವಾಗಿ ದಂಗೆಯೆದ್ದ- ಆದಿವಾಸಿಗಳ ಹೋರಾಟದ ವೀರಗಾಥೆ ಒಂದು ಅಧ್ಯಾಯ ತುಂಬುತ್ತದೆ. ಬ್ರಿಟಿಷರ ವಿರುದ್ಧ ಗೆಲ್ಲುವ ಯಾವುದೇ ಸಂಭವವಿಲ್ಲದೆಯೂ ವೀರಾವೇಶದಿಂದ ಹೋರಾಡಿದ, 'ಆಳವಾದ ವಿಷಾದದ ಅನಿವಾರ್ಯ ದುರಂತದ ಪ್ರಭಾವಳಿ' ಇರುವ - ಆದಿವಾಸಿ ದಂಗೆಗಳನ್ನು ಮನಮುಟ್ಟುವಂತೆ ಚಿತ್ರಿಸಲಾಗಿದೆ.

### ಜಾತಿಚಳುವಳಿಗಳು

ಅದೇ ರೀತಿ ಹಿಂದುಳಿದ ವರ್ಗಗಳ ಹಲವು ಚಳುವಳಿಗಳು-ಮಹಾರಾಷ್ಟ್ರದ ಸತ್ಯಶೋಧಕ ಚಳುವಳಿ, ಬ್ರಾಹ್ಮಣೇತರ ಪರಿಷತ್, ಮದರಾಸಿನಲ್ಲಿ ಜಸ್ಟೀಸ್ ಪಕ್ಷ, 'ಸುಯ ಮರಿಯಾದೈ' ಎಂಬ ದ್ರಾವಿಡ ಚಳುವಳಿ ಮತ್ತು ಇವೆಲ್ಲಕ್ಕಿಂತಲೂ ಹೆಚ್ಚು ಡಾ. ಅಂಬೇಡ್ಕರ್ ನೇತೃತ್ವದ ದಲಿತ ಜಾತಿಗಳ ಚಳುವಳಿಯ ವಿವರವಾದ ಮಾಹಿತಿ ಬೇರೆ ಪುಸ್ತಕಗಳಲ್ಲಿ ವಿರಳ. ಬೇರೆ ಕೆಲವು ಪುಸ್ತಕಗಳಂತೆ ಈ ಚಳುವಳಿಗಳನ್ನು ವಿಚ್ಛಿದ್ರಕಾರಕ ಅಥವಾ ರಾಷ್ಟ್ರ ವಿರೋಧಿ ಎಂಬ ಹಣೆ ಪಟ್ಟಿ ಅಂಟಿಸಿ ನೋಡಲಾಗಿಲ್ಲ. ಬದಲಾಗಿ ಜಾತಿ ಚಳುವಳಿಗಳನ್ನು, ಈ ನಿಮ್ನ ಜಾತಿಯ ಜನಸಾಮಾನ್ಯರು ಅನುಭವಿಸುತ್ತಿದ್ದ ಸಾಮಾಜಿಕ ಆರ್ಥಿಕ ಅನ್ಯಾಯಗಳಿಗೆ ವಿರುದ್ಧವಾಗಿ ಎದ್ದ ಚಳುವಳಿಗಳನ್ನಾಗಿ ನೋಡಲಾಗಿದೆ. ರಾಷ್ಟ್ರೀಯ ಚಳುವಳಿ ಈ ಬಗ್ಗೆ ಗಮನಹರಿಸುವಂತೆ ಒತ್ತಾಯ

ಕಗಳನ್ನು ತೆರೆಯುತ್ತಾರೆಂಬ ಆಶಯ. ರಿಗೆ ಭಾರತವಷ್ಟೇ ಅಲ್ಲ ಇಡೀ ಜಗತ್ತೇ . ಹಿಂದಿನ ಸೋವಿಯೆಟ್ ಯೂನಿ ನ್‌ನ ದೇಶಗಳೂ ಅವರನ್ನು ಸ್ವಾಗತಿಸು . ಇನ್ನು ನಮ್ಮ ಬಂಡವಾಳಿಗರೇ ಅಂತಹ ಕಗಳನ್ನು ತೆರೆಯುತ್ತಾರೆಂಬುದು. ಅಭಿ ಹೊಂದಿದ ದೇಶಗಳೊಂದಿಗೆ ಸ್ಪರ್ಧಿಸು ತಹ ತಂತ್ರಜ್ಞಾನ ನಮ್ಮಲ್ಲಿ ಇಲ್ಲ. ಅಲ್ಲದೆ ರದ ವೆಚ್ಚಗಳನ್ನು ಕಡಿಮೆ ಮಾಡಿರುವುದ ನ ನಮ್ಮಲ್ಲಿ ಅವಶ್ಯಕ ಅಂತರ್ರಚನೆಯ ರಸ್ತೆ, ತ್, ಇತ್ಯಾದಿ ಅನುಕೂಲಗಳ ಕೊರತೆ ತ್ತದೆ. ಅನಾದಿಕಾಲದಿಂದ ನಾವು ರಫ್ತು ಡುತ್ತ ಬಂದಿರುವ ಸಾಂಬಾರ ಜಿನಸು , ಚಹ, ಹತ್ತಿ, ರೇಶ್ಮೆ ಇತ್ಯಾದಿಗಳಿಗೂ ಬಲ ದ ಸ್ಪರ್ಧಿಗಳು ಇಂದು ಇದ್ದಾರೆ. ಮತ್ತು ತ್ರಜ್ಞಾನ ಮತ್ತು ಸೌಕರ್ಯಗಳ ಕೊರತೆಯಿಂ ಗಿ ನಾವು ಈ ರಫ್ತುಗಳಲ್ಲೇ ಹಿಂದೆ ಬಿದ್ದಿ ದೆ ಎಂಬುದನ್ನು ಮರೆಯಬಾರದು. ಕೃಷಿ ತ್ಪನ್ನಗಳ ರಫ್ತಿನ ಬಗ್ಗೆ ಬೊಬ್ಬೆ ಇಡುತ್ತಿರುವ ಮ್ಮ ಸರ್ಕಾರ ಅದು ಸಾಧ್ಯವಾಗಲು ನಾವು ಕ್ಷೇತ್ರದಲ್ಲಿ ಏನೇನು ಅಭಿವೃದ್ಧಿ ಕಾರ್ಯಗ ಮಾಡಿದ್ದೇವೆ, ಏನೇನು ಸಾಧಿಸಿದ್ದೇವೆ, ನು ಸಾಧಿಸಿಲ್ಲ ಎಂಬುದರ ಬಗ್ಗೆ ಲವಲೇ ಗಮನ ನೀಡುವುದಿಲ್ಲ. ಇಂದು ನಮ್ಮ ಯಲ್ಲಿನ ಉತ್ಪಾದಕತೆ, ಉತ್ಪನ್ನಗಳ ಗುಣ ಟ್ಟ ಎಲ್ಲವೂ ಕೀಳಾಗಿದೆ. ಹೀಗಿರುವಾಗ ಉತ್ಪನ್ನಗಳ ರಫ್ತು ಎಂದರೆ ಆಹಾರ ಧಾನ್ಯ ನ್ನು ರಫ್ತು ಮಾಡಬೇಕೆ? ಹಾಗೆ ಮಾಡಿದರೆ ಮ್ಮ ಜನರ ಗತಿ? ಅರೆ ಹೊಟ್ಟೆಯೇ ಗತಿ.

ಹೀಗೆ ಯಾವುದೇ ರೀತಿಯಲ್ಲಿ ನಮ್ಮ ದೇಶೀ ವ್ಯಾಪಾರ ಬಾಕಿ ಪರಿಸ್ಥಿತಿ ಸುಧಾರಿ ಲ್ಲಿ ಸಾ[illegible]ತೆಯೇ ಕಾಣುವುದಿಲ್ಲ. ಇದು ಸ ಆರ್ಥಿಕ ನೀತಿಗಳ ಕೊಡುಗೆ.

ಇದಲ್ಲದೆ ಅಂತರಾಷ್ಟ್ರೀಯ ಮಟ್ಟದಲ್ಲಿ ನ್ನೊಂದು ಸಮಸ್ಯೆಯಿದೆ. ಅದು ಅಭಿವೃದ್ಧಿ ಂದಿದ ದೇಶಗಳಲ್ಲಿನ ಆರ್ಥಿಕ ಹಿಂಜರಿತ. ಹಿಂಜರಿತವಿರುವಾಗ ದೇಶೀ ಉತ್ಪಾದಕರ ರಕ್ಷಿಸಲು ಅವರು ರಕ್ಷಣಾತ್ಮಕ ಕ್ರಮ ಕೈಗೊ ತ್ತಾರೆ. ಅಂದರೆ ಆಮದಿನ ಮೇಲೆ ನಿರ್ಬಂ ಧವನ್ನು ಹೇರುತ್ತಾರೆ. ಆಗಲೂ ನಮ್ಮ ರಫ್ತಿನ ಪ್ರಮಾಣ ಕಡಿಮೆಯಾಗುತ್ತದೆ. ಈ ರಾಷ್ಟ್ರಗಳ ಆರ್ಥಿಕ ಹಿಂಜರಿತದ ಸಮಸ್ಯೆ ಸದ್ಯದಲ್ಲಿ ಬಗೆಹರಿವ ಸಾಧ್ಯತೆಗಳೂ ಕಾಣುತ್ತಿಲ್ಲ. ಆದ್ದರಿಂದಲೇ ಡಂಕೆಲ್ ಕರಡಿನ ಮೂಲಕ ಅವರು ಅವರಲ್ಲಿನ ನಿರುದ್ಯೋಗಿಗಳ ಸಮಸ್ಯೆಯನ್ನು ನಮ್ಮಲ್ಲಿಗೆ ದಾಟಿಸಲು ಪ್ರಯತ್ನಿಸುವುದು.

ಈ ಹೊಸ ಆರ್ಥಿಕ ನೀತಿಗಳಿಂದ ಸಾಮ್ರಾಜ್ಯಶಾಹಿಗಳಿಗೆ ಭಾರತವನ್ನು ಕೊಳ್ಳೆ ಹೊಡೆಯಲು ಅನುಕೂಲವಾಗುತ್ತದೆ. ಇಲ್ಲಿ ಸಹಾಯಧನಗಳನ್ನು ರದ್ದುಪಡಿಸುವುದರಿಂದ ಸಾಮ್ರಾಜ್ಯಶಾಹಿಗಳಿಗೆ ಹಲವು ಲಾಭಗಳಿವೆ. ರಸಗೊಬ್ಬರಗಳ ಬೆಲೆ ಏರುತ್ತದೆ. ಇದರಿಂದ ಕೃಷಿ ಉತ್ಪನ್ನಗಳ ಬೆಲೆ ಏರುತ್ತದೆ. ನಮ್ಮಲ್ಲಿ ಇಳುವರಿ ಆಗಲೇ ಕಡಿಮೆ ಇರುವುದರಿಂದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಭಾರತಕ್ಕೆ ಆಹಾರ ಧಾನ್ಯಗಳನ್ನು ಮಾರಬಹುದು. ಆಹಾರ ಧಾನ್ಯಗಳ ಮೇಲಿನ ಸಹಾಯಧನ ಕಡಿತದಿಂದಲೂ ಇದೇ ಪರಿಣಾಮವಾಗುತ್ತದೆ. ಆಂತರಿಕವಾಗಿ ಆಹಾರಧಾನ್ಯಗಳ ಬೆಲೆ ಯದ್ವಾತದ್ವಾ ಏರುತ್ತದೆ. ಹಾಗಾದಾಗ ನಮ್ಮಲ್ಲಿ ಬೆಳೆದ ಆಹಾರ ಧಾನ್ಯಗಳನ್ನು ಕೊಳ್ಳುವ ಬದಲು ಆಮದು ಮಾಡಿಕೊಳ್ಳುವುದು ಸುಲಭವಾಗುತ್ತದೆ. ಇಂತಹ ಸ್ಥಿತಿಯಲ್ಲಿ ನಮ್ಮ ಕೃಷಿ ಲಾಭದಾಯಕವಲ್ಲದ ಸ್ಥಿತಿಗೆ ತಲುಪುತ್ತದೆ. ದೇಶದ ಬೆಳೆ ಪದ್ಧತಿಯೇ ಏರುಪೇರಾಗುತ್ತದೆ. ಒಟ್ಟಿನಲ್ಲಿ ದೇಶದ ವ್ಯವಸಾಯ ಪದ್ಧತಿಯೇ ಕುಸಿದು ನಾಶವಾಗುತ್ತದೆ. ಸ್ವಾವಲಂಬನೆ ಎಂಬುದು ಹೇಳ ಹೆಸರಿಲ್ಲದಂತಾಗುತ್ತದೆ. ಪರಾವಲಂಬನೆಯ ದೌರ್ಬಲ್ಯಕ್ಕೊಳಗಾದ ದೇಶ ಎಂದಿಗೂ ತನ್ನ ಶೋಷಣೆಯ ಬಾಗಿಲುಗಳನ್ನು ಪೂರ್ತಿಯಾಗಿ ತೆರೆಯುತ್ತದೆ. ಭಾರತ ಸಾಮ್ರಾಜ್ಯಶಾಹಿಗಳ ಗೋಮಾಳವಾಗುತ್ತದೆ. ದೇಶದ ರಾಜಕೀಯ ಆರ್ಥಿಕ, ಸಾಂಸ್ಕೃತಿಕ ಹಾಗೂ ಇತರ ಎಲ್ಲ ಕ್ಷೇತ್ರಗಳನ್ನು ಸಾಮ್ರಾಜ್ಯಶಾಹಿಗಳು ತಮ್ಮ ಹತೋಟಿಯಲ್ಲಿಟ್ಟುಕೊಂಡು ದೇಶವನ್ನೇ ತಮಗೆ ಬೇಕಾದಂತೆ ಆಡಿಸತೊಡಗುತ್ತಾರೆ.

ಇಂತಹ ಕರಾಳ ಕತ್ತಲೆಗೆ ಹೊಸ ಆರ್ಥಿಕ ನೀತಿಗಳು ನಮ್ಮ ದೇಶವನ್ನು ಕೊಂಡೊಯ್ಯುತ್ತವೆ.

## ಐ.ಎಂ.ಎಫ್.ಗೆ ಮತ್ತೆ ಡೊಗ್ಗು ಸಲಾಮು

# ದೇಶದ ಬ್ಯಾಂಕುಗಳಿಗೆ ಊನ

-- ಜಿ.ಎಸ್.ಮಣಿ

ವಿಶ್ವ ಬ್ಯಾಂಕ್‌ನ ಜೊತೆಗೆ 500 ಮಿಲಿಯನ್ ಡಾಲರುಗಳ ಸಾಲಕ್ಕಾಗಿ ಮತ್ತೆ ಮಾತುಕತೆ ನಡೆದಿದೆ. ಐ.ಎಂ.ಎಫ್ ನ ಜೊತೆಗೆ 5 ಬಿಲಿಯನ್ ಡಾಲರುಗಳ ಸಾಲಕ್ಕಾಗಿಯೂ ಇದೇ ಸಮಯದಲ್ಲಿ ಮಾತುಕತೆ ನಡೆದಿದೆ. ಈ ಎರಡೂ ಸಾಲಗಳಿಗಾಗಿ ಭಾರತ ಡೊಗ್ಗು ಸಲಾಮು ಹೊಡೆಯಲೇ ಬೇಕು. ಷರತ್ತುಗಳ ಸುರಿಮಳೆಯಾಗಿದೆ.

ಬ್ಯಾಂಕ್-ಫಂಡ್‌ಗಳು ಈಗ ಹಣಕಾಸು ಮುಂತಾದ ಪೂರ್ಣ ಸುಧಾರಣೆ ಆಗಲೇ ಬೇಕೆಂದು ಪಟ್ಟುಹಿಡಿದು ಕುಳಿತಿವೆ. ಈ ಷರತ್ತುಗಳೆಂದರೆ.

1. ಸರ್ಕಾರ ಬಜೆಟ್‌ನಲ್ಲಿ ಹೇಳಿದಂತೆ 5,700 ಕೋಟಿ ರೂಪಾಯಿಗಳ ಬಂಡವಾಳವನ್ನು ಬ್ಯಾಂಕುಗಳಿಗೆ ಒದಗಿಸಬೇಕು. ಇದು ಹಣದ ರೂಪದಲ್ಲಿರದೆ ಬಾಂಡುಗಳ ರೂಪದಲ್ಲಿರುತ್ತದೆ.

2. ನರಸಿಂಹಮ್ ಸಮಿತಿ ಶಿಫಾರಸ್ಸು ಮಾಡಿದಂತೆ ಆಸ್ತಿ ಪುನ ನಿರ್ಮಾಣ ನಿಧಿ ಸ್ಥಾಪಿಸಬೇಕು. ಈ ನಿಧಿ ವಸೂಲಾಗದ ಸಾಲಗಳನ್ನು ಬ್ಯಾಂಕುಗಳಿದ ಕೊಳ್ಳುವಂತಾಗಬೇಕು.

3. ಸರಕಾರ ಒದಗಿಸುವ ಬಂಡವಾಳ ಲಾಭದಾಯಕವಾಗಿ ನಡೆವ ಬ್ಯಾಂಕುಗಳಿಗೆ ಮಾತ್ರ ದೊರೆಯಬೇಕು.

4. ಅತಿಯಾಗಿ ಹಾನಿ ಮಾಡುತ್ತಿರುವ ಬ್ಯಾಂಕುಗಳನ್ನು ಮುಚ್ಚಬೇಕು ಇಲ್ಲವೇ ಅವುಗಳನ್ನು ಆರೋಗ್ಯವಂತ ಬ್ಯಾಂಕುಗಳೊಳಗೆ ವಿಲೀನಗೊಳಿಸಬೇಕು. ಹಾಗೆ ವಿಲೀನಗೊಳ್ಳುವ ಬ್ಯಾಂಕುಗಳು ಅಧಿಕಾರಿಗಳನ್ನು ವಿಲೀನಗೊಳಿಸಿಕೊಳ್ಳುವ ಬ್ಯಾಂಕಿನ ಅಧಿಕಾರಿಗಳಿಗಿಂತ ಕಡಿಮೆ ದರ್ಜೆಯಲ್ಲಿಡಬೇಕು.

5. ಪ್ರತಿ ಬ್ಯಾಂಕಿನ ಕನಿಷ್ಠ ಒಂದು ಶಾಖೆಯನ್ನು ಪೂರ್ಣ ಕಂಪ್ಯೂಟರೀಕರಣಗೊಳಿಸಬೇಕು.


6. ವೇತನ ಒಪ್ಪಂದಗಳಲ್ಲಿ ಸಾಮರ್ಥ್ಯಕ್ಕೆ ಆದ್ಯತೆ ನೀಡುವ ಅವಕಾಶಗಳಿರಬೇಕು.

7. ಬ್ಯಾಂಕುಗಳು ಮಾರುಕಟ್ಟೆಯಿಂದ ಬಂಡವಾಳ ಪಡೆಯಲು ಅವಕಾಶ ನೀಡುವ ಮಸೂದೆ ತರಬೇಕು.

8. ಖಾಸಗೀ ಬ್ಯಾಂಕುಗಳ ಪ್ರವೇಶಕ್ಕೆ ಅನುಕೂಲ ಮಾಡಿಕೊಡಬೇಕು.

ಈ ಎಲ್ಲ ಕ್ರಮಗಳು ದೇಶೀ ಬ್ಯಾಂಕ್ ಉದ್ಯಮವನ್ನೇ ಹಾಳುಗೆಡವಿ, ಅದನ್ನು ಶ್ರೀಮಂತರ ಅಗತ್ಯಗಳಿಗೆ ತಕ್ಕಂತೆ ಬಳಸುವ ಲಾಭಕೋರರ ಲಾಭಕ್ಕಾಗಿ, ವಿದೇಶೀ ಬ್ಯಾಂಕುಗಳ ಅನುಕೂಲಕ್ಕಾಗಿ ತೆರೆವ ಎಲ್ಲ ಒಳ ಹುನ್ನಾರಗಳು ಈ ಷರತ್ತುಗಳಲ್ಲಿವೆ.

ಬಡವರಿಗೆ ಇನ್ನು ಬ್ಯಾಂಕುಗಳು ಗಗನ




ನರಸಿಂಹರಾವ್ ಸರಕಾದ 25ನೇ ತಿಂಗಳಲ್ಲಿ

ಕುಸುಮಗಳಾಗಲಿವೆ.

ಈ ಷರತ್ತುಗಳಲ್ಲದೆ ಭಾರತದ ಅತ್ಯಂತ ಮುಖ್ಯವಾದ ಹಣಕಾಸು ಸಂಸ್ಥೆ ಐ.ಡಿ.ಬಿ.ಐ. (ಭಾರತೀಯ ಉದ್ಯಮ ಅಭಿವೃದ್ಧಿ ಬ್ಯಾಂಕ್) ಅನ್ನು ಸಹ ಖಾಸಗೀಕರಿಸುವ ಪ್ರಸ್ತಾಪ ಈ ಷರತ್ತುಗಳಲ್ಲಿದೆ.

### ಆಂತರಿಕ ಸುಧಾರಣೆ ಜಾಗತಿಕ ನಿಧಿ ತರುತ್ತದೆ

ಇದು ಏಶಿಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಎಂಬ ವಿಶ್ವಬ್ಯಾಂಕ್ ಅಂಗ ಸಂಸ್ಥೆಯ ಅಂಬೋಣ. ಕಳೆದೆರಡು ವರ್ಷಗಳಿಂದ ತೀವ್ರ ಗತಿಯಲ್ಲಿ ಆರ್ಥಿಕ ಸುಧಾರಣೆ ತಂದಿರುವ ಭಾರತ ತೀರ ಕಡಿಮೆ ವಿದೇಶೀ ಹಣಹೂಡಿಕೆ ಕಂಡಿದೆ. ಜಾಗತಿಕ ಸಂಸ್ಥೆಗಳು ಇನ್ನೂ ಸುಧಾರಣೆ ಆಗಬೇಕೆಂದು ಹೇಳುತ್ತಲೇ ಇದ್ದಾವೆ. ಆದರೆ ಈ ವಿದೇಶಿ ಹಣಹೂಡಿಕೆ ಮರಿಚಿಕೆಯೇ ಆಗಿ ಉಳಿದಿದೆ.

ಭಾರತ ಸರ್ಕಾರಕ್ಕೆ ಮಾತ್ರ ಇದರ ಅರಿವು ಆಗುತ್ತಿಲ್ಲ.

### ವರ್ಷದ ಅ(ನ)ರ್ಥ ಮಂತ್ರಿ

ಯುರೋಪಿನ ಬ್ಯಾಂಕರುಗಳ ಪತ್ರಿಕೆ 'ಯುರೋಮನಿ' ನಮ್ಮ ಕೇಂದ್ರ ಅರ್ಥ ಮಂತ್ರಿ ಡಾ. ಮನಮೋಹನ್ ಸಿಂಗರನ್ನು ವರ್ಷದ ಅರ್ಥ ಮಂತ್ರಿ ಎಂದು ಹೆಸರಿಸಿದೆ. ಸಾಮ್ರಾಜ್ಯಶಾಹಿಗಳ ದೊಡ್ಡ ಬಂಡವಾಳಿಗರ ಆಸಕ್ತಿಗಳಿಗೆ ಬಡಜನತೆಯ ಆಸಕ್ತಿಗಳನ್ನು ಬಲಿಕೊಟ್ಟು 'ದಿಟ್ಟ' ಹೆಜ್ಜೆಯಿಟ್ಟ ಅರ್ಥ ಮಂತ್ರಿ ಈತ. ದೇಶವನ್ನೇ ಅಭಿವೃದ್ಧಿಯ ಪಥದಲ್ಲಿ ಕೊಂಡ್ಯೊಯ್ಯುವ ಮಾತುಗಳನ್ನು ಆಡುತ್ತಾ ಸಾಮ್ರಾಜ್ಯಶಾಹಿಗಳ ಲಾಭಕ್ಕಾಗಿ, ದೇಶವನ್ನೇ ತೆರೆದವ ಈತ, ಇಂತಹ 'ಪರೋಪಕಾರಿ', ಮನೆಗೆ ಮಾರಿ ವ್ಯಕ್ತಿಯನ್ನು ಈ ಸಾಮ್ರಾಜ್ಯಶಾಹಿಗಳು ಕೊಂಡಾಡದೇ ಇರಲು ಸಾಧ್ಯವೆ?

### ಸದ್ಯದಲ್ಲಿ ನಡುಗ ತೊಡಗಲಿರುವ ರೂಪಾಯಿ

ರೂಪಾಯಿಯ ಪೂರ್ಣ ಪರಿವರ್ತನೆ ಬಂದು ಇಷ್ಟೊಂದು ತಿಂಗಳುಗಳ ಕಾಲ ಡಾಲರ್‌ನ ವಿರುದ್ಧ ಸ್ಥಿರವಾದ ಮಟ್ಟವನ್ನು ರೂಪಾಯಿ ಕಾಯ್ದುಕೊಂಡು ಬಂದಿರುವುದು ಹಲವರಿಗೆ ಅಚ್ಚರಿಯ ವಿಷಯವಾಗಿರಬಹುದು. ಕೆಲವರಿಗೆ ಈ ಕ್ರಮ ಹೇಳುವಷ್ಟು ಅಪಾಯಕಾರಿಯಲ್ಲ ಎನಿಸಿರಬಹುದು. ಆದರೆ ಈ ಅಪಾಯದ ಲಕ್ಷಣಗಳು ಇನ್ನು ಕೆಲವೇ ದಿನಗಳಲ್ಲಿ ಕಾಣಿಸಿಕೊಳ್ಳಲಿದೆ.

ಶೇರು ಹಗರಣಕ್ಕೆ ಸಂಬಂಧಪಟ್ಟ 400 ರಿಂದ 500 ಮಿಲಿಯನ್ ಡಾಲರುಗಳು ಈ ನಡುವೆ ದೇಶದೊಳಗೆ ಹರಿದು ಬಂದಿವೆ. ರಫ್ತು ಆದಾಯವೂ ಸಹ ಇದೇ ಸಮಯದಲ್ಲಿ ಹರಿದು ಬಂದಿದೆ. ಇದಲ್ಲದೆ ಸಾರ್ವಜನಿಕ ಖಾಸಗಿ ವಲಯಗಳಿಂದ ಆಮದಿನ ಬೇಡಿಕೆ ತೀವ್ರವಾಗಿ ಹೆಚ್ಚಿಲ್ಲ. ಈ ಎಲ್ಲ ಕಾರಣಗಳಿಂದ ರೂಪಾಯಿಯ ಬೆಲೆ ಸ್ಥಿರವಾಗಿತ್ತು.

ಇದಲ್ಲದೆ ಭಾರತೀಯ ರಿಸರ್ವ್ ಬ್ಯಾಂಕ್ ರೂಪಾಯಿಯ ಬೆಲೆ ಕಾಯ್ದುಕೊಂಡು ಬರುವಲ್ಲಿ ಸತತ ಪ್ರಯತ್ನ ಮಾಡುತ್ತಿದೆ. ಇದನ್ನು ಪರಿವರ್ತನೆ ಘೋಷಿಸಿದ ಆರು ತಿಂಗಳುಗಳ ಕಾಲ ಅದು ಮುಂದುವರೆಸುತ್ತದೆ. ಅಂದರೆ ಆನಂತರದ ಅವಧಿಯಲ್ಲಿ ರೂಪಾಯಿಯ ಬೆಲೆ ಏನಾಗುತ್ತದೆ ಎಂಬುದು ಈ ಕ್ರಮದ ಅಪಾಯಗಳನ್ನು ತೆರೆದು ತೋರಲಿದೆ.

## ಶೇರು ಹಗರಣ

### ಹರ್ಷದ್ ಜಾಮೀನಿನ ವಿರುದ್ಧ ಅರ್ಜಿ ವಜಾ

ಹರ್ಷದ್ ಮೆಹ್ತ ಜೂನ್ 16 ರಂದು ಪತ್ರಿಕಾ ಗೋಷ್ಠಿ ಕರೆದು ಪ್ರಧಾನಿಗಳಿಗೆ ಒಂದು ಕೋಟಿ ರೂಪಾಯಿ ನೀಡಿದ್ದ ವಿಷಯ ಹೊರಗೆಡವಿದಾಗ ಆತ ಜಾಮೀನಿನ ಬಿಡುಗಡೆಯ ಮೇಲಿದ್ದ. ಜಾಮೀನಿನ ನಿಯಮಗಳನ್ನು ಆತ ಮೀರಿರುವುದರಿಂದ ಆತನ ಜಾಮೀನನ್ನು ರದ್ದು ಮಾಡಬೇಕೆಂದು ಒಂದು ಅರ್ಜಿ ಬಂದಿತ್ತು.

ಆ ಅರ್ಜಿಯನ್ನು ಮುಂಬಯಿಯ ಉಚ್ಚ ನ್ಯಾಯಾಲಯ ವಜಾ ಮಾಡಿದೆ. ಪ್ರಧಾನಿಗಳ ವಿರುದ್ಧ ಹರ್ಷದ್‌ನಿಗೆ ಜಯ ಮೇಲೆ ಜಯ ಎಷ್ಟೆಂದರೂ ಆತ ಪಳಗಿದ ಕಳ್ಳನಲ್ಲವೇ?

ಆದರೆ ನಮ್ಮ ಪ್ರಧಾನಿ? ಸಂಭಾವಿತ ಕಳ್ಳ.

ಅರ್ಥೈಸಲಾಗಿದೆ. "ಭಾರತೀಯ ಸಮಾಜ ಕಂಡುಬರುವ ಜಾತಿ ವೈವಿಧ್ಯತೆಯ ಮೇಲೆ ಆಡಳಿತ, ಕಾಯಿದೆ ಕಾನೂನುಗಳು, ಅರ್ಥವ್ಯವಸ್ಥೆ, ನೂತನ ಸಾಮಾಜಿಕ ತತ್ವ ಬೀರಿದ ಪ್ರಭಾವ" ಇವುಗಳ ಒಟ್ಟು ಪರಿ ಜಾತಿ ಚಳುವಳಿಗಳು ಎಂದು ಮನಮು ಂತೆ ಬಿಂಬಿಸಲಾಗಿದೆ. ಗಾಂಧಿಯವರ ಹರಿಜನೋದ್ಧಾರ ಕಾರ್ಯಕ್ರಮ ಡಾ. ಅಂಬೇಡ್ಕರ್ ಚಳುವಳಿಗೆ ನೇರ ಪ್ರತಿಕ್ರಿಯೆ ಎಂಬುದನ್ನು ವಾಗಿ ಹೇಳದಿದ್ದರೂ, ಕೊಟ್ಟ ವಿವರಗಳಿಂದ ದಾದರೂ ಈ ನಿರ್ಣಯಕ್ಕೆ ಸುಲಭವಾಗಿ ತಲುಪುದು.

### ತಂತ್ರ ಹರಣಕ್ಕೆ ಆರ್ಥಿಕ ಹಿನ್ನೆಲೆ

ವಸಾಹತುಶಾಹಿ ಆಕ್ರಮಣದ ಪರಿಣಾಮ ಭಾರತದ ಆರ್ಥಿಕ ಬೆನ್ನೆಲುಬು ಹೇಗೆ ರ ಗೊಂಡಿತು ಎಂಬ ಬಗ್ಗೆ ವಿವರವಾಗಿ ಒದಗಿಸುವುದು ಈ ಪುಸ್ತಕದ ಇನ್ನೊಂದು . ಈ ಹಿನ್ನೆಲೆಯಿಂದಾಗಿಯೇ ಬೇರೆ ಚರಿತ್ರೆ, ಅದೂ 1857 ರ ಪ್ರಥಮ ಭಾರ ಸ್ವಾತಂತ್ರ್ಯ ಸಂಗ್ರಾಮ- ಶಿಪಾಯಿದಂಗೆ ದ ಆರಂಭವಾಗುವುದಿಲ್ಲ. ಬದಲಾಗಿ 500 ಗಳ ಹಿಂದೆ ಬಂದ ಯುರೋಪಿಯನ್ ರಿಗಳು ರಾಜ್ಯ ಕಟ್ಟಿದ ಬಗ್ಗೆ ಕಥೆಯಿಂದ ಭವಾಗುತ್ತದೆ. '16 ನೇ ಶತಮಾನದಲ್ಲಿ ು ಬಂದ ವ್ಯಾಪಾರೀ ಪ್ರವೃತ್ತಿ, ವಸಾಹತು ಬಂಡವಾಳಶಾಹಿ ಇವು ಜಗತ್ತಿನಲ್ಲೆಲ್ಲಾ ಎಬ್ಬಿ ಅಲ್ಲೋಲ ಕಲ್ಲೋಲಗಳು' ಮತ್ತು 'ಉತ್ಪಾ ಸಾಮರ್ಥ್ಯ ತಾಂತ್ರಿಕತೆಗಳಲ್ಲಿ ಪಶ್ಚಿಮ ದೇಶ ಮುಖ್ಯವಾಗಿ ಬ್ರಿಟನ್ ಮೈಲುಗೈಯಾಗಿ ್ ಪ್ರವಾಹ ಪೂರ್ವದಿಂದ ಪಶ್ಚಿಮಕ್ಕೆ ಹರಿ ಒದಗಿದ್ದ ಜಾಗತಿಕ ಸಂದರ್ಭದಲ್ಲಿ ಭಾರತ ತ್ಯ ಹರಣದ ದುರಂತವನ್ನು ನೋಡಲಾ

1857 ರ ಮೊದಲ ಸವಾಲು ವಿಫಲ ರೀತಿ ಇದರ ಜತೆ ಹಳೆ ಪಾಳೆಯಗಾರಿ ಮಹಾರಾಜರ ವರ್ಗ ನಾಯಕತ್ವದ ವಿಫ ಮತ್ತು ಆಗಲೇ ತಲೆಎತ್ತುತ್ತಿದ್ದ ವಿದ್ಯಾವಂತ ವರ್ಗ, ಬೂರ್ಷ್ವಾ ವರ್ಗ ನಾಯಕತ್ವದಲ್ಲಿ ಹೊಸ ಚಳುವಳಿಯ ಆರಂಭವನ್ನು ಗಿ ವಿವರಿಸಲಾಗಿದೆ. ಅದರ ಹಲವು ಮಜ . ಅದರಲ್ಲೂ ಸಾಮಾನ್ಯವಾಗಿ ವಿಲಕ್ಷ

ಗಳನ್ನು ಸರಿಯಾಗಿ ಚಿತ್ರಿಸಲಾಗಿದೆ.

### ಉದ್ಯಮಿಗಳು ಮತ್ತು ರಾಷ್ಟ್ರೀಯ ಚಳುವಳಿ

ಕೈಗಾರಿಕೋದ್ಯಮಿಗಳು ರಾಷ್ಟ್ರೀಯ ಚಳುವಳಿಯ ಮುಖ್ಯವಾಹಿನಿಯಾಗಿದ್ದ ಕಾಂಗ್ರೆಸ್ ಮೇಲೆ ಬೀರಿದ ಪ್ರಭಾವ ಸ್ವಾತಂತ್ರ್ಯ ಚಳುವಳಿಯ ಮಹತ್ವದ ಪ್ರಶ್ನೆ. ಈ ಬಗ್ಗೆ ಒಂದು ಅಧ್ಯಾಯ ಮೀಸಲಿಟ್ಟು ಆ ಬಗ್ಗೆ ಆಸಕ್ತಿಕಾರಕ ಬೆಳಕು ಚೆಲ್ಲಲಾಗಿದೆ. ಸ್ವತಃ ಕೈಗಾರಿಕೋದ್ಯಮಿಗಳಾಗಿದ್ದ ದಾದಾಬಾಯಿ ನವರೋಜಿ ಅವರ ಪಾತ್ರದಿಂದ ಹಿಡಿದು ಸ್ವತಃ ಭಾಗವಹಿಸದೆ ಗಾಂಧೀಜಿ ಮತ್ತು ಕಾಂಗ್ರೆಸ್‌ಗೆ ದೊಡ್ಡ ಪ್ರಮಾಣದಲ್ಲಿ ಧನಸಹಾಯ ಮಾಡಿದ ಬಿರ್ಲಾಗಳ ಪಾತ್ರದವರೆಗೆ ಗಮನಹರಿಸಲಾಗಿದೆ. ಭಾರತೀಯ ಉದ್ಯಮಿಗಳು ಮತ್ತು ಕಾಂಗ್ರೆಸ್‌ನ ಗುರಿಗಳಲ್ಲಿ ಮೂಡುತ್ತಾ ಬಂದ ಏಕರೂಪತೆಯನ್ನು ವಿಶೇಷವಾಗಿ ಗಮನಿಸಲಾಗಿದೆ. ಎಲ್ಲಿಯವರೆಗೆ ಎಂದರೆ ಮಾಲಕ ಭಾರತೀಯನೆ ಬ್ರಿಟಿಷನೇ ಎಂಬುದರ ಮೇಲೆ ಕಾರ್ಮಿಕರ ಚಳುವಳಿ ಬಗ್ಗೆ ಸಹಾನುಭೂತಿ ಅವಲಂಬಿತವಾಗುತ್ತಿತ್ತು. ಅಲ್ಲದೆ ಗಾಂಧೀಜಿಯವರ ವಿದೇಶಿ ವಸ್ತುಗಳ ಬಹಿಷ್ಕಾರ, ಕಾರ್ಮಿಕ-ಮಾಲಿಕ ಸಹಕಾರದ ನೀತಿ ಉದ್ಯಮಿಗಳನ್ನು ಕಾಂಗ್ರೆಸ್‌ಗೆ ಆಕರ್ಷಿಸಿದ ಬಗ್ಗೆ -ಇವು ಗಮನಾರ್ಹ ಅಂಶಗಳು. ಅಲ್ಲದೆ ಗಾಂಧೀಜಿಯವರು ಆಧುನಿಕ ಔದ್ಯಮೀಕರಣಕ್ಕೆ ವಿರುದ್ಧವಿದ್ದರು. ಅವರ ನಾಯಕತ್ವದ ಕಾಂಗ್ರೆಸ್‌ಗೆ ಬೆಂಬಲ ನೀಡಬೇಕಾದ ಅಗತ್ಯದ ಬಗ್ಗೆ ಉದ್ಯಮಿಗಳ ಲೆಕ್ಕಾಚಾರದ ಬಗ್ಗೆ ಗಮನಸೆಳೆಯಲಾಗಿದೆ. ಮಾರತ್ ಮೊಕದ್ದಮೆಯ ಆಸುಪಾಸಿನಲ್ಲಿ ಬಂಡವಾಳಶಾಹಿಗಳ ಪ್ರತ್ಯೇಕ ಪಕ್ಷ ರಚಿಸುವ ಪ್ರಶ್ನೆ ಬಂದಾಗ ಅವರ ಓರಿಯ ನಾಯಕ ಬಿರ್ಲಾ "ಕಮ್ಯುನಿಸಮ್ಮನ್ನು ಎದುರಿಸಲು ಪರಿಶುದ್ಧ ಬಂಡವಾಳಶಾಹಿ ಸಂಸ್ಥೆ ಅತ್ಯಂತ ಅನುಪಯುಕ್ತ" ಎಂದು ಎಚ್ಚರಿಸಿದ್ದು, ಕಾಂಗ್ರೆಸ್ ಬೆಂಬಲಿಸಿದ ಪ್ರಕರಣದ ಪ್ರಸ್ತಾಪ ಅತ್ಯಂತ ಅರ್ಥಗರ್ಭಿತವಾಗಿದೆ. ಕಾಂಗ್ರೆಸ್‌ನ ಇಂದಿನ ಸ್ವಭಾವಕ್ಕೆ ಹಿಡಿದ ಕನ್ನಡಿ ಇದು.

### ಕ್ವಿಟ್ ಇಂಡಿಯಾ ಮತ್ತು ವಿಭಜನೆ

ಕ್ವಿಟ್ ಇಂಡಿಯಾ ಚಳುವಳಿ ಮತ್ತು ಭಾರತದ ವಿಭಜನೆ ಸಂದರ್ಭದಲ್ಲಿ ಕಮ್ಯುನಿಸ್ಟರ ಧೋರಣೆ ಬಗ್ಗೆ ಅತ್ಯಂತ ವ್ಯವಸ್ಥಿತ ಅಪಪ್ರಚಾರ, ಇತಿಹಾಸಕ್ಕೆ ಅಪಚಾರ ತಿರುಚುವಿಕೆ ಹೆಚ್ಚಾಗಿ

# ಧರ್ಮವನ್ನು ರಾಜಕೀಯದಲ್ಲಿ ಬೆರೆಸುವ ಅಪಾಯದ ಬಗ್ಗೆ ಈಗಷ್ಟೇ ನಾವು ಎಚ್ಚೆತ್ತಿದ್ದೇವೆ

ಇ.ಎಂ.ಎಸ್

**ಸಂಸತ್ತಿನಲ್ಲಿ ನರಸಿಂಹರಾವ್ ಸರಕಾರ ಮಂಡಿಸಿರುವ ಧರ್ಮ ಮತ್ತು ರಾಜಕೀಯವನ್ನು ಪ್ರತ್ಯೇಕಿಸುವ ಉದ್ದೇಶ ಹೊಂದಿರುವ ಮಸೂದೆಗಳ ಬಗ್ಗೆ ಸಿಪಿಐ(ಎಂ) ನಿಲುವನ್ನು ನೀವು ಹಿಂದಿನ ಸಂಚಿಕೆಯಲ್ಲಿ ಓದಿರುವಿರಿ 'ಟೈಂಸ್ ಆಫ್ ಇಂಡಿಯಾ' ಪತ್ರಿಕೆ ಈ ವಿಷಯದಲ್ಲಿ ಇ.ಎಂ.ಎಸ್.ರೊಡನೆ ನಡೆಸಿದ ಒಂದು ಸಂದರ್ಶನದ ಅಂಶಗಳನ್ನು ನಮ್ಮ ಓದುಗರಿಗಾಗಿ ನೀಡುತ್ತಿದ್ದೇವೆ.**

ಪ್ರಶ್ನೆ : ರಾಜಕೀಯದೊಂದಿಗೆ ಧರ್ಮವನ್ನು ಬೆರೆಸುವುದಕ್ಕೆ ನಮ್ಮ ಪ್ರತಿಕ್ರಿಯೆ ಬಹಳ ನಿಧಾನವಾಯಿತು ಎಂದು ನಿಮಗನಿಸುತ್ತದೆಯೇ?

ಇ.ಎಂ.ಎಸ್.: ಯಾವ ರಾಜಕೀಯ ಮಾರ್ಗವೂ ಅಮೂರ್ತದಿಂದ ಮೂಡಿ ಬರುವುದಿಲ್ಲ. ಧರ್ಮ ಮತ್ತು ರಾಜಕೀಯದ ನಡುವೆ ಸಂಬಂಧ ಉಂಟಾದದ್ದು ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ. ತಿಳಕ್, ಗಾಂಧಿಯಂತಹ ರಾಷ್ಟ್ರೀಯ ಮುಖಂಡರು ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಜನಗಳನ್ನು ಅಣಿನೆರೆಸಲು ಧರ್ಮವನ್ನು ಬಳಸುತ್ತಿದ್ದರು. ಬ್ರಿಟಿಷ್ ಸಾಮ್ರಾಜ್ಯಶಾಹಿ ಕೂಡಾ ರಾಷ್ಟ್ರೀಯ ಆಂದೋಲನದ ವಿರುದ್ಧ ಧರ್ಮವನ್ನು ಬಳಸಿತು. ಭಾರತ ಧರ್ಮದ ಆಧಾರದ ಮೇಲೆ ವಿಭಜನೆಗೊಂಡ ರೀತಿಯದು.

ಆದರೆ ಸಂವಿಧಾನ ಧರ್ಮದಲ್ಲಿ ನಂಬಿಕೆಯಿಲ್ಲದ ಜನಗಳೂ ಇದ್ದಾರೆ. ಅವರ ಹಿತಾಸಕ್ತಿ ರಕ್ಷಿಸಬೇಕು ಎಂಬುದನ್ನು ಗಣನೆಗೆ ತಗೊಂಡಿದೆ ಎಂಬುದೊಂದು ಮಹತ್ವದ ಅಂಶ. ನಾಸ್ತಿಕರು ದೇವರ ಪ್ರಸ್ತಾಪ ಮಾಡದೇ ಪ್ರತಿಜ್ಞೆ ತಗೊಳಲು ಅವರು ಅವಕಾಶ ಕಲ್ಪಿಸಿದರು. ಆದರೆ ಇದೊಂದೇ ಅಪವಾದ. ಬೇರೆಲ್ಲಾ ಕಡೆ ಸ್ವಾತಂತ್ರ್ಯದ ಮೊದಲು ಹಾಗೂ ಸ್ವಾತಂತ್ರ್ಯದ ನಂತರವೂ ಧರ್ಮ ರಾಜಕೀಯದ ಭಾಗವಾಗಿತ್ತು. ಈಗಷ್ಟೇ ನಾವು ಈ ಅಪಾಯದ ಬಗ್ಗೆ ಎಚ್ಚೆತ್ತಿದ್ದೇವೆ.

ಪ್ರಶ್ನೆ : ಕಾನೂನಿನಿಂದ ಧರ್ಮ ಹಾಗೂ ರಾಜಕೀಯವನ್ನು ಪ್ರತ್ಯೇಕಿಸಲು ಸಾಧ್ಯವೆಂದು ನಿಮಗನಿಸುತ್ತದೆಯೇ?

ಇ.ಎಂ.ಎಸ್.: ಶಾಸನದಿಂದಷ್ಟೇ ಸಾಧ್ಯವಿಲ್ಲ. ಕಾನೂನೊಂದೇ ಪರಿಣಾಮಕಾರಿಯಾಗುವಂತಿದ್ದರೆ ಸಾರ್ವಜನಿಕ ಜೀವನದಿಂದ ಭ್ರಷ್ಟಾಚಾರ ಎಂದೋ ಮೂಲೋತ್ಪಾಟನೆಯಾಗಬೇಕಿತ್ತು. ಧರ್ಮವನ್ನು ರಾಜಕೀಯದೊಂದಿಗೆ ಬೆರೆಸುವ ಈಗಿನ ವರ್ತನೆಗಳ ವಿರುದ್ಧ ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸದಿದ್ದರೆ ವಿಶೇಷ ಫಲವೇನೂ ದೊರೆಯದು.

ಪ್ರಶ್ನೆ : ಈ ಮಸೂದೆಗಳು ಮುಸ್ಲಿಂ ಲೀಗ್‌ನ ಭವಿಷ್ಯದ ಮೇಲೆ ಬೀರಬಹುದಾದ ಪ್ರಭಾವವೇನು? ಅದು ತನ್ನ ಹೆಸರು ಬದಲಿಸಿ ಮುಂದುವರಿಯುತ್ತದೋ?

ಇ.ಎಂ.ಎಸ್: ಪ್ರಶ್ನೆ ಲೀಗ್ ಏನು ಮಾಡುತ್ತದೆ ಎಂದಲ್ಲ. ಕೇರಳದಲ್ಲಿ ಲೀಗ್‌ನ ಮಿತ್ರ ಪಕ್ಷ ಏನು ಮಾಡುತ್ತದೆ ಎಂಬುದೇ ಪ್ರಶ್ನೆ ತನ್ನ ಹೆಸರು, ಸಂವಿಧಾನ ಬದಲಿಸಿ ಲೀಗ್ ಇಸ್ಲಾಮಿ ಪಕ್ಷವಾಗಿಯೇ ಕಾರ್ಯನಿರ್ವಹಿಸುತ್ತಲೇ ಇದ್ದರೆ ಕಾಂಗ್ರೆಸ್ ಈ ಬೇರೊಂದು ಹೆಸರಿನ ಮುಸ್ಲಿಂ ಲೀಗ್‌ನೊಂದಿಗೆ ತನ್ನ ಸಂಬಂಧಗಳನ್ನು ಮುಂದುವರೆಸುತ್ತದೆಯೇ?

ಪ್ರಶ್ನೆ: ಧಾರ್ಮಿಕವಾದ ಭಾರತೀಯ ಮನಸ್ಸಿನಿಂದ ಧರ್ಮ ಮತ್ತು ರಾಜಕೀಯವು ಬೇರ್ಪಡಿಸುವುದು ಕಾರ್ಯ ಸಾಧ್ಯವೇ?

ಇ.ಎಂ.ಎಸ್.: ಇದೀಗ ರಾಜರುಗಳು ದೇವರ ಹೆಸರಲ್ಲಿ ಆಳ್ವಿಕೆ ನಡೆಸುವ ಮಧ್ಯಯುಗವಲ್ಲ. ನಾವು ಜನಗಳು ಸ್ವತಃ ವಿಚಾರಮಾಡಿ ತಮ್ಮದೇ ದಾರಿ ಹಿಡಿಯಲು ಏಕೆ ಬಿಡಬಾರದು?

-- ವಿಶ್ವ

# ತ್ರಿಪುರಾದಲ್ಲಿ ಅಧಿಕಾರ ವಿಕೇಂದ್ರೀಕರಣಕ್ಕೆ ಕ್ರಮ

1993ರ ತ್ರಿಪುರಾ ಪಂಚಾಯತ್ ಮಸೂದೆಯನ್ನು ರಾಜ್ಯ ವಿಧಾನಸಭೆ ಜುಲೈ 27 ರಂದು ಅಂಗೀಕರಿಸಿತು. ರಾಜ್ಯದಲ್ಲಿ ತಳಮಟ್ಟದಲ್ಲಿ ಪ್ರಜಾಪ್ರಭುತ್ವವನ್ನು ಬಲಪಡಿಸುವತ್ತ ಇದೊಂದು ದಿಟ್ಟ ಹೆಜ್ಜೆಯಾಗಿದೆ ಎಂದು ಮುಖ್ಯಮಂತ್ರಿ ದಶರಥದೇವ್ ಮಸೂದೆಯನ್ನು ವರ್ಣಿಸಿದ್ದಾರೆ. ರಾಜ್ಯದಲ್ಲಿ ಶೀಘ್ರವೆ ಪಂಚಾಯತ್ ಚುನಾವಣೆಗಳನ್ನು ನಡೆಸಲಾಗುವುದೆಂದು ಪಂಚಾಯತ್ ಸಚಿವರು ಆಶ್ವಾಸನೆ ನೀಡಿದ್ದಾರೆ.

ಕಾಂಗ್ರೆಸ್ (ಐ) -ಟಿ.ಯು.ಜೆ.ಎಸ್. ಆಡಳಿತವಿದ್ದಾಗ ರಾಜ್ಯದಲ್ಲಿ ಪಂಚಾಯತ್‌ಗಳನ್ನು ಹತ್ತಿಕ್ಕಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಪಂಚಾಯತ್‌ಗಳಿಗೆ ಸಮಾಜವಿರೋಧಿ ಶಕ್ತಿಗಳನ್ನು ನೇಮಕ ಮಾಡಲಾಗಿತ್ತು. ದುಷ್ಟ ಕೂಟದ ಆಡಳಿತ ಐದು ವರ್ಷಗಳ ಅವಧಿಯಲ್ಲಿ ಪಂಚಾಯತ್‌ಗೆ ಚುನಾವಣೆಗಳನ್ನೇ ನಡೆಸಲಿಲ್ಲ. ವಿಕೇಂದ್ರೀಕರಣದಂಥ ಮಹತ್ವದ ಪಂಚಾಯತ್ ಮಸೂದೆ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ಕಾಂಗ್ರೆ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ. ಆಡಳಿತ ವಿಕೇಂದ್ರೀಕರಣದ ಬಗ್ಗೆ ಕಾಂಗ್ರೆಗೆ ಇರುವ ಕೀಳು ಮನೋಭಾವಕ್ಕೆ ಇದು ಸಾಕ್ಷಿಯಾಗಿದೆ.

ಸ್ಥಳೀಯ ಆಡಳಿತದಲ್ಲಿ ಜನರ ಭಾಗವಹಿಸುವಿಕೆಯ ಪ್ರಮಾಣ ಮತ್ತು ಗುಣಮಟ್ಟ ಹೆಚ್ಚುವಂತಾಗಲು ಪಂಚಾಯತ್‌ಗಳಿಗೆ ಹೆಚ್ಚಿನ ಅಧಿಕಾರಗಳನ್ನು ನೀಡಲು ಹೊಸ ಕಾನೂನು ಉದ್ದೇಶಿಸಿದೆ.

ಮಸೂದೆ ಅಂಗೀಕಾರವಾಗಿರುವುದರಿಂದ ತ್ರಿಪುರಾ ಜನತೆ ದೀರ್ಘ ಕಾಲದಿಂದ ನಿರೀಕ್ಷಿಸುತ್ತಿದ್ದ ಪಂಚಾಯತ್ ಚುನಾವಣೆಗಳು ಸಮೀಪಿಸಿವೆ.

ಜನರಿಗೆ ಅಧಿಕಾರವನ್ನು ನೀಡುವಲ್ಲಿ ಎಡಪಕ್ಷಗಳು ನಿಜವಾದ ಕಾಳಜಿಯನ್ನು ಹೊಂದಿವೆ ಎನ್ನುವುದಕ್ಕೆ ತ್ರಿಪುರಾ ಸರಕಾರದ ಈ ಕ್ರಮ ಹೊಚ್ಚ ಹೊಸ ನಿದರ್ಶನವಾಗಿದೆ.

### ನೆರವು ನೀಡದ ಕೇಂದ್ರದ ವಿರುದ್ಧ ಹೋರಾಟಕ್ಕೆ ಕರೆ

ತ್ರಿಪುರಾದ ಅನೇಕ ಕಡೆಗಳಲ್ಲಿ ಇತ್ತೀಚೆಗೆ ಪ್ರವಾಹದ ಹಾವಳಿಯಿಂದ ಅಪಾರ ಹಾನಿ ಉಂಟಾಗಿತ್ತು. ಜನರಿಗೆ ಪರಿಹಾರ ಒದಗಿಸಲು ಹಾಗೂ ಪುನರ್‌ನಿರ್ಮಾಣಕ್ಕಾಗಿ ರಾಜ್ಯ ಸರಕಾರ ಕೇಂದ್ರದ ನೆರವನ್ನು ಕೋರಿತ್ತು. ಆದರೆ ಕೇಂದ್ರ ಇನ್ನೂ ಈ ವಿಚಾರದಲ್ಲಿ ಅನುಕೂಲಕರ ಪ್ರತಿಕ್ರಿಯೆ ತೋರಿಲ್ಲ. ಇದನ್ನು ಸಿಪಿಐ(ಎಂ) ತ್ರಿಪುರಾ ರಾಜ್ಯ ಸಮಿತಿ ಕಟುವಾಗಿ ಟೀಕಿಸಿದೆ. ಅದರ ಕರೆಯಂತೆ ರಾಜ್ಯಾದ್ಯಂತ ಆಗಸ್ಟ್ 9 ರಂದು ಮತಪ್ರದರ್ಶನಗಳು ನಡೆದವು.

### ಸಾಧನೆಯ ವಿಮರ್ಶೆ

ಇತ್ತೀಚೆಗೆ ನಡೆದ ರಾಜ್ಯ ಸಮಿತಿ ಸಭೆಯಲ್ಲಿ ಎಡರಂಗ ಸರಕಾರ 100 ದಿನಗಳ ಸಾಧನೆಯನ್ನು ಪರಿಶೀಲಿಸಲಾಯಿತು. ತೀವ್ರ ಹಣಕಾಸಿನ ಬಿಕ್ಕಟ್ಟು ಹಾಗೂ ಇತರ ಮಿತಿಗಳಿದ್ದರೂ ಜನರ ತಕ್ಷಣದ ಸಮಸ್ಯೆಗಳ ಪರಿಹಾರಕ್ಕೆ ಸರಕಾರ ಕ್ರಮಗಳನ್ನು ಕೈಗೊಂಡಿದೆ. ಕಾನೂನು ಮತ್ತು ಶಿಸ್ತು ಪರಿಸ್ಥಿತಿಯನ್ನು ಮರುಸ್ಥಾಪಿಸಲು ಹಾಗೂ ಜನರಿಗೆ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮರಳಿ ನೀಡಲು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದೆ ಎಂದು ಸಭೆ ಅಭಿಪ್ರಾಯಪಟ್ಟಿತು.

ಕಾಂಗ್ರೆ-ಟಿ.ಯು.ಜೆ.ಎಸ್. ಸರಕಾರ ಏಕಪಕ್ಷೀಯವಾಗಿ ವಜಾಮಾಡಿದ್ದ ಪೋಲೀಸರ ಜೈಲ್ ಗಾರ್ಡ್‌ಗಳು, ಹೋಂ ಗಾರ್ಡ್‌ಗಳು ಮತ್ತು ಇತರ ನೌಕರರನ್ನು ಎಡರಂಗ ಮರುನೇಮಕ ಮಾಡಿಕೊಂಡಿದೆ. ಹೊಸ ಪಂಚಾಯತ್ ಮಸೂದೆ ಮತ್ತು ಮಹಿಳಾ ಆಯೋಗ ಮಸೂದೆಗಳನ್ನು ಅಂಗೀಕರಿಸಿದೆ. ಮುಖ್ಯಮಂತ್ರಿ ಸಚಿವರು ಹಾಗೂ ಶಾಸಕರ ಸಂಬಳ ವಗೈರೆ ಸವಲತ್ತುಗಳನ್ನು ಕಡಿಮೆ ಮಾಡಿ ಸರಕಾರಿ ಹಣವನ್ನು ಉಳಿಸುವ ಮಹತ್ವದ ಕ್ರಮವನ್ನು ಅದು ಕೈಗೊಂಡಿರುವುದು ಗಮನಾರ್ಹವಾಗಿದೆ.

### ಮುಸ್ಲಿಂಲೀಗ್ - ಕಾಂಗ್ರೆ ವಿವಾದ

ಕೇಂದ್ರದ ಪಿ.ವಿ. ನರಸಿಂಹರಾವ್ ಸರಕಾರದ ವಿರುದ್ಧ ಮಂಡಿಸಲಾದ ಅವಿಶ್ವಾಸ ಗೊತ್ತುವಳಿಗೆ ಬೆಂಬಲ ನೀಡಿ ಮುಸ್ಲಿಂ ಲೀಗ್ ಸದಸ್ಯ ಸುಲೇಮಾನ್ ಸೇಠ್ ಮತನೀಡಿದ್ದರು. ಈ ಬಗ್ಗೆ ಮುಸ್ಲಿಂ ಲೀಗ್ ವಿವರಣೆ ನೀಡಬೇಕು ಎಂದು ಕೇರಳ ಮುಖ್ಯಮಂತ್ರಿ ಕೆ ಕರುಣಾಕರನ್ ಒತ್ತಾಯಿಸಿದ್ದಾರೆ.

ಇದಕ್ಕೆ ಮುಸ್ಲಿಂ ಲೀಗ್‌ನ ಕೇರಳ ರಾಜ್ಯ ಕಾರ್ಯದರ್ಶಿ ಅಹಮದ್ ಹಾಜಿ ಪ್ರತಿಕ್ರಿಯಿಸಿದ್ದಾರೆ.

ಮುಸ್ಲಿಂ ಲೀಗ್ ರಾವ್ ಸರಕಾರಕ್ಕೆ ಬೆಂಬಲ ನೀಡಬೇಕೆಂಬ ಕಡ್ಡಾಯವೇನೂ ಇಲ್ಲ. ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್ (ಐ)ಗಳು ಎರಡು ಪ್ರತ್ಯೇಕ ಪಕ್ಷಗಳಾಗಿವೆ. 'ವಿವರಣೆ' ಎಂಬ ಪದಕ್ಕೆ ಕಾಂಗ್ರೆನ ಅರ್ಥವೇನೆಂದು ನನಗೆ ಗೊತ್ತಾಗುವುದಿಲ್ಲ ಎಂದು ಅಹಮದ್ ಹಾಜಿ ಹೇಳಿದ್ದಾರೆ.

### ದೊಡ್ಡ ಖಾಸಗಿ ಸಾರಿಗೆಸಂಸ್ಥೆಗಳ ರಾಷ್ಟ್ರೀಕರಣಕ್ಕೆ ಕರೆ

ದೊಡ್ಡ ಖಾಸಗಿ ಸಾರಿಗೆ ಸಂಸ್ಥೆಗಳನ್ನು ರಾಷ್ಟ್ರೀಕರಿಸಬೇಕು ಎಂದು ಅಖಿಲ ಭಾರತ ರಸ್ತೆ ಸಾರಿಗೆ ಕಾರ್ಮಿಕರ ಒಕ್ಕೂಟ ಪ್ರಧಾನ ಕಾರ್ಯದರ್ಶಿ ಕೆ.ಕೆ. ದಿವಾಕರನ್ ಆಗ್ರಹಪಡಿಸಿದ್ದಾರೆ.

ಲಾರಿ ಮಾಲಿಕರು ಇತ್ತೀಚೆಗೆ ಸುಮಾರು ಒಂದು ವಾರ ಕಾಲ ನಡೆಸಿದ ಅಖಿಲ ಭಾರತ ಮುಷ್ಕರದ ಹಿನ್ನೆಲೆಯಲ್ಲಿ ದಿವಾಕರನ್ ಈ ಬೇಡಿಕೆಯನ್ನು ಮುಂದಿಟ್ಟಿದ್ದಾರೆ.

ದೊಡ್ಡ ಸಾರಿಗೆ ಸಂಸ್ಥೆಗಳನ್ನು ರಾಷ್ಟ್ರೀಕರಿಸುವ ಮೂಲಕ ಲಾರಿ ಮಾಲಿಕರ ಬೆದರಿಕೆಯನ್ನು ಎದುರಿಸಬೇಕೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಆಕ್ಟ್ರಾಯ್ ಮತ್ತು ರಸ್ತೆ ತೆರಿಗೆ (ಪಥಕರ)ಗಳನ್ನು ತೆಗೆದು ಹಾಕಬೇಕೆಂಬ ಲಾರಿ ಮಾಲಿಕರ ಬೇಡಿಕೆ ರಾಜ್ಯಗಳ ಆದಾಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಎಂದಿದ್ದಾರೆ. ಆದಾಯದ ಈ ಮೂಲವನ್ನು ಬಿಟ್ಟುಕೊಡುವಂತೆ ಕೇಂದ್ರ ಸರಕಾರ ಮತ್ತು ಲಾರಿ ಮಾಲಿಕರು ರಾಜ್ಯಗಳ ಮೇಲೆ ಒತ್ತಡ ಹೇರುತ್ತಿರುವಂತೆ ಕಾಣುತ್ತಿದೆ ಎಂದು ಅವರು ಹೇಳಿದ್ದಾರೆ.

### ಕಪ್ಪು ಹಣದ ಮೂಲ

ಲಾರಿ ಸಾರಿಗೆ ಕಪ್ಪು ಹಣದ ಒಂದು ಮೂಲವಾಗಿದೆ. ಸಾರಿಗೆ ದರಗಳನ್ನು ನಿಗದಿಪಡಿಸುವಲ್ಲಿ ಸರಕಾರಕ್ಕೆ ದನಿಯಿಲ್ಲವಾಗಿದೆ. ಅಲ್ಲದೆ ಲಾರಿ ಮಾಲೀಕರು ತಮ್ಮ ನೌಕರರಿಗೆ ಕನಿಷ್ಠ ವೇತನ ಮತ್ತು ಇತರ ಸೌಕರ್ಯಗಳನ್ನು ಕೂಡಾ ಕೊಡುತ್ತಿಲ್ಲ ಎಂದಿರುವ ದಿವಾಕರನ್ ಇಂಥವರು ದೇಶದ ಜನತೆಗೆ ತೊಂದರೆ ಕೊಡಲು ಅವಕಾಶ ನೀಡಬಾರದು ಎಂದಿದ್ದಾರೆ.

### ಅಂಗನವಾಡಿ ಕಾರ್ಯಕರ್ತೆಯರಿಗೆ ಸಂಘರ್ಷ ಸಮಿತಿ ಕರೆ

ಸೆಪ್ಟೆಂಬರ್ 9ರ 'ಭಾರತ್‌ಬಂದ್'ನ್ನು ಯಶಸ್ವಿಗೊಳಿಸಲು ಸಜ್ಜಾಗುಂತೆ ಅಂಗನವಾಡಿ ಕಾರ್ಯಕರ್ತೆಯರ ಅಖಿಲ ಭಾರತ ಸಂಯುಕ್ತ ಸಂಘರ್ಷ ಸಮಿತಿ ತನ್ನ ಅಂಗ ಸಂಘಟನೆಗಳಿಗೆ ಕರೆ ನೀಡಿದೆ. ಅಲ್ಲದೆ ಆಗಸ್ಟ್ 19ರ ಜೈಲ್‌ಭರೋ ಚಳುವಳಿಯ ಸಕ್ರಿಯವಾಗಿ ಬಾಗವಹಿಸುವಂತೆಯೂ ಸೂಚಿಸಿದೆ.

ಸಂಘರ್ಷ ಸಮಿತಿ ಸಂಚಾಲಕಿ ವಿಮಲಾ ರಣದಿವೆ. (ಸಿ.ಐ.ಟಿ.ಯು) ಈ ಸಂಬಂಧದಲ್ಲಿ ಒಂದು ಪತ್ರಿಕಾ ಹೇಳಿಕೆಯನ್ನು ಹೊರಡಿಸಿದ್ದಾರೆ. ಬಿ.ಡಿ. ಜೋಷಿ (ಐಟಕ್) ವಿ. ತ್ಯಾಗಿ( ಎಚ್.ಎಂ.ಎಸ್.) ಮತ್ತು ಬಿ.ಕೆ. ಪ್ರಸಾದ್ (ಎಸ್.ಎಫ್.ಟಿ.ಯು) ಅವರು ಹೇಳಿಕೆಗೆ ಸಹಿ ಹಾಕಿದ್ದಾರೆ.

### ತೆಲುಗು ದೇಶಂ ಶಾಸಕನ ಹತ್ಯೆ

ತೆಲುಗು ದೇಶಂ ಶಾಸಕ ಹಾಗೂ ಆಂಧ್ರಪ್ರದೇಶದ ಮಾಜಿ ಮಂತ್ರಿ ಪಿ. ಶಿವಾರೆಡ್ಡಿಯವರನ್ನು ಆಗಸ್ಟ್ 7 ರಂದು ಹೈದರಾಬಾದಿನಲ್ಲಿ ಬಾಂಬ್ ಸ್ಫೋಟಿಸಿ ಕೊಲ್ಲಲಾಯಿತು. ಹಾಡುಹಗಲಲ್ಲೇ ಈ ದುಷ್ಕೃತ್ಯ ನಡೆದಿದೆ. ಈ ಘಟನೆಯಲ್ಲಿ ಇನ್ನೊಬ್ಬ ವ್ಯಕ್ತಿಯೂ ಹತನಾಗಿದ್ದಾರೆ. ಹಿಂದೆ ನಡೆದ ಒಂದು ಕೊಲೆಯಲ್ಲಿ ಶಿವಾರೆಡ್ಡಿಯವರ ಪಾತ್ರವಿತ್ತೆಂದು ಹೇಳಲಾಗಿದ್ದು ಪ್ರತೀಕಾರವಾಗಿ ಅವರನ್ನು ಕೊಲ್ಲಲಾಗಿದೆ ಎಂದು ವರದಿಗಳು ತಿಳಿಸಿವೆ.

ಶಿವಾರೆಡ್ಡಿ ಹತ್ಯೆ ಪ್ರತಿಭಟಿಸಿ ತೆಲುಗುದೇಶಂ ಆಂಧ್ರಪ್ರದೇಶ ಬಂದ್‌ಕರೆ ನೀಡಿತ್ತು. ಬಂದ್ ವೇಳೆ ಕೆಲವು ಕಡೆಗಳಲ್ಲಿ ಅಹಿತಕರ ಘಟನೆಗಳು ನಡೆದಿವೆ.

●

## "ಚವಾಣ್ ಸ್ಥಾನಕ್ಕೆ ತಕ್ಕದಲ್ಲದ ಮಾತು"

*ಜುಲೈ 21 ರಂದು ಕಲ್ಕತ್ತದಲ್ಲಿ ಯುವ ಕಾಂಗ್ರೆ ನಡೆಸಿದ 'ಚಳುವಳಿ'ಗೆ ಸಂಬಂಧಿಸಿದಂತೆ ಎಸ್.ಬಿ. ಚವಾಣ್ ನೀಡಿರುವ ಹೇಳಿಕೆ ಕೇಂದ್ರ ಗೃಹಸಚಿವರ ಸ್ಥಾನಕ್ಕೆ ತಕ್ಕುದಲ್ಲ ಎಂದು ಪಶ್ಚಿಮಬಂಗಾಳ ಮುಖ್ಯಮಂತ್ರಿ ಜ್ಯೋತಿಬಸು ಖಾರವಾಗಿ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.*

*ಜುಲೈ 31 ರಂದು ಕಲ್ಕತ್ತಕ್ಕೆ ಭೇಟಿ ನೀಡಿದಾಗ ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸಲು ಚವಾಣ್ ನಿರಾಕರಿಸಿದರು. ಆದರೆ ದೆಹಲಿಗೆ ಹಿಂದಿರುಗಿದ ನಂತರ ಅವರು 'ಬಾಯಿಬಿಟ್ಟದರು' ಪೋಲೀಸರ ಕ್ರಮ ಕಠಿಣವಾಗಿತ್ತು. ಅದನ್ನು ತಪ್ಪಿಸಬಹುದಿತ್ತು ಎಂದು ಅವರು ಹೇಳಿದರು.*

*ಪಶ್ಚಿಮಬಂಗಾಳ ಪೋಲೀಸ್ ಪಡೆಯ ಟ್ರೇಡ್ ಯೂನಿಯನ್ ಸಿಪಿಐ(ಎಂ) ನಿಯಂತ್ರಣದಲ್ಲಿದೆ ಮತ್ತು ಜುಲೈ 21 ರಂದು ಪೋಲೀಸರೊಂದಿಗೆ ನಡೆದ ಘರ್ಷಣೆಯಲ್ಲಿ ಗಾಯಗೊಂಡ ಕಲ್ಕತ್ತದ ವಿವಿಧ ಆಸ್ಪತ್ರೆಗಳಿಗೆ ಸೇರಿದ ಯುವ ಕಾಂಗ್ರೆ ಕಾರ್ಯಕರ್ತರಿಗೆ ಸರಿಯಾದ ಚಿಕಿತ್ಸೆ ಸಿಕ್ಕಿಲ್ಲ ಎಂದು ಸಚಿವ ಚವಾಣ್ ಆರೋಪಿಸಿದರು.*

*ಜವಾಬ್ದಾರಿಯುತ ಕೇಂದ್ರ ಸಚಿವರ ಇಂಥ ಹೇಳಿಕೆಗಳಿಂದ ಸಮಾಜವಿರೋಧಿ ಶಕ್ತಿಗಳಿಗೆ ಪ್ರೋತ್ಸಾಹ ಸಿಗುತ್ತದೆ. ಅಂಥವರ ಅವಾಂತರಗಳು ಪ್ರಜಾಸತ್ತಾತ್ಮಕ ಚಳುವಳಿ ಎಂಬ ಹಣೆಪಟ್ಟಿ ಪಡೆಯುತ್ತಿದೆ ಎಂದು ಬಸು ಆತಂಕ ವ್ಯಕ್ತಪಡಿಸಿದ್ದಾರೆ.*

*ಪರಿಸ್ಥಿತಿಯ ಖುದ್ದು ವೀಕ್ಷಣೆಗಾಗಿ ಬಂದಿದ್ದ ಚವಾಣ್‌ಗೆ ಮುಖ್ಯಮಂತ್ರಿ ಬಸು ಯುವ ಕಾಂಗ್ರೆನವರು ನಡೆಸಿದ ಗೂಂಡಾಗಿರಿಯನ್ನು ತೋರಿಸುವ ವಿಡಿಯೋ ಕ್ಯಾಸೆಟನ್ನು ಒಪ್ಪಿಸಿದ್ದಾರೆ.*

### ಎಡರಂಗದ ಪ್ರತಿಪ್ರಚಾರ

*ಈ ಮಧ್ಯೆ ಜುಲೈ 21ರ ಘಟನೆ ಹಿನ್ನಲೆಯಲ್ಲಿ ಪಶ್ಚಿಮಬಂಗಾಳದ ಎಡರಂಗ ಸರಕಾರದ ವಿರುದ್ಧ ಸತತವಾಗಿ ಅಪಪ್ರಚಾರವನ್ನು ಆರಂಭಿಸಲಾಗಿದೆ. ಬೂರ್ಜ್ವಾ ಪತ್ರಿಕೆಗಳು ಅದರ ನಾಯಕತ್ವವನ್ನು ವಹಿಸಿವೆ. ಈ ಅಪಪ್ರಚಾರವನ್ನು ಎದುರಿಸಿ ವಾಸ್ತವ ಸ್ಥಿತಿಯನ್ನು ಜನರಿಗೆ ಎದುರಿಸಲು ರಾಜ್ಯ ಸರಕಾರ ಕ್ರಮ ಕೈಗೊಂಡಿದೆ.*

*ಕಲ್ಕತ್ತದಲ್ಲಿ ಏರ್ಪಡಿಸಲಾಗಿರುವ ಛಾಯಾಚಿತ್ರ ಪ್ರದರ್ಶನ ಅದರ ಅಂಗವಾಗಿದೆ. ಯುವ ಕಾಂಗ್ರೆ ಕಾರ್ಯಕರ್ತರು ಚಳವಳಿಯ ಹೆಸರಿನಲ್ಲಿ ಜುಲೈ 21 ರಂದು ನಡೆಸಿದ ದಾಂಧಲೆ, ಹಿಂಸಾಚಾರಗಳನ್ನು ಈ ಫೋಟೋಗಳು ಪರಿಣಾಮಕಾರಿಯಾಗಿ ಬಿಂಬಿಸಿವೆ. ಜುಲೈ, 21 ರ ಘಟನಾವಳಿಗಳನ್ನು ವಿವರಿಸಿ ಕಾಂಗ್ರೆನ ಹೀನ ತಂತ್ರಗಳನ್ನು ಬಯಲುಗೊಳಿಸುವ ಪುಸ್ತಿಕೆಯೊಂದನ್ನು ರಾಜ್ಯ ಸರಕಾರ ಬಿಡುಗಡೆ ಮಾಡಿದೆ. ವಿಡಿಯೋ ಕ್ಯಾಸೆಟ್ ಪ್ರದರ್ಶನವನ್ನು ಏರ್ಪಡಿಸಿದೆ.*

## ಕೈ ಮಗ್ಗ ನೇಕಾರರ ಚಳುವಳಿ ........

ಪುಟ 3ರಿಂದ

ಕೈಮಗ್ಗದ ನೇಕಾರರಿಗೊ ಒಂದು ಕ್ಷೇಮ ನಿಧಿಯನ್ನು ಸ್ಥಾಪನೆಮಾಡಿ ನೇಕಾರರಿಗೆ ವಸತಿಯೋಜನೆ, ಆರೋಗ್ಯ, ನೇಕಾರರ ಮಕ್ಕಳಿಗೆ ಶಿಕ್ಷಣ ಇತ್ಯಾದಿ ಕಾರ್ಯಕ್ರಮಗಳನ್ನು ರೂಪಿಸುವುದಾಗಬೇಕು. ರಾಜ್ಯ ಸರ್ಕಾರವು ಪ್ರಕಟಿಸಲಿರುವ ಸಮಗ್ರ ಜವಳಿ ನೀತಿಯಲ್ಲಿ ಕೈಮಗ್ಗ, ವಿದ್ಯುತ್ ಮಗ್ಗ ಮತ್ತು ಮಿಲ್ಲ್‌ನಲ್ಲಿ ಕೆಲಸ ಮಾಡುವ ನೇಕಾರರ ಕಾರ್ಮಿಕರ ಹಿತಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕು. ಸಮನ್ವಯ ಸಮಿತಿಯ ಎಲ್ಲಾ ಮುಖಂಡರು ಚರ್ಚೆಯಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಉಪಯುಕ್ತ ಸಲಹೆಗಳನ್ನು ನೀಡಿದರು.

### ಮಂತ್ರಿಗಳ ಜಾರಿಗೆ ಉತ್ತರ

ಚರ್ಚೆಗೆ ಉತ್ತರ ನೀಡಿದ ಜವಳಿ ಮಂತ್ರಿಗಳು ಸಮನ್ವಯ ಸಮಿತಿ ಸಲ್ಲಿಸಿದ್ದ 54 ಬೇಡಿಕೆಗಳಲ್ಲಿ ಬಹುತೇಕ ಬೇಡಿಕೆಗಳನ್ನು ತಾತ್ವಿಕವಾಗಿ ಒಪ್ಪಿಕೊಂಡರು. ನೇಕಾರರು ಬಟ್ಟೆಯ ಗುಣಮಟ್ಟವನ್ನು ಉತ್ತಮಪಡಿಸಿ, ತಮ್ಮ ಸಂಪಾದನೆಯನ್ನು ಹೆಚ್ಚಿಸಿಕೊಳ್ಳಬೇಕೆಂದು ಅಭಿಪ್ರಾಯಪಟ್ಟರಾದರೂ ನೇಕಾರರ ತಿಂಗಳ ಸಂಪಾದನೆ ಕನಿಷ್ಠ 1250 ರೂ. ಆಗಬೇಕು ಎಂಬ ಬಗ್ಗೆ ಸಹಮತ ವ್ಯಕ್ತಪಡಿಸಿದರು. ತುಟ್ಟಿಭತ್ಯೆ ಸಹಿತವಾದ ಕನಿಷ್ಠ ವೇತನವನ್ನು ನಿಗದಿಪಡಿಸುವ ಬಗ್ಗೆ ಅವರು ಯಾವುದೇ ಭರವಸೆ ನೀಡಲಿಲ್ಲ. ಸುಪ್ರೀಂ ಕೋರ್ಟಿನ ತೀರ್ಪನ್ನು ಜಾರಿಮಾಡುವುದರಿಂದ ವಿದ್ಯುತ್ ಮಗ್ಗಗಳ ಉತ್ಪಾದನೆಗೆ ಧಕ್ಕೆಯಾಗದಂತೆ ನೋ[illegible]ಳ್ಳಬೇಕಾಗಿದೆ ಎಂದು ಹೇಳಿದರು.

### [illegible]ಸು ಭರವಸೆ

ಭಾರತ ಮಟ್ಟದಲ್ಲಾಗಿದ್ದರೆ [illegible]ನರೂ ನೇಕಾರರ ಕ್ಷೇಮ ನಿಧಿ [illegible] ನೀಡಿದರು. ರಾಜ್ಯದಲ್ಲಿ ನೇಕಾರರಿಗಾಗಿ ಆರಂಭಿಸಲಾದ ಆಶಾ ಜ್ಯೋತಿ ಯೋಜನೆ, ವಸತಿ ಯೋಜನೆ, ಪೊವಲಾದವುಗಳ ಪರತ್ತುಗಳನ್ನು ಸಡಿಲು ಮಾಡಿ ಹೆಚ್ಚೆಚ್ಚು ನೇಕಾರರಿಗೆ ಅವುಗಳ ಪ್ರಯೋಜನ ದೊರೆಯುವಂತೆ ಮಾಡಲಾಗುವುದೆಂದು ಹೇಳಿದರು.

ಜವಳಿ ಮಂತ್ರಿಗಳು ಕೊಟ್ಟ ಇತರ ಭರವಸೆಗಳೆಂದರೆ: ರಾಜ್ಯ ಮಟ್ಟದ ಸಲಹಾ ಸಮಿತಿಯನ್ನು ರಚಿಸುವುದು, ರಾಜ್ಯದ ಕೈಮಗ್ಗ ನೇಕಾರರ ಗಣತಿ ಮಾಡುವುದು, ಚಮಕಾ ಸೇರಿದಂತೆ ಎಲ್ಲ ಬಗೆಯ ನೂಲಿನ ಪೂರೈಕೆಗೆ ಕ್ರಮಕೈಕೊಳ್ಳುವುದು, ಸ್ವಂತ ನಿವೇಶನ ಹೊಂದಿರುವ ನೇಕಾರರಿಗೆ ಕೇಂದ್ರದ ಸಬ್ಸಿಡಿಯೊಂದಿಗೆ ಮನೆ ಕಟ್ಟಲು ಸಾಲ ಒದಗಿಸುವುದು, ಮಗ್ಗ ಇಲ್ಲದ ನೇಕಾರರಿಗೆ ಸಾಮೂಹಿಕ ನೇಯ್ಗೆ ಕೇಂದ್ರಗಳನ್ನು ಪ್ರಾರಂಭಿಸುವುದು, ಕ್ಷಯ ಮೊದಲಾದ ರೋಗಗಳಿಂದ ನರಳುತ್ತಿರುವ ನೇಕಾರರಿಗೆ ಕೇಂದ್ರದ ಯೋಜನೆಯ ಅಡಿಯಲ್ಲಿ ಚಿಕಿತ್ಸೆಗಾಗಿ ನೆರವು ಒದಗಿಸುವುದು, ಸ್ವಂತ ಮನೆ ಹೊಂದಿರುವ ನೇಕಾರರಿಗೆ ಮಗ್ಗಕ್ಕಾಗಿ ಪ್ರತ್ಯೇಕಕೋಣೆ ಕಟ್ಟಲು 6000 ರೂ. ಸಬ್ಸಿಡಿ ಕೊಡುವುದು ಸರಳೀ ಕೃತ ನೇಕಾರರ ತ್ರಿಫ್ಟ್ ಫಂಡ್ ಯೋಜನೆಗೆ ಸರ್ಕಾರದ ಮಂಜೂರಾತಿ ದೊರಕಿಸುವುದು, ವಿಶ್ವ ಯೋಜನೆಯ ಅಡಿಯಲ್ಲಿ ಮಗ್ಗಗಳನ್ನು ಅಳವಡಿಸುವ ಯೋಜನೆಯ ಷರತ್ತುಗಳನ್ನು ಸಡಿಲು ಮಾಡುವುದು, ಸ್ವಂತ ಮಗ್ಗವನ್ನು ಹೊಂದಿರುವ ಅಥವಾ ಮಗ್ಗಗಳನ್ನು ಸ್ವಂತವಾಗಿ ಸಿದ್ಧಪಡಿಸಿಕೊಳ್ಳುವ ನೇಕಾರರಿಗೆ ದುಡಿಯುವ ಬಂಡವಾಳವನ್ನು ಮಾತ್ರ ಸಾಲರೂಪದಲ್ಲಿ ಒದಗಿಸುವುದು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ಕಟಬಾಕಿ ಪ್ರಕರಣಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ ಅರ್ಹ ನೇಕಾರರಿಗೆ ಪುನಃ ಉದ್ಯೋಗ ಕೊಡುವುದು. ಮರಣಹೊಂದಿದ ನೇಕಾರನ ಖಾತೆಯನ್ನು ಅವನ ಕುಟುಂಬದ ಸದಸ್ಯನಿಗೆ ವರ್ಗಾಯಿಸುವುದು, ಅಪತ್ಕಾಲದಲ್ಲಿ ನೆರವಾಗಲು ನೇಕಾರನಿಗೆ ನಿಗಮದಿಂದ ಬಡ್ಡಿರಹಿತ ಮುಂಗಡವನ್ನು ಒದಗಿಸುವುದು, ನಿಗಮದ ಸಿಬ್ಬಂಧಿ ಸ್ಥಾನಗಳನ್ನು ತುಂಬುವಾಗ ನೇಕಾರರ ಅರ್ಹಮಕ್ಕಳಿಗೆ ಆದ್ಯತೆ ನೀಡುವುದು, ರಬಕವಿ, ಬನಹಟ್ಟಿ ಮೊದಲಾದ ಕಡೆಗಳಲ್ಲಿ ನೇಕಾರರ ಬಗರ್ ಹುಕುಂ ನಿವೇಶನಗಳನ್ನು ಸಕ್ರಮಗೊಳಿಸುವಾಗ ನೇಕಾರರ ಸಾಮರ್ಥ್ಯವನ್ನು ಗಣನೆಗೆಗೆ ತೆಗೆದುಕೊಂಡು ಹೊರೆಯಾಗದ ದಂಡವನ್ನು ವಸೂಲಿ ಮಾಡುವುದು ಮತ್ತು ಮನೆಕಟ್ಟಿಸುವ ಯೋಜನೆಯನ್ನು ಅಳವಡಿಸುವಾಗ ಅವಶ್ಯಕ ದಾಖಲೆಗಳನ್ನು ನಿಗಮವೇ ದೊರಕಿಸುವುದು.

ಈ ಭರವಸೆಗಳಲ್ಲದೆ ವಯಸ್ಸಾದ ನೇಕಾರರಿಗೆ ಅಂಶದಾನದ ನಿವೃತ್ತಿವೇತನ ಯೋಜನೆಯನ್ನು ರೂಪಿಸುವ ಬಗ್ಗೆ ನೇಕಾರರ ಮುಖಂಡರು ಸಲಹೆ ನೀಡಬೇಕೆಂದು ಸಚಿವರು ಸೂಚಿಸಿದರು. ನಿಗಮದ ನೇಕಾರರ ಕೂಲಿ ಹೆಚ್ಚಳದ ಬಗ್ಗೆ ನಿಗಮದ ಅಧಿಕಾರಿಗಳೊಂದಿಗೆ ಪ್ರತ್ಯೇಕ ಚರ್ಚೆಯೊಂದನ್ನು ಸಚಿವರು ಏರ್ಪಡಿಸಿದ್ದರು. ಸಮನ್ವಯ ಸಮಿತಿಯ ಪರವಾಗಿ ಶೇಕಡ 50 ರಷ್ಟು ಕೂಲಿ ಹೆಚ್ಚಳದ ನಿರ್ದಿಷ್ಟ ಸೂಚನೆಗಳನ್ನು ಕೊಡಲಾಗಿದ್ದು ಪರಿಷ್ಕೃತ ಕೂಲಿದರಗಳು ಆಗಸ್ಟ್ 1 ರಿಂದ ಜಾರಿಗೆ ಬರುವುದಾಗಿ ಹೇಳಲಾಗಿದೆ.

ಶ್ರೀಯುತ ಎಚ್.ಕೆ. ಪಾಟೀಲರು ಕೊಟ್ಟ ಭರವಸೆಗಳು ತನ್ನಷ್ಟಕ್ಕೆ ತಾವೇ ಈಡೇರುತ್ತವೆ ಎಂದು ರಾಜ್ಯದ ನೇಕಾರರು ಯಾರೂ ತಿಳಿಯಬಾರದೆಂದು ಸಮನ್ವಯ ಸಮಿತಿ ಎಚ್ಚರಿಸಿದೆ. ತಾವು ಸತತವಾಗಿ ಎಚ್ಚರವಾಗಿದ್ದು, ನಮ್ಮ ಸಂಘಟನೆಯನ್ನು ವಿಸ್ತರಿಸುತ್ತಾ ಹಾಗೂ ಗಟ್ಟಿಗೊಳಿಸುತ್ತಾ ಸರ್ಕಾರದ ಮೇಲೆ ಸತತವಾದ ಒತ್ತಡ ಹೇರುತ್ತಾ ಇದ್ದರೆ ಮಾತ್ರ ನಮ್ಮ ಮುನ್ನಡೆ ಸಾಧ್ಯ ಎಂದಿದೆ.

●

## ಮಹಿಳಾ ಸಂಘಟನೆ ಚಿಂಚೋಳಿ ತಾಲೂಕು ಸಮ್ಮೇಳನ

**ಚಿಂಚೋಳಿ:** ಜನವಾದಿ ಮಹಿಳಾ ಸಂಘಟನೆಯ ಚಿಂಚೋಳಿ ತಾಲೂಕು ಸಮ್ಮೇಳನ ದಿನಾಂಕ ಆಗಸ್ಟ್ 2, 1993 ರಂದು ತಾಲೂಕಿನ ಚಂದಾಪುರ ಪದವಿ ಪೂರ್ವ ವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು.

ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಕ್ಷೇತ್ರಾಭಿವೃದ್ಧಿ ಅಧಿಕಾರಿಯವರು ಮಹಿಳೆಯರು ಸಾಕ್ಷರರಾಗಿ ಮಹಿಳೆಯರಿಂದಲೇ ಮಹಿಳೆಯರ ಮೇಲಾಗುತ್ತಿರುವ ಶೋಷಣೆ ತಪ್ಪಿಸಬೇಕೆಂದು ಕಾಲೇಜಿನ ಪ್ರಾಚಾರ್ಯರಾದ ಕಂಟಪ್ಪಾ ಮಾಸ್ತರ್ ಮಾತನಾಡಿ ಸಂವಿಧಾನದಲ್ಲಿ ಮಹಿಳೆಯರಿಗಾಗಿ ಸೌಲಭ್ಯವಿದ್ದರೂ ಪಡೆಯಲು ಆಗುತ್ತಿಲ್ಲ ಎಂದರು. ಯುವ ಬರಹಗಾರರಾದ ಎನ್.ಎನ್. ದಂಡಿನ ಕುಮಾರ್ ಮಾತನಾಡಿ ಸಂಪ್ರದಾಯದ ನಾಲ್ಕು ಗೋಡೆಗಳ ಮಧ್ಯದಿಂದ ಹೊರಬಂದು ಮಹಿಳೆಯರನ್ನು ಸಂಘಟಿಸಿ ಸೇರುವುದು ಅತ್ಯಂತ ಕಷ್ಟಕರವಾದ ಇಂದಿನ ಪರಿಸ್ಥಿತಿಯಲ್ಲಿ ಜಾತೀಯ ಧರ್ಮದ ಹೆಸರಿನಲ್ಲಿ ಎಷ್ಟೋ ಸಂಘಟನೆಗಳನ್ನು ರಚಿಸಿಕೊಂಡಿದ್ದರೂ ಜನಪರವಾದ ಹೋರಾಟ ನಡೆಸಲು ನಿಷ್ಕ್ರೀಯಗೊಂಡಿವೆ ಎಂದರು. ರೈತ ಮುಖಂಡರಾದ ರಾಜಶೇಖರ ಮುಕರಂಭಿ ಮಾತನಾಡಿ ಜನವಾದಿ ಮಹಿಳಾ ಸಂಘಟನೆಯು ಮಹಿಳೆಯರ ಸಮಸ್ಯೆಗಳಿಗಾಗಿ ಹೋರಾಟ ನಡೆಸಿ ಅವರ ಕೊರಳ ದನಿಯಾಗಿ ಅನೇಕ ಸಾಧನೆಗಳನ್ನು ತನ್ನದಾಗಿಸಿಕೊಂಡ ಅಗ್ರಮಾನ್ಯ ಸಂಘಟನೆಯಾಗಿದೆಯೆಂದರು. ಮಹಾಲಿತೇಶ ಕಟ್ಟಿಮನಿ ಲತೀಫ, ಬಾಜಿ, ಮುಂತಾದ ಮುಖಂಡರು ಭಾಗವಹಿಸಿದ್ದರು.

ತುಂತುರು ಮಳೆಯನ್ನೂ ಲೆಕ್ಕಿಸದೆ ಹಲವಾರು ಹಳ್ಳಿಗಳಿಂದ ಬಂಥ 200 ಕ್ಕಿಂತ ಹೆಚ್ಚು ಹಿಂದು-ಮುಸ್ಲಿಂ ಮಹಿಳೆಯರು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಜನವಾದಿ ಮಹಿಳಾ ಸಂಘಟನೆಯ ತಾಲೂಕು ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆಮಾಡಿತು. ಅಧ್ಯಕ್ಷರಾಗಿ ಕುಮಾರಿ ಸಜೇದಾ ಬೇಗಂ. ಉಪಾಧ್ಯಕ್ಷರಾಗಿ ಕಲಾವತಿ ವಠಪತಿ, ಸುಂದರಮ್ಮ ಸಂದಾಪುರ, ಕಾರ್ಯದರ್ಶಿಯಾಗಿ ಕುಮಾರಿ ಮಾಹಂತೇಶ್ವರಿ ಜಾಬಶೆಟ್ಟಿ ಆಯ್ಕೆಗೊಂಡರು. ಅಲ್ಲದೆ 30 ಮಹಿಳೆಯರ ಕಾರ್ಯಕಾರಿ ಸಮಿತಿರಚಿಸಲಾಯಿತು. ಚಂದ್ರಪುರ ಗ್ರಾಮದಲ್ಲಿ ಅಗರಬತ್ತಿ ಉತ್ಪತ್ತಿ ಕೇಂದ್ರ ಪ್ರಾರಂಭಿಸಬೇಕು, ಟೇಲರಿಂಗ್ ತರಬೇತಿ ಪಡೆದ ಮಹಿಳೆಯರಿಗೆ ಸಾಲಸೌಲಭ್ಯ ಒದಗಿಸಿಕೊಡಬೇಕು, ಐನಾಪುರ ಗ್ರಾಮದಲ್ಲಿ ಅಗರಬತ್ತಿ ಮತ್ತು ಟೇಲರಿಂಗ್ ತರಬೇತಿ ಕೇಂದ್ರ ಸ್ಥಾಪಿಸಬೇಕು ಎಂದು ಸಮ್ಮೇಳನ ಆಗ್ರಹಿಸಿದೆ. ಸಮ್ಮೇಳನ ಸರ್ವಾನುಮತದಿಂದ ನಿರ್ಣಯವನ್ನು ಅಂಗೀಕರಿಸಿತು. ಕುಮಾರಿ ಸಾವಿತ್ರಿ ಧನ್ಯವಾದ ಅರ್ಪಿಸಿದರು.

**ಯುರೋಪಿಯನ್** ವಿನಿಮಯ ದರ ಪದ್ಧತಿ ಪುನಃ ಬಿಕ್ಕಟ್ಟಿಗೆ ಸಿಕ್ಕಿದೆ. ಫ್ರಾನ್ಸ್‌ನ ನಾಣ್ಯ ಫ್ರಾಂಕ್‌ನ ಬೆಲೆ ಮಾರುಕಟ್ಟೆಯಲ್ಲಿ ವಿಪರೀತವಾಗಿ ಬಿದ್ದದ್ದರಿಂದ ಹಾಗೂ ಜರ್ಮನ್ ಬ್ಯಾಂಕ್ ತನ್ನ ಬಡ್ಡಿ ದರ ಕಡಿಮೆ ಮಾಡಲು ತಯಾರಿಲ್ಲದ್ದರಿಂದ ಈ ಪದ್ಧತಿಯಲ್ಲಿ ಭಾರಿ ಬದಲಾವಣೆ ಮಾಡಬೇಕಾಗಿ ಬಂದಿದೆ. ಒಂದೇ ನಾಣ್ಯ ಹಾಗೂ ಆರ್ಥಿಕ ಸಮಗ್ರೀಕರಣಕ್ಕೆ ಈ ಪದ್ಧತಿ ಮೊದಲ ಹೆಜ್ಜೆ ಎಂದು ಪರಿಗಣಿಸಲಾಗುತ್ತಿತ್ತು.

**ಅಮೇರಿಕಾದಲ್ಲಿ** ಅಧ್ಯಕ್ಷ ಕ್ಲಿಂಟನ್‌ರ ಬಜೆಟ್ ಕಾಂಗ್ರೆಸ್‌ನಲ್ಲಿ ಕೇವಲ 2 ಮತಗಳಿಂದ ಸೆನೆಟ್‌ನಲ್ಲಿ ಕೇವಲ 1 ಮತದಿಂದ ಮಂಜೂರಾಗಿದೆ. ಬಜೆಟ್ ಸೋಲದಂತೆ ತಡೆಯಲು ಕ್ಲಿಂಟನ್ ತಮ್ಮ ಬಜೆಟ್‌ನಲ್ಲಿ ಬಹಳಷ್ಟು ಬದಲಾವಣೆ ಮಾಡಬೇಕಾಯಿತು. ಹಲವಾರು ಸಾಮಾಜಿಕ ಕಾರ್ಯಕ್ರಮಗಳ, ಬಡವರಿಗೆ ವೈದ್ಯಕೀಯ ಸೇವಾ ಯೋಜನೆಗಳಲ್ಲಿ ತೀವ್ರ ಕಡಿತ ಮಾಡಬೇಕಾಯಿತು. ಬಜೆಟ್‌ನಲ್ಲಿ ತೀವ್ರ ತೆರಿಗೆ ಏರಿಕೆ ಹಾಗೂ ಸರ್ಕಾರಿ ವೆಚ್ಚದ ಕಡಿತದ ಪ್ರಸ್ತಾಪಗಳಿವೆ.

**ಲೆಬನಾನ್**ನಲ್ಲಿ ಇಸ್ರೇಲ್ 1 ವಾರದ ನಂತರ ತನ್ನ ದಾಳಿ ಏಕಪಕ್ಷೀಯವಾಗಿ ನಿಲ್ಲಿಸಿದೆ. ದಕ್ಷಿಣ ಲೆಬನಾನ್‌ನಲ್ಲಿ ಬೇಕಾಬಿಟ್ಟಿ ನಾಶ, ನಿರಾಶ್ರಿತ ಸಮಸ್ಯೆ ಸೃಷ್ಟಿಸಿದ್ದಲ್ಲದೆ, ರಾಜಕೀಯವಾಗಿ ಅದು ಏನನ್ನೂ ಗೆಲ್ಲಲಿಲ್ಲ. ಹಿಜಬೊಲ್ಲಾ ಮೂಲಭೂತವಾದಿ ಗುಂಪನ್ನು ಹದ್ದುಬಸ್ತಿನಲ್ಲಿಡುವ ಬಗ್ಗೆ ಲೆಬನಾನ್ ಸರ್ಕಾರ ಆಶ್ವಾಸನೆ ಕೊಡುವಂತೆ ಮಾಡುವುದು ಹಾಗೂ ಜನತೆಯನ್ನು ಹಿಜಬೊಲ್ಲಾ ಗೆರಿಲ್ಲಾಗಳ ವಿರುದ್ಧ ತಿರುಗಿಸುವದು ದಾಳಿಯ ರಾಜಕೀಯ ಉದ್ದೇಶವಾಗಿತ್ತು. ಇವೆರಡೂ ಸಾಧ್ಯವಾಗದೆ ಇಸ್ರೇಲ್ ಅಮೇರಿಕನ್ ಒತ್ತಡದಿಂದ ಏಕಪಕ್ಷೀಯವಾಗಿ ದಾಳಿ ನಿಲ್ಲಿಸಬೇಕಾಯಿತು. ದಕ್ಷಿಣ ಲೆಬನಾನ್ ಒಂದು ಪ್ರದೇಶವನ್ನು ಆಕ್ರಮಿಸಿಕೊಂಡಿರುವ ಇಸ್ರೇಲ್ ವಿಶ್ವಸಂಸ್ಥೆ ನಿರ್ಣಯ ಸಂಖ್ಯೆ 425 ಪಾಲಿಸುವವರೆಗೆ ಈ ರೀತಿಯ ಹುಚ್ಚು ಸಾಹಸದಿಂದ ಅವಮಾನಕ್ಕೊಳಬೇಕಾಗುತ್ತದೆ ಅಷ್ಟೇ. ಈ ದಾಳಿಯಿಂದಾಗಿ ಅಮೇರಿಕಾ ಪಶ್ಚಿಮ ಏಷ್ಯಾ ಶಾಂತಿ ಮಾತುಕತೆಗಳನ್ನು ಪುನರುಜ್ಜೀವನಗೊಳಿಸುವುದು ಕಷ್ಟವಾಗಿದೆ.

ಶರತ್ ಚಂದ್ರ

## ಯುರೋಪಿಯನ್ ಒಕ್ಕೂಟದಲ್ಲಿ ತೊಡಕುಗಳು
# ಹಣದಬೆಲೆಗಾಗಿ ಫ್ರಾನ್ಸ್ - ಜರ್ಮನಿ ಕಿತ್ತಾಟ

ಪಶ್ಚಿಮ ಯುರೋಪಿನ್ 12 ದೇಶಗಳು ಹಂತ ಹಂತವಾಗಿ ಆರ್ಥಿಕ, ರಾಜಕೀಯ ಮಿಲಿಟರಿ ಒಕ್ಕೂಟದತ್ತ ಸಾಗುವ ಬಗ್ಗೆ ಕಳೆದ ವರ್ಷ ಹಾಲೆಂಡ್‌ನ ಮ್ಯಾಸ್‌ಟ್ರಿಕ್ಟ್ ಎಂಬ ಪಟ್ಟಣದಲ್ಲಿ ಚಾರಿತ್ರಿಕ ಒಪ್ಪಂದಕ್ಕೆ ಸಹಿ ಹಾಕಿದ್ದರು. ಆರ್ಥಿಕ ಒಕ್ಕೂಟ ರಚಿಸುವ ಹಾದಿಯಲ್ಲಿ ವಿನಿಮಯ ದರದ ಬಗ್ಗೆ ಒಂದು ಪದ್ಧತಿ ಜಾರಿಗೆ ಬಂದಿತ್ತು. ಇದನ್ನು ವಿನಿಮಯ ದರವ್ಯವಸ್ಥೆ **Exchange Rate Mechanism (ERM)** ಎಂದು ಕರೆಯುತ್ತಾರೆ. ಈ ಪದ್ಧತಿಯ ಪ್ರಕಾರ ಈ 12 ದೇಶಗಳ ನಾಣ್ಯಗಳ ವಿನಿಮಯದರದ ಮಾರುಕಟ್ಟೆ ಬೆಲೆ ಎರಡೂ ಕಾಲು ಶೇಕಡಾಕ್ಕಿಂದ ಹೆಚ್ಚು ಅಥವಾ ಕಡಿಮೆ ಆಗದಂತೆ ನೋಡಿಕೊಳ್ಳಬೇಕೆಂದು ಕಟ್ಟುಪಾಡು ಇದೆ. ಆದರೆ ಈಗ ಜರ್ಮನ್ ನಾಣ್ಯ ಮಾರ್ಕ್‌ನ ಬೆಲೆ ಉಳಿದ ನಾಣ್ಯಗಳಿಗಿಂತ ವಿಪರೀತ ಹೆಚ್ಚು. ಜರ್ಮನ್ ಆರ್ಥಿಕ ಬಲಾಢ್ಯತೆ ಹಾಗೂ ಇತ್ತೀಚೆಗೆ ಅಲ್ಲಿ ಹೆಚ್ಚಿನ ಬಡ್ಡಿದರ ಇದಕ್ಕೆ ಕಾರಣ. ಕಳೆದ ವಾರ ನಾಣ್ಯದ ವಿನಿಮಯದರದ ಬಗ್ಗೆ ಸಟ್ಟಾ ವ್ಯಾಪಾರದಿಂದ ಫ್ರಾನ್ಸ್‌ನ ನಾಣ್ಯ ಫ್ರಾಂಕ್ ಬೆಲೆ ವಿಪರೀತ ಕಡಿಮೆಯಾಗಿ ಬಿಕ್ಕಟ್ಟು ಉಂಟಾಯಿತು. ಇ.ಆರ್.ಎಮ್ ಪದ್ಧತಿ ಫ್ರಾಂಕ್‌ನ ರಕ್ಷಣೆಗೆ ಬರಬೇಕಾಗಿತ್ತು. ಅದರಲ್ಲೂ ಜರ್ಮನ್ ಬ್ಯಾಂಕ್ ಬಡ್ಡಿದರವನ್ನು ತಾತ್ಕಾಲಿಕವಾಗಿಯಾದರೂ ಇಳಿಸಿದ್ದರೆ, ಫ್ರಾಂಕ್ ತಹಬಂದಿಗೆ ಬರುತ್ತಿತ್ತು. ಆದರೆ ಜರ್ಮನ್ ಬ್ಯಾಂಕ್, ಫ್ರೆಂಚ್ ಸರಕಾರ ಪದೇ ಪದೇ ಕೇಳಿದರೂ, ಹಾಗೆ ಮಾಡಲು ನಿರಾಕರಿಸಿತು. ಇದರಿಂದ ಫ್ರಾಂಕ್ ಬಿಕ್ಕಟ್ಟು ತೀವ್ರವಾಯಿತು. ತುರ್ತು ಸಭೆ ಸೇರಿದ 12 ದೇಶಗಳ ಸಭೆ ಇ.ಆರ್.ಎಮ್. ಪದ್ಧತಿಯನ್ನೇ ಬದಲಾಯಿಸಲು ತೀರ್ಮಾನಿಸಿತು. ಈ ಪದ್ಧತಿ ಪ್ರಕಾರ ವಿವಿಧ ನಾಣ್ಯಗಳ ವಿನಿಮಯ ದರದ ಮಾರುಕಟ್ಟೆ ಬೆಲೆ ಶೇಕಡ 15 ರವರೆಗೆ ಹೆಚ್ಚು ಕಡಿಮೆ ಆಗಬಹುದು. ಇದು ಹೆಚ್ಚು ಕಡಿಮೆ ಇ.ಆರ್.ಎಮ್ ಪದ್ಧತಿಯನ್ನೇ ಕಳಚಿಹಾಕಿದಂತೆ. ವಿವಿಧ ನಾಣ್ಯಗಳ ವಿನಿಮಯದರದ ವ್ಯತ್ಯಾಸ ಶೇಕಡಾ ಎರಡು ಕಾಲಕ್ಕಿಳಿಸುವುದು ಮುಂದೆ ಇಡೀ ಯುರೋಪಿಗೆ ಒಂದೇ ನಾಣ್ಯ ಜಾರಿಗೆ ತರುವತ್ತ ಮೊದಲು ಹೆಜ್ಜೆಯಾಗಿತ್ತು. ಈ ಹೆಜ್ಜೆ ಹಿಂದಿಡಬೇಕಾದ್ದು ಆರ್ಥಿಕ ಒಕ್ಕೂಟದತ್ತ ಚಲನೆಯಲ್ಲಿಯೂ ಹಿನ್ನಡೆಯೇ.

ಕಳೆದ ವರ್ಷ ಸೆಪ್ಟೆಂಬರಿನಲ್ಲಿ ಇದೇ ರೀತಿಯ ಗತಿ ಬ್ರಿಟಿಷ್ ಪೌಂಡ್‌ಗೆ ಬಂದಿದ್ದಾಗ ಬ್ರಿಟಿಷ್ ಸರಕಾರ ಇ.ಆರ್.ಎಮ್ ಪದ್ಧತಿಯಿಂದ ಹೊರಬರಲು ನಿರ್ಧರಿಸಿತ್ತು. ಈಗ ಹಾಲಂಡ್ ಬಿಟ್ಟರೆ ಉಳಿದೆಲ್ಲಾ ದೇಶಗಳು ಹೊಸ ಇ.ಆರ್.ಎಮ್. ಪದ್ಧತಿ (ಶೇಕಡಾ 15 ವ್ಯತ್ಯಾಸ) ಅನುಸರಿಸಲಿವೆ.

ಈ ಬಿಕ್ಕಟ್ಟಿನಿಂದಾಗಿ ಯುರೋಪಿಯನ್ ಒಕ್ಕೂಟದ ಪ್ರಬಲ ಬೆಂಬಲಿಗರು ಹಾಗೂ ಅದರ ಕೇಂದ್ರವಾಗಿದ್ದ ಜರ್ಮನಿ ಹಾಗೂ ಫ್ರಾನ್ಸ್‌ಗಳ ಮಧ್ಯೆ ವಿರಸ ಮೂಡಿದೆ.

ಯುರೋಪಿನ ಆರ್ಥಿಕ, ರಾಜಕೀಯ, ಒಕ್ಕೂಟ ಅಲ್ಲಿನ ಗುತ್ತೇದಾರಿ ಬಂಡವಾಳಶಾಹಿಗಳ ಕನಸು. ಅಮೇರಿಕ, ಜಪಾನ್‌ಗೆ ಸರಿಸಾಟಿಯಾಗಲು, ಇನ್ನೊಂದು ಸಾಮ್ರಾಜ್ಯಶಾಹಿ ಕೇಂದ್ರ ರಚಿಸುವ ಹುನ್ನಾರ, ಈ ಪ್ರಯತ್ನದಲ್ಲಿ ಇತರ ಜನವಿಭಾಗಗಳ ಮೇಲಿನ ಪರಿಣಾಮದ ಬಗ್ಗೆ ಅವರಿಗೆ ಕಾಳಜಿ ಇಲ್ಲ. ಈ ಆರ್ಥಿಕ ಬಿಕ್ಕಟ್ಟು ಹಾಗೂ ಪ್ರಬಲವಾದ ರಾಷ್ಟ್ರೀಯ ಭಾವನೆಗಳು ಈ ಪ್ರಕ್ರಿಯೆ ಅಷ್ಟು ಸುಲಭವಲ್ಲ ಎಂದು ತೋರಿಸಿಕೊಟ್ಟಿವೆ. ಇ.ಆರ್.ಎಮ್. ಪದ್ಧತಿಯ ಬಿಕ್ಕಟ್ಟು ಇದರ ಒಂದು ರೂಪ.

## ಬಾಂಗ್ಲಾದೇಶ ಕಮ್ಯುನಿಸ್ಟ್ ಪಕ್ಷದಲ್ಲಿ ಮಾರ್ಕ್ಸ್‌ವಾದಕ್ಕಾಗಿ ಹೋರಾಟ

ಬಾಂಗ್ಲಾದೇಶ ಕಮ್ಯುನಿಸ್ಟ್ ಪಕ್ಷದೊಳಗೆ ಎದ್ದ ತೀವ್ರ ಭಿನ್ನಾಭಿಪ್ರಾಯಗಳು, ಕೊನೆಗೆ ಎರಡು ಪ್ರತ್ಯೇಕ ವಿಶೇಷ ಕಾಂಗ್ರೆಸ್ ಹಾಗೂ ಪ್ರತ್ಯೇಕ ಪಕ್ಷಗಳಿಗೆ ಎಡೆಮಾಡಿಕೊಟ್ಟಿದೆ.

ಭಿನ್ನಾಭಿಪ್ರಾಯ ತಲೆದೋರಿದ್ದು ಸೋವಿಯೆಟ್ ವಿಘಟನೆಯ ಹಿನ್ನೆಲೆಯಲ್ಲಿ ಪಕ್ಷದ ಸಿದ್ಧಾಂತದ, ಸಂವಿಧಾನ, ಕಾರ್ಯಕ್ರಮದ ಬಗ್ಗೆ ನಡೆದ ಚರ್ಚೆಯಲ್ಲಿ ಪಕ್ಷದ ವಿಭಾಗವೊಂದು ಪಕ್ಷವನ್ನು ಬದಲಾಯಿಸುವ ಹೆಸರಲ್ಲಿ ವರ್ಗ ಹೋರಾಟ, ಕಾರ್ಮಿಕ ವರ್ಗದ ಸರ್ವಾಧಿಕಾರ ಮುಂತಾದ ಪರಿಕಲ್ಪನೆಗಳನ್ನು, ಹೆಸರು, ಸಂಕೇತಗಳ, ಸ್ವರೂಪಗಳನ್ನು ಬಿಟ್ಟುಕೊಡಬೇಕೆಂದು ವಾದಿಸಿತ್ತು. 'ಮಾರ್ಕ್ಸ್‌ವಾದಿ' ಎಂದು ಕರೆದು ಕೊಳ್ಳುವ ಗುಂಪೊಂದು ಇದನ್ನು ವಿರೋಧಿಸಿ ಪಕ್ಷದ ಮಾರ್ಕ್ಸ್‌ವಾದ ಸಿದ್ಧಾಂತ, ಹೆಸರು, ಸಂಕೇತ ಬದಲಾಯಿಸದಿರುವುದಕ್ಕೆ ಬೆಂಬಲವಾಗಿತ್ತು. 5 ನೇ ಮಹಾಧಿವೇಶನದ ಮೊದಲು, ಅಧಿವೇಶನದಲ್ಲೂ ಈ ಎರಡೂ ನೀತಿಗಳ ನಡುವೆ ತೀವ್ರ ಘರ್ಷಣೆ ನಡೆಯಿತು. 5 ನೇ ಮಹಾಧಿವೇಶನದಲ್ಲಿ ಮಾರ್ಕ್ಸ್‌ವಾದಿ ಗುಂಪು ಕೇಂದ್ರ ಸಮಿತಿಯಲ್ಲಿ ಅಲ್ಪ ಸಂಖ್ಯಾತವಾಯಿತು. ಆದರೆ ಸಾಮಾನ್ಯ ಸದಸ್ಯರಲ್ಲಿ ಭಾರಿ ಬೆಂಬಲ ಅದಕ್ಕಿತ್ತು.

ಭಿನ್ನಾಭಿಪ್ರಾಯ ಮುಂದುವರೆದು ಮಾರ್ಕ್ಸ್‌ವಾದಿ ಗುಂಪು ಇದನ್ನು ಪರಿಹರಿಸಲು ಪಕ್ಷ 'ವಿಶೇಷ ಮಹಾಧಿವೇಶನ' ನಡೆಸಲು ಒತ್ತಾಯಿಸಿದರೆ, ಇನ್ನೊಂದು ಬಣ ಪ್ರತ್ಯೇಕ ಮಹಾಧಿವೇಶನ ನಡೆಸಲು ನಿರ್ಧರಿಸಿತು. ಪ್ರತ್ಯೇಕ ಮಹಾಧಿವೇಶನ ನಡೆಸುವ ಮೂಲಕ ಪಕ್ಷ ಇಬ್ಭಾಗವಾದಂತೆ ಆಗಿದೆ.

## ವಿಶ್ವ ಸಂಸ್ಥೆಗೆ ಈ ಹಸಿವು ಕಾಣುವುದಿಲ್ಲವೆ!

- ಉಚ್ಚವರ್ಗದ ಕಾಲೊನಿಯೊಂದರಲ್ಲಿ ದಂಪತಿಗಳು ಬೆಳಿಗ್ಗೆ ಎದ್ದು ನೋಡಿದಾಗ ರೆಫ್ರಿಜರೇಟರ್ ಖಾಲಿಯಾಗಿತ್ತು. ಹೆಂಡತಿ ಗಾಬರಿಯಾದಳು. ಏಕೆಂದರೆ ಆಕೆ ತನ್ನ ಆಭರಣಗಳನ್ನು ಅಲ್ಲಿ ಇಟ್ಟಿದ್ದಳು. ಆದರೆ ಮರುದಿನ ಬೆಳಿಗ್ಗೆ ಇನ್ನೊಂದು ಆಶ್ಚರ್ಯಕಾದಿತ್ತು. ಆಭರಣಗಳನ್ನು ಪೊಟ್ಟಣವೊಂದರಲ್ಲಿ ಹೊಸ್ತಿಲಲ್ಲಿ ಇಡಲಾಗಿತ್ತು. ಅದರ ಜತೆ ಚೀಟಿಯೊಂದು ಇತ್ತು 'ನಾವು ಕಳ್ಳರಲ್ಲ, ಆದರೆ ನಮಗೆ ಆಹಾರಬೇಕಾಗಿತ್ತು.'
- ಆಸ್ಪತ್ರೆಯೊಂದಕ್ಕೆ ತಾಯಿಯೊಬ್ಬಳು ತನ್ನ 7 ವರ್ಷದ ಮಗನನ್ನು ಕಾಮಾಲೆ ರೋಗಕ್ಕೆ ಚಿಕಿತ್ಸೆಗಾಗಿ ಸೇರಿಸಿದಳು. ಮಗುವಿನ ಬಟ್ಟೆ ತರುತ್ತೇನೆಂದು ಹೋದವಳು ಹಿಂದುರಿಗೆ ಬರಲೇ ಇಲ್ಲ.
- ಇನ್ನೊಂದು ಆಸ್ಪತ್ರೆಯಲ್ಲಿ ಮಗುವನ್ನು ಹಡೆದ ತಾಯಿ ಮರುದಿನ ನಾಪತ್ತೆಯಾಗಿದ್ದಳು. ಮಗುವನ್ನು ಅದರ ಪಾಡಿಗೆ ಬಿಟ್ಟು ಆಕೆಯೂ ಹಿಂದಿರುಗಲೇ ಇಲ್ಲ.

ಈ ಮೂರು ಘಟನೆಗಳು ಬಾಗ್ದಾದ್‌ನಲ್ಲಿ ಈ ತಿಂಗಳು ನಡೆದವು. ಇವು ಅಲ್ಲೊಂದು ಇಲ್ಲೊಂದು ಘಟನೆಗಳಲ್ಲ. ಇಂತಹ ಘಟನೆಗಳು ದಿನಾ ನಡೆಯುತ್ತಿವೆ. ಆಹಾರದ ಕಳ್ಳತನದ ಘಟನೆಗಳು ದಿನೇ ವರದಿಯಾಗುತ್ತಿವೆ. ಪ್ರತಿದಿನ ಆಸ್ಪತ್ರೆಯಲ್ಲಿ ಸರಾಸರಿ ಮೂರು ಮಕ್ಕಳ್ನು ತ್ಯಜಿಸಿ ಹೋಗುವ ಘಟನೆಗಳು ವರದಿಯಾಗುತ್ತಿವೆ.

ಇದು ಬಾಗ್ದಾದ್ ಬಲ್ಲವರಿಗೆ ದಂಗುಬಡಿಸುವ ಘಟನೆಗಳು. ಬಾಗ್ದಾದ್‌ನಲ್ಲಿ ಎಂದೂ ಹೀಗಾದ್ದಿಲ್ಲ. ಸದ್ದಾಂ ಹುಸೇನನ್ನು ದೈತ್ಯನಾಗಿ ಚಿತ್ರಿಸಬಯಸುವವರಿಗೆ ಆತನ 'ರಾಕ್ಷಸ ಆಡಳಿತ'ದ ಫಲ ಇದು ಎಂದನಿಸಿರಬಹುದು. ಸಾಮ್ರಾಜ್ಯಶಾಹಿ ಪತ್ರಿಕೆಗಳಿಗೆ ವಿಶ್ವಸಂಸ್ಥೆಯ ಅಣ್ವಸ್ತ್ರ ತಪಾಸಣೆಗೆ ಅಡೆತಡೆ ಬಿಟ್ಟರೆ ಇನ್ನೇನೂ ಸುದ್ದಿ ಕಾಣಬರುವುದಿಲ್ಲ.

ಆದರೆ ಮೂರು ವರ್ಷಗಳ ಆಹಾರ ದಿಗ್ಬಂಧನ ಕಂಡಿರುವ ಇರಾಕಿಗಳು ತೀರಾ ಶೋಚನೀಯ ಸ್ಥಿತಿಯಲ್ಲಿದ್ದಾರೆ. ಕೆಲವು ಶ್ರೀಮಂತ ವ್ಯಾಪಾರಿಗಳು ಬಿಟ್ಟರೆ, ಇತರರು ಅನ್ನಕ್ಕೆ ಪರದಾಡುವಂತಾಗಿದೆ. ರೇಷನ್ ಆಹಾರ ಸರಾಸರಿ ಕುಟುಂಬದ ಮೂರನೇ ಎರಡು ಭಾಗಕ್ಕೂ ಸಾಲುವುದಿಲ್ಲ ಬರುವ ಆದಾಯ ಆಹಾರಕ್ಕೂ ಸಾಲುವುದಿಲ್ಲ. ಇರಾಕ್‌ನಲ್ಲಿ ಎಲ್ಲಾ ರೀತಿಯ ಶಸ್ತ್ರ ಪರೀಕ್ಷೆಗ ನಡೆಸಿರುವ ವಿಶ್ವಸಂಸ್ಥೆಗೆ ಈ ಹಸಿವು ಕಾಣುವುದಿಲ್ಲವೇ? ಇರಾಕ್‌ನ ಮೇಲೆ ಆಹಾರ ದಿಗ್ಬಂಧನ ತೆಗೆಯಬೇಕಾದ ತುರ್ತು ಯಾರಿಗೂ ಕಾಣುತ್ತಿಲ್ಲವೇ?

## ರಘುನಾಥ ಹಳ್ಳಿಯಲ್ಲಿ ಕೃಷಿಕೂಲಿಕಾರರ ಸಂಘ ಘಟಕ ರಚನೆ

**ರಘುನಾಥಹಳ್ಳಿ : ಜುಲೈ, 20, 1993** ರಂದು ಕೃಷಿ ಕೂಲಿಗಾರರ ಸರ್ವ ಸದಸ್ಯರ ಸಭೆಯು ರಾಯಚೂರು ತಾಲೂಕಿನ ರಘುನಾಥಹಳ್ಳಿಯಲ್ಲಿ ನಡೆಯಿತು. ಮಾಜಿ ಮಂಡಲ್ ಸದಸ್ಯರಾದ ತಿಪ್ಪಣ್ಣ ಅಧ್ಯಕ್ಷತೆ ವಹಿಸಿದ್ದರು. ಸಂಘಟನೆಯ ಜಿಲ್ಲಾ ಸಮಿತಿಯ ಸಂಚಾಲಕರ ಎನ್. ಪರಪ್ಪ ರವರ ಸಮ್ಮುಖದಲ್ಲಿ ರಘುನಾಥ ಹಳ್ಳಿಯ ಘಟಕವನ್ನು ರಚಿಸಲಾಯಿತು.

ಅಧ್ಯಕ್ಷರಾಗಿ ಮಲ್ಲಪ್ಪ, ಉಪಾಧ್ಯಕ್ಷರು ಬೂದಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಎಸ್. ಪರಪ್ಪ, ಸಹ-ಕಾರ್ಯದರ್ಶಿಯಾಗಿ ರೆಚ್ಚೆಪ್ಪ, ಖಜಾಂಚಿಯಾಗಿ ನರಸಪ್ಪ, ಸಹ- ಖಜಾಂಚಿಯಾಗಿ ಎಸ್. ಬಸವರಾಜರವರನ್ನೊಳಗೊಂಡಂತೆ 15 ಜನರು ಸದಸ್ಯರುಳ್ಳ ಸಮಿತಿಯನ್ನು ರಚಿಸಲಾಯಿತು.

ನಂತರ ಸಭೆಯು ಹಲವು ನಿರ್ಣಯಗಳನ್ನು ಅನುಮೋದಿಸಿತು. ಕುಡಿಯುವ ನೀರು, ಬರಗಾಲದ ಕಾಮಗಾರಿ, ರಸ್ತೆಗಾಗಿ ಆಸ್ಪತ್ರೆ, ನಿವೇಶನದ ಹಕ್ಕುಗಳ ಪತ್ರಕ್ಕಾಗಿ, ಜನತಾ ಪ್ಲಾಟ್‌ಗಳಲ್ಲಿನ ವಿದ್ಯುತ್ ಕಂಬಗಳ ಸ್ಥಾಪಿಸಲು ಇವೇ ಮುಂತಾದ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲು ಚಳುವಳಿ ರೂಪಿಸಲು ನಿರ್ಧರಿಸಲಾಯಿತು.

## ಕೊಲೆಗಾರರ ಬಂಧನಕ್ಕೆ ಆಗ್ರಹ

**ಬಿಜಾಪುರ:** ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಅಂಜುಟಗಿ ಗ್ರಾಮದ ಶಾಂತಪ್ಪ ಬಾಬುರಾವ್ ನಾಯ್ಕೋಡಿ ಇವರನ್ನು ದಿನಾಂಕ ಜುಲೈ 3, 1993 ರಂದು ಕೊಲೆ ಮಾಡಲಾಗಿದೆ. ಈ ಬಗ್ಗೆ ಕೊಲೆಯಾದವರ ಸಂಬಂಧಿ ಶಿವಾನಂದ ಬಾಬುರಾವ್ ನಾಯ್ಕೋಡಿ ಎಂಬುವವರು ದಿನಾಂಕ ಜುಲೈ 8, 1993 ರಂದು ಝಳಕಿ ಪೋಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದಾರೆ. ಆದರೆ ಸದರಿ ಠಾಣೆಯ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಸುಣಗಾರ ಯಾವುದೇ ಕ್ರಮ ಕೈಗೊಂಡಿಲ್ಲ. ಆರೋಪಿಗಳು ಊರಲ್ಲಿ ರಾಜಾರೋಷವಾಗಿ ತಿರುಗಾಡುತ್ತಿದ್ದಾರೆ. ಈ ಬಗ್ಗೆ ಮಾಹಿತಿಕೊಟ್ಟು ಆರೋಪಿಗಳನ್ನು ಹಿಡಿದುಕೊಟ್ಟರೂ ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ಒಪ್ಪಿಸದೆ ದೂರು ಕೊಟ್ಟವರಿಗೆ ಒಡೆದು ಬಡಿದು ಮಾಡಿ ಹಣ ವಸೂಲಿ ಮಾಡುತ್ತಿದ್ದಾರೆ ಎಂದು ತಿಳಿದುಬಂದಿದೆ. ಈ ಬಗ್ಗೆ ಮೇಲಾಧಿಕಾರಿಗಳಿಗೆ ದೂರು ನೀಡಿದಾಗ ಮತ್ತೆ ಈ ಪಿ.ಎಸ್.ಐ. ಸುಣಗಾರ ಬೆದರಿಸಿ ಹೆದರಿಸಿ ಹೊಡೆಸಿದೆ ಮಾಡಿಲ್ಲ ಹೆದರಿಸಿಲ್ಲ ಎಂದು ಸಹಿ ತೆಗೆದುಕೊಂಡು ಹೋಗಿದ್ದಾರೆ. ಆದ್ದರಿಂದ ಈ ಬಗ್ಗೆ ಸಿ.ಓ.ಡಿ ತನಿಖೆ ಮಾಡಿಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳದೇಕಾಗಿ ಕರ್ನಾಟಕ ಪ್ರಾಂತ ರೈತ ಸಂಘದ ಬಿಜಾಪುರ ಜಿಲ್ಲಾ ಸಮಿತಿ ಸರಕಾರವನ್ನು ಆಗ್ರಹಿಸಿದೆ.

## ವೃತ್ತಿ ಶಿಕ್ಷಣ : ಸರಕಾರದ ತೀರ್ಮಾನಕ್ಕೆ ಎಸ್.ಎಫ್.ಐ. ಸ್ವಾಗತ

ವೃತ್ತಿಪರ ಶಿಕ್ಷಣ ಪ್ರವೇಶ ಕುರಿತು ಸುಪ್ರಿಂಕೋರ್ಟ್ ನೀಡಿರುವ ತೀರ್ಪನ್ನು ಜಾರಿಗೊಳಿಸುವ ಭಾಗವಾಗಿ ಖಾಸಗಿ ಆಡಳಿತ್ವ ಮಂಡಳಿಗಳು ಸರಕಾರ ಆಯ್ಕೆ ಮಾಡುವ ವಿದ್ಯಾರ್ಥಿಗಳಿಗೆ ಪ್ರವೇಶ ನೀಡದಿದ್ದರೆ, ಕಾಲೇಜುಗಳಿಗೆ ಆಡಳಿತಾಧಿಕಾರಿಯನ್ನು ನೇಮಿಸುವ ರಾಜ್ಯ ಸಚಿವ ಸಂಪುಟದ ತೀರ್ಮಾನವನ್ನು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ.) ಕರ್ನಾಟಕ ರಾಜ್ಯ ಸಮಿತಿ ಸ್ವಾಗತಿಸುತ್ತದೆ.

ಸುಪ್ರೀಂಕೋರ್ಟ್ ತೀರ್ಮಾನವನ್ನು ಜಾರಿಗೊಳಿಸಲು ಅಡ್ಡಿಪಡಿಸುತ್ತಿರುವ ಖಾಸಗಿ ಆಡಳಿತ ಮಂಡಳಿಗಳ ಬೆದರಿಕೆಗೆ ಸರಕಾರ ಮಣಿಯಬಾರದು. ಯಾವುದೇ ಕಾರಣಕ್ಕೂ ಮಹಾರಾಷ್ಟ್ರ ಸರಕಾರದ ಶುಲ್ಕ ನೀತಿಯನ್ನು ಅನುಕರಿಸುವುದು ಸರಿಯಲ್ಲ. ಅಲ್ಲಿಯ ಸರಕಾರ ಸುಪ್ರೀಂಕೋರ್ಟ್ ತೀರ್ಮಾನ ಸ್ಫೂರ್ತಿಗೆ ವಿರುದ್ಧವಾಗಿ ನೀಚಕೃತ್ಯವೆಸಗಿದೆ. ಪ್ರತಿವರ್ಷ 2 ಲಕ್ಷ ರೂ. ಮೆಡಿಕಲ್‌ಗೆ ಹಾಗೂ 1.25 ಲಕ್ಷ ರೂ. ಇಂಜಿನಿಯರಿಂಗ್‌ಗೆ ಶುಲ್ಕ ನಿಗದಿಗೊಳಿಸಿ ಕ್ಯಾಪಿಟೇಷನ್ ಮತ್ತು ಡೊನೇಷನ್‌ನ್ನು ಕಾನೂನುಬದ್ಧಗೊಳಿಸಿ ಹಣ ವಸೂಲಿಗೆ ಅವಕಾಶ ಮಾಡಿಕೊಟ್ಟಿದೆ. ಇಂತಹ ಕ್ರಮವು ನಮಗೆ ಆದರ್ಶವಲ್ಲ ಮತ್ತು ಆದರ್ಶವಾಗಕೂಡದು.

ಆದ್ದರಿಂದ ವಿದ್ಯಾರ್ಥಿ - ಪೋಷಕರಿಗೆ ತೊಂದರೆಯಾಗದಂತೆ ಸರಕಾರ ಕೂಡಲೇ ನಿರ್ದಿಷ್ಟ ಕ್ರಮಗಳನ್ನು ಪ್ರಕಟಿಸಬೇಕೆಂದು ಎಸ್.ಎಫ್.ಐ. ಒತ್ತಾಯಿಸುತ್ತದೆ.

## ಯುವಜನ - ವಿದ್ಯಾರ್ಥಿಗಳಿಂದ ಸಾಮ್ರಾಜ್ಯಶಾಹಿಗೆ ನೇಣು ಶಿಕ್ಷೆ ಚಲೇಜಾವ್ ಚಳುವಳಿಯ ನೆನಪು

"ನೆನೆ ನೆನೆ ಆ ದಿನವ ಓ ಭಾರತ ಬಾಂಧವ" ಎನ್ನುವ ಗೀತೆಯ ಆಶಯದಂತೆ, ಐತಿಹಾಸಿಕ ಕ್ವಿಟ್ ಇಂಡಿಯಾ ಚಳುವಳಿಯ 50ನೇ ವಾರ್ಷಿಕೋತ್ಸವದ ಸಮಾರೋಪ ಕಾರ್ಯಕ್ರಮವು ಸಾಮ್ರಾಜ್ಯಶಾಹಿ ಅಮೇರಿಕಕ್ಕೆ ಸಾರ್ವತ್ರಿಕ ನೇಣು ಶಿಕ್ಷೆ ವಿದಿಸುವ ಸಾಂಕೇತಿಕ ಕಾರ್ಯಕ್ರಮದ ಮೂಲಕ ಬೆಂಗಳೂರಿನಲ್ಲಿ ನಡೆಯಿತು. ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ), ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಬೆಂಗಳೂರು ಜಿಲ್ಲಾ ಸಮಿತಿಗಳು ಸಂಘಟಿಸಿದ್ದವು

ಮೈಸೂರು ಬ್ಯಾಂಕ್ ಸರ್ಕಲ್‌ನಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಹುತಾತ್ಮರಾದ ಹೋರಾಟಗಾರರ ಸ್ಮಾರಕದ ಎದುರು ನೂರಾರು ವಿದ್ಯಾರ್ಥಿ - ಯುವಜನರು ಸೇರಿ "ಸ್ವಾತಂತ್ರ್ಯ ಹೋರಾಟಗಾರರ ಆಶಯಗಳನ್ನು ಎತ್ತಿಹಿಡಿಯುತ್ತೇವೆ" "ಅಮೇರಿಕದ ಸಾಮ್ರಾಜ್ಯಶಾಹಿ ನೀತಿಗೆ ಧಿಕ್ಕಾರ", 'ಐ.ಎಂ. ಎಫ್‌ನ ಷರತ್ತುಗಳಿಗೆ ಧಿಕ್ಕಾರ' ದೇಶ ಮಾರುವ ಆರ್ಥಿಕ ನೀತಿಗಳನ್ನು ಸಹಿಸುವುದಿ ಲ್ಲ' ಎಂದು ಘೋಷಿಸಿದರು.

ಈ ಸಂದರ್ಭದಲ್ಲಿ ನಡೆದ ಸಭೆಯನ್ನು ಉದ್ದೇಶಿಸಿ ಡಿ.ವೈ.ಎಫ್.ಐ.ನ ರಾಜ್ಯಾಧ್ಯಕ್ಷರಾದ ಕಾಂ. ನಾಗಮೋಹನ್ ದಾಸ್, ಎಸ್.ಎಫ್.ಐ.ನ ರಾಜ್ಯಾಧ್ಯಕ್ಷರಾದ ಕಾಂ. ಜಿ.ಸಿ. ಬಯ್ಯಾರೆಡ್ಡಿ, ಸಹಕಾರ್ಯದರ್ಶಿ ಕಾಂ. ಕೆ. ಪ್ರಕಾಶ್ ಮಾತನಾಡಿದರು. ಕಾಂ. ನಾಗಮೋಹನ್ ದಾಸ್ ಮಾತನಾಡಿ ಒಂದು ಈಸ್ಟ್ ಇಂಡಿಯಾ ಕಂಪನಿ ಭಾರತದಲ್ಲಿ ವ್ಯಾಪಾರಕ್ಕೆ ಬಂದು ಎರಡು ಶತಮಾನಗಳ ದಾಸ್ಯವನ್ನು ಅನುಭವಿಸಿದೆವು ಇಂದು ಪಿ.ವಿ. ನರಸಿಂಹರಾವ್ ನೇತೃತ್ವದ ಕಾಂಗ್ರೆಸ್ ಸರಕಾರ ನೂರಾರು ಕಂಪನಿಗಳನ್ನು ಭಾರತಕ್ಕೆ ಆಹ್ವಾನಿಸುತ್ತಿದೆ ಎಂದು ಸರಕಾರದ ಆರ್ಥಿಕ ನೀತಿಯನ್ನು ಖಂಡಿಸಿದರು.

ಕಾಂ. ಜಿ.ಸಿ. ಬಯ್ಯಾರೆಡ್ಡಿಯವರು ಮಾತನಾಡಿ ಯಾವ ಸಾಮ್ರಾಜ್ಯಶಾಹಿ ಬ್ರಿಟಿಷರ ವಿರುದ್ಧ ಸ್ವತಂತ್ರ ಹೋರಾಟದ ನೇತೃತ್ವ ವಹಿಸಿದ್ದ ಕಾಂಗ್ರೆಸ್ ಪಕ್ಷ ಈಗ ಸಂಪೂರ್ಣ ನಾಶವಾಗಿದೆ. ಈಗ ಇರುವುದು ಅಮೆರಿಕಾ ಮತ್ತಿತರ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಶರಣಾದ ಭ್ರಷ್ಟ ಕಾಂಗ್ರೆಸ್ ಎಂದು ಖಂಡಿಸಿದರು.

ಭಾರತದ ರೈತರ ಬೆನ್ನುಮೂಳೆ ಮುರಿಯುವ ಡಂಕೆಲ್ ಪ್ರಸ್ತಾಪಗಳು ಭಾರತದೊಂದಿಗಿನ "ಕ್ರಯೋಜನಿಕ್ ಇಂಜಿನ್" ತಂತ್ರಜ್ಞಾನದ ಒಪ್ಪಂದವನ್ನು ಮುರಿಯಲು ರಷ್ಯಾ ದೇಶದ ಮೇಲೆ ತಂದಿರುವ ಒತ್ತಡ, ಭಾರತದ ಸ್ವಾತಂತ್ರ್ಯ ಸಾರ್ವಭೌಮತೆಗೆ ದಕ್ಕೆತರುವ ಐ.ಎಂ.ಎಫ್. ಷರತ್ತುಗಳು ಮತ್ತು ಈ ಎಲ್ಲಾ ನೀತಿಗಳ ಹಿಂದಿರುವ ಅಮೆರಿಕದ ಸಾಮ್ರಾಜ್ಯಶಾಹಿ ನೀತಿಗಳನ್ನು ಅವರು ಖಂಡಿಸಿದರು. ಮಹಾನ್ ಸ್ವಾತಂತ್ರ್ಯ ಹೋರಾಟಗಾರ ಕಾಂ. ಭಗತ್‌ಸಿಂಗ್‌ರ ಪರಂಪರೆಯನ್ನು ಮುಂದುವರೆಸುವುದಾಗಿ ಅವರು ಘೋಷಿಸಿದರು.

ಈ ಮೇಲಿನ ಅಪರಾಧಗಳಿಗಾಗಿ ಅಮೇರಿಕಾದ ಸಾಮ್ರಾಜ್ಯಶಾಹಿ ಭೂತಕ್ಕೆ ನೇಣು ಶಿಕ್ಷೆಯನ್ನು ವಿಧಿಸಲಾಯಿತು.

## ಮೈಸೂರು ಪೇಪರ್ ಮಿಲ್ಸ್ ಐಕ್ಯತಾ ಸಮಿತಿಗೆ ಅದ್ಭುತ ವಿಜಯ ಬಿಜೆಪಿ, ಇಂಟಕ್‌ಗೆ ಸೋಲು

ಕಾಂ. ಸೂರಿ ಸಲಹೆಗಾರರಾಗಿ ನೇತೃತ್ವ ನೀಡುತ್ತಿರುವ ಐಕ್ಯತಾ ಸಮಿತಿ ಭದ್ರಾವತಿಯ ಮೈಸೂರು ಪೇಪರ್ಸ್ ಮಿಲ್ಸ್ ಕಾರ್ಮಿಕ ಯೂನಿಯನ್ ಚುನಾವಣೆಯಲ್ಲಿ ಅದ್ಭುತ ಜಯಗಳಿಸಿದೆ. ಎಲ್ಲ 5 ಪದಾಧಿಕಾರಿ ಸ್ಥಾನವನ್ನು 30 ರಲ್ಲಿ 25 ಸದಸ್ಯರ ಸ್ಥಾನವನ್ನುಗಳಿಸಿದೆ. ಇಂಟಕ್ ಗುಂಪು ಮತ್ತು ಬಿಜೆಪಿ ನವನಿರ್ಮಾಣ ಗುಂಪನ್ನು ಬಾರಿ ಮತದಿಂದ ಐಕ್ಯತಾ ಸಮಿತಿ ಸೋಲಿಸಿದೆ. ಈ ಕೆಳಗಿನಂತೆ ವಿವಿಧ ಗುಂಪುಗಳು ಮತ ಪಡೆದಿವೆ.

| | ಐಕ್ಯತಾ ಸಮಿತಿ | ಇಂಟಕ್ ಗುಂಪು | ಬಿಜೆಪಿ ಗುಂಪು |
|---|---|---|---|
| ಅಧ್ಯಕ್ಷರು | 1,576 | 835 | 70 |
| ಉಪಾಧ್ಯಕ್ಷರು | 1,394 | 893 | 32 |
| ಕಾರ್ಯದರ್ಶಿ | 1091 | 320 | 1004 |
| ಸಹ ಕಾರ್ಯದರ್ಶಿ | 1331 | 842 | 80 |
| ಖಜಾಂಚಿ | 1071 | 984 | 384 |

ಅಧ್ಯಕ್ಷರಾಗಿ ಶಂಕರರಾವ್, ಉಪಾಧ್ಯಕ್ಷರಾಗಿ ರಾಮಯ್ಯ, ಕಾರ್ಯದರ್ಶಿಯಾಗಿ ರಾಮಕೃಷ್ಣ, ಸಹಕಾರ್ಯದರ್ಶಿಯಾಗಿ ಪರಸಪ್ಪ, ಖಜಾಂಚಿಯಾಗಿ ಉಮೇಶ್ ಆಯ್ಕೆ ಹೊಂದರು. ಬೇರೆ ಸಂಘದಿಂದ ಸ್ಪರ್ಧಿಸಿ ಸಮಿತಿ ಸದಸ್ಯರಾಗಿ ಆಯ್ಕೆಗೊಂಡ 5 ಜನ ಸಹ ಐಕ್ಯತಾ ಸಮಿತಿಗೆ ಬೆಂಬಲ ಸಾರಿದ್ದಾರೆ.

ಉಪಾಧ್ಯಕ್ಷರಾಗಿ ಆಯ್ಕೆಗೊಂಡ ರಾಮಯ್ಯನವರು ಗೆಲುವಿನ ಹರ್ಷದಲ್ಲಿ ಹೃದಯಾಘಾತದಿಂದ ನಿಧನರಾದರು. ಕಾಂ. ಸೂರಿಯವರು ಇವರ ನಿಧನಕ್ಕೆ ತೀವ್ರ ಸಂತಾಪ ಸೂಚಿಸಿದ್ದಾರೆ.

KRNM/BGS-405 MAG(2) PRB DECR 319-78/79

# ಬಹಳದಿನ ಬಾಳಲಾರದ ಸರ್ಕಾರ

**-ಪ್ರಕಾಶ್ ಕಾರಟ್**

ನರಸಿಂಹರಾವ್ ಸರಕಾರ ಸಿಪಿಐ(ಎಂ) ಸಂಸತ್ ಸದಸ್ಯ ಅಜೋಯ್ ಮುಖ್ಯೋಪಾಧ್ಯಾಯರವರು ಮಂಡಿಸಿದ ಅವಿಶ್ವಾಸ ಠರಾವಿನಿಂದ ಅತೀ ಅಲ್ಪ ಅಂತರದಿಂದ ಪಾರಾಗಿಯೇನೋ ಬಂದಿದೆ. ಆದರೆ ಹೀಗೆ ಪಾರಾಗಿ ಬಂದದ್ದು ಒಂದು ನಜ್ಜು-ಗುಜ್ಜಾದ, ವಿಶ್ವಾಸಾರ್ಹತೆಯನ್ನು ಕಳಕೊಂಡ ಸರಕಾರ. 'ಸೂಟ್‌ಕೇಸ್' ಶಬ್ದದ ಕಾಂಗ್ರೆಸ್(ಐ) ಸಂಕೇತವಾಗಿ ಬಿಟ್ಟಿದೆ. ವಿರೋಧಪಕ್ಷಗಳ ಕೆಲವು ಸಂಸತ್ ಸದಸ್ಯರನ್ನು ಖರೀದಿಸಿ ಮತಗಳ ಲೆಕ್ಕದಲ್ಲೇನೋ ಸರಕಾರ ಗೆದ್ದಿತು. ಆದರೆ ನೈತಿಕವಾಗಿ, ರಾಜಕೀಯವಾಗಿ ತೀವ್ರ ಸೋಲನ್ನು ಅನುಭವಿಸಿತು.

ಎರಡು ವರ್ಷಗಳ ಹಿಂದೆ ನರಸಿಂಹರಾವ್ ಪ್ರಧಾನ ಮಂತ್ರಿಯಾದಾಗ ಸರ್ವಸಮ್ಮತಿಯ ಮೂಲಕ ರಾಷ್ಟ್ರೀಯ ನೀತಿಗಳನ್ನು ರೂಪಿಸುವ ಭರವಸೆ ನೀಡಿದರು. ಆದರೆ ಅವರದ್ದೊಂದು ವಿಚಿತ್ರ ಸರ್ವಸಮ್ಮತಿ ರಾಜಕೀಯ ಎಂದು ಬೇಗನೇ ಮನದಟ್ಟಾಯಿತು. ವ್ಯಾಪಕ ವಿರೋಧಗಳನ್ನು, ಪರ್ಯಾಯ ನೀತಿಗಳ ಸಾಧ್ಯತೆಯನ್ನು ನಿರ್ಲಕ್ಷಿಸಿ ಐ.ಎಂ.ಎಫ್-ವಿಶ್ವಬ್ಯಾಂಕ್‌ಗಳಿಗೆ ಭಾರತದ ಆರ್ಥಿಕ ಸಾರ್ವಭೌಮತ್ವವನ್ನು ಒತ್ತೆಯಿಡುವ 'ಸರ್ವಸಮ್ಮತಿ'ಯಾಗಿತ್ತು. ಇನ್ನೂ ಹೋಲಿಸೆಂದರೆ ರಾಷ್ಟ್ರೀಯ ಸಮಗ್ರತಾ ಮಂಡಳಿ ಬಾಬ್ರಿಮಸೀದಿಯನ್ನು ರಕ್ಷಿಸುವ ಯಾವುದೇ ಕ್ರಮಕ್ಕೆ ಅವಿರೋಧ ಬೆಂಬಲ ವ್ಯಕ್ತಪಡಿಸಿದರೂ ಅದು ಧ್ವಂಸವಾಗುವುದನ್ನು ತಡೆಯದೆ ಬಿಜೆಪಿ-ಆರ್.ಎಸ್.ಎಸ್. ಜತೆಗಿನ 'ಸರ್ವಸಮ್ಮತಿ'ಯಾಗಿತ್ತು.

## ಒಂದು ದೊಡ್ಡ ಅಡ್ಡಿ

ಇಷ್ಟಾದರೂ ಕೂಡಾ ಎಡಪಕ್ಷಗಳ ಸಲಹೆಯನ್ನು ಉಪೇಕ್ಷಿಸಿ ಕೋಮುವಾದಿಗಳನ್ನು ಸಂತುಷ್ಟಪಡಿಸುವ, ಅವರೊಡನೇ ಸ್ಪರ್ಧೆಗಿಳಿಯುವ ಅಪಾಯಕಾರೀ ದಾರಿ ಹಿಡಿಯಿತು. ಏಳು ತಿಂಗಳ ನಂತರವೂ ಮಸೀದಿ ಧ್ವಂಸ ಮಾಡಿದ ಒಬ್ಬನೇ ಅಪರಾಧಿಯನ್ನು ಹಿಡಯಲಾಗಿಲ್ಲ. ಈ ಸರಕಾರಕ್ಕೆ ಸಿಬಿಐ ತನಿಖೆ ಮೂಲಕ ಒಬ್ಬರಾದರೂ ಆರ್.ಎಸ್.ಎಸ್.-ಬಿಜೆಪಿ-ವಿ.ಹೆಚ್.ಪಿ. ವ್ಯಕ್ತಿಯ ವಿಚಾರಣೆ ಮಾಡಲಾಗದ ನಾಚಿಕೆಗೇಡಿ ಸರಕಾರ ಇದು. ಈ ಸರಕಾರ ತನ್ನ ಈ ಅಪಯಾಕಾರೀ ನೀತಿಯನ್ನು ಬಿಡದಿದ್ದರೆ ಆ ಸರಕಾರ ಹೋಗಲೇಬೇಕು ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗಲಾರಂಭಿಸಿತು. ಕೋಮುವಾದೀ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ನರಸಿಂಹರಾವ್ ಸರಕಾರ ಒಂದು ದೊಡ್ಡ ಅಡ್ಡಿ ಎಂಬುದು ಸ್ಪಷ್ಟವಾಯಿತು.

ದೇಶದ ಮುಂದಿರುವ ಇನ್ನೊಂದು ಮಹತ್ವದ ಪ್ರಶ್ನೆ-ಐ.ಎಂ.ಎಫ್-ವಿಶ್ವಬ್ಯಾಂಕ್ ನಿರ್ದೇಶಿತ ಆರ್ಥಿಕ ನೀತಿಗಳನ್ನು ಬದಲಿಸುವ ಪ್ರಶ್ನೆ. ನವಂಬರ್ 1991 ಹಾಗೂ ಜೂನ್ 16 ರ ಸಾರ್ವತ್ರಿಕ ಮುಷ್ಕರಗಳು, ವಿವಿಧ ಜನವಿಭಾಗಗಳ ಹೋರಾಟಗಳು ಖಾಸಗೀಕರಣ ವಿರುದ್ಧ, ಕ್ಲೋಶರ್ ವಿರುದ್ಧ, ಬೆಲೆಯೇರಿಕೆ, ನಿರುದ್ಯೋಗದ ವಿರುದ್ಧ ಸಾರ್ವಜನಿಕ ವಲಯವನ್ನು ಕಳಚಿಹಾಕುವುದರ ವಿರುದ್ಧ ಹೋರಾಟಗಳ ಮೂಲಕ ಈ ಹೋರಾಟವನ್ನು ವ್ಯಾಪಕಗೊಳಿಸಲೇಬೇಕು ಎಂಬ ಒಂದು ಘಟ್ಟವೂ ಬಂದಿತು. ಎಪ್ರಿಲ್ 15ರಂದು ಸಾಮೂಹಿಕ ಸಂಘಟನೆಗಳ ವೇದಿಕೆ ಮುಂದಿನ ಹಂತದ ಹೋರಾಟದ ಕರೆ ನೀಡಿತು. ಸೆಪ್ಟೆಂಬರ್ 9 ರಂದು ಭಾರತ್ ಬಂದ್‌ಗೆ ಕರೆ ನೀಡಿತು.

## ಜನರ ಸಿಟ್ಟಿನ ಪ್ರತಿಧ್ವನಿ

ಅತ್ತ ಜನಗಳು ಈ ರೀತಿ ತಮ್ಮ ಅಸಂತೃಪ್ತಿಯನ್ನು ತೋರಿಸುತ್ತಿದ್ದರೂ ನರಸಿಹರಾವ್ ಸರಕಾರ ಯಾವ ನಾಚಿಕೆಯೂ ಇಲ್ಲದೆ ಐ.ಎಂ.ಎಫ್ ನೊಂದಿಗೆ ಇನ್ನೊಂದು ದೊಡ್ಡ ಸಾಲದ ಮಾತುಕತೆಯಲ್ಲಿ ತೊಡಗಿತ್ತು. ಅವಿಶ್ವಾಸ ಠರಾವಿನ ಮೇಲೆ ಸಂಸತ್ತಿನಲ್ಲಿ ಚರ್ಚೆ ನಡೆಯುತ್ತಿದ್ದಾಗಲೂ ಹಣಕಾಸು ಮಂತ್ರಿ ಮತ್ತು ಅವರ ತಂಡ ಐ.ಎಂ.ಎಫ್ ತಂಡದೊಂದಿಗೆ 9 ಶತಕೋಟಿ ಡಾಲರುಗಳ ಸಾಲಕ್ಕಾಗಿ ಚೌಕಾಸಿ ನಡೆಸಿತ್ತು. ಹೊರಗೆ ಜನಗಳ ಕ್ರೋಢೀಕರಣ ಗೊಳ್ಳುತ್ತಿರುವ ಪ್ರತಿರೋಧದ ಪ್ರತಿಧ್ವನಿ ಸಂಸತ್ತಿನಲ್ಲೂ ಕೇಳಿಬರಬೇಕಾಗಿತ್ತು. ಆದ್ದರಿಂದ ಸಿಪಿಐ(ಎಂ) ಸಂಸತ್ ಸದಸ್ಯರು ಮಂಡಿಸಿದ ಠರಾವು ಈ ಹೋರಾಟದ ಅಂಶಕ್ಕೆ ಆದ್ಯತೆ ನೀಡಿತ್ತು.

ಸರಕಾರ ಈ ನೀತಿಗಳ ಪ್ರತಿಫಲನ ವಿದೇಶಾಂಗ ನೀತಿಯಲ್ಲೂ ಕಂಡು ಬಂತು. ಅಲಿಪ್ತನೀತಿಗೆ, ದೇಶದ ಭದ್ರತಾ ಹಿತಾಸಕ್ತಿಗಳಿಗೇ ಘಾತುಕ ತಂದಿತು. ಸಾವಿರಾರು ಕೋಟಿ ರೂ.ಗಳ ಹಗರಣ, ರಾವ್ ಸರಕಾರದ ಆರ್ಥಿಕ ನೀತಿಗಳ ನೇರ ಫಲ, ಲಾಭ ದೋಚಿ, ಎಲ್ಲಾ ನೀತಿ-ನಿಯಮಗಳನ್ನು ಕಳಚಿ ಹಾಕಿ ಎಂದ ಹೊಸ ಆರ್ಥಿಕ ನೀತಿಯ ಫಲಗಳೇ ಈ ಹರ್ಷದ್ ಮೆಹ್ತಾಗಳು, ಹಿತೇನ್ ದಲಾಲ್‌ಗಳು, ಕೃಷ್ಣಮೂರ್ತಿಗಳು ಮೂಡಿಬರುವ ಕಾರಣ ಎಂದು ಸಿಪಿಐ(ಎಂ) ವಿಚಾರ. ಕೊನೆಗೆ ನರಸಿಂಹರಾವ್‌ರವರ ಹೆಸರೇ ಈ ಭ್ರಷ್ಟಾಚಾರದ ಬಲೆಯೊಳಗೆ ಬಂತು ಆದರೂ ನರಸಿಂಹರಾವ್ ಅಧಿಕಾರದಿಂದ ಇಳಿಯಲು ನಿರಾಕರಿಸಿದರು.

ಇಂತಹ ಸಂದರ್ಭದಲ್ಲಿ ರಾವ್ ಸರಕಾರದ ಧೋರಣೆ, ಭ್ರಷ್ಟಾಚಾರದ ವಿರುದ್ಧ ಹೋರಾಟದಲ್ಲಿ ಮುಂಚೂಣಿಯಲ್ಲಿರಬೇಕೆಂದು ಸಿಪಿಐ(ಎಂ) ಹಾಗೂ ಇತರ ಎಡಪಕ್ಷಗಳು ನಿರ್ಧರಿಸಿದವು. ಬಿಜೆಪಿ ಭ್ರಷ್ಟಚಾರದ ಪ್ರಶ್ನೆಯ ಪೂರ್ಣ ಲಾಭ ಪಡೆದು ಸರಕಾರವನ್ನು ಸಿಲುಕಿಸಿ ಹಾಕಿ ಮಧ್ಯಾವಧಿ ಚುನಾವಣೆ ನಡೆಸುವಂತೆ ಮಾಡಬೇಕು ಎಂಬ ಪ್ರಯತ್ನ ನಡೆಸಿತು. ಎಡಪಕ್ಷಗಳು ಮತ್ತು ರಾಷ್ಟ್ರೀಯರಂಗ ಒಂದು ಅವಿಶ್ವಾಸ ಠರಾವನ್ನು ತರುವಲ್ಲಿ ಮುಂದಾಗಬೇಕು, ಈ ಠರಾವು ಮೂರು ಅಂಶಗಳನ್ನು ಒಳಗೊಂಡಿದ್ದು ಜಾತ್ಯಾತೀತ ಪಕ್ಷಗಳಿಗೂ ಬಿಜೆಪಿಗೂ ಇರುವ ವ್ಯತ್ಯಾಸ ಸ್ಪಷ್ಟವಾಗಿ ಕಾಣುವಂತಾಗಬೇಕು ಎಂದು ನಿರ್ಧರಿಸಲಾಯಿತು. ಜನಗಳ ಹಿತಾಸಕ್ತಿಗಳನ್ನು, ಜಾತ್ಯತೀತತೆಯನ್ನು ಹಾಗೂ ದೇಶದ ಸಾರ್ವಭೌಮತೆಯನ್ನು ರಕ್ಷಿಸಲು ಈ ಠರಾವನ್ನು ಯಶಸ್ವಿಗೊಳಿಸಬೇಕು, ಅದಕ್ಕಾಗಿ ಸರ್ವಪ್ರಯತ್ನ ನಡೆಸಬೇಕು ಎಂದು ನಿರ್ಧರಿಸಲಾಯಿತು ವಿವಿಧ ನೀತಿಗಳ ಮೇಲೆ ಎಡಜಾತ್ಯಾತೀತ ಪಕ್ಷಗಳ ನೇರ ನಿಲುವು ಬಿಜೆಪಿ ರಂಗದ ಸ್ಥಳ ಮಧ್ಯಕ್ಕೆ ಬರದಂತೆ ತಡೆಯುತ್ತದೆ ಕೋಮುವಾದೀ ಅಪಾಯ ಹಾಗೂ ಆರ್ಥಿಕ ಧೋರಣೆಗಳ ವಿರುದ್ಧ ಹೋರಾಟ ಅವಿರತವಾಗಿ ಮುನ್ನಡೆಯಬೇಕಾದರೆ ನರಸಿಂಹರಾವ್ ಸರಕಾರದ ವಿರುದ್ಧ ಹೋರಾಟ ಅವಿರತವಾಗಿ ಸಾಗಬೇಕಾಗಿತ್ತು.

## ಯಶಸ್ವಿ ಕಾರ್ಯತಂತ್ರ

ಎಡಪಕ್ಷಗಳು ಹಾಗೂ ರಾಷ್ಟ್ರೀಯರಂಗ ಅಂಗೀಕರಿಸಿದ ಕಾರ್ಯತಂತ್ರ ಯಶಸ್ವಿಯಾಯಿತು. ಸಂಸತ್ತಿ ಮತ್ತು ಜನರ ಮುಂದಿಟ್ಟ ಅವಿಶ್ವಾಸ ಠರಾವಿನ ನಿಜವಾದ ಸಮಸ್ಯೆಗಳನ್ನು ದೇಶದ ಮುಂದಿಟ್ಟಿತು. ಬಿಜೆಪಿಯನ್ನು ಅದು ಪೇಚಿಗೆ ಸಿಕ್ಕಿಸಿತು.

ದೇಶದ ಮುಂದಿರುವ ಗಂಭೀರ ಸನ್ನಿವೇಶದಲ್ಲಿ ಒಂದು ಮಧ್ಯಂತರ ಚುನಾವಣೆಯನ್ನು ತಾನು ಬಯಸುವುದಿಲ್ಲ ಎಂದು ಸಿಪಿಐ(ಎಂ) ಸ್ಪಷ್ಟಪಡಿಸುತ್ತಾ ಬಂದಿದೆ. ಆದರೆ ಅದು ನಡೆಯಬೇಕೋ ಬೇಡವೋ ಎಂಬುದು ನಮ್ಮ ಕೈಯಲ್ಲಿಲ್ಲ. ನರಸಿಂಹರಾವ್ ಹಾಗೂ ಅವರ ನೀತಿಗಳನ್ನು ಅವಲಂಬಿಸಿದೆ ಎಂದೂ ಸಿಪಿಐ(ಎಂ) ಹೇಳಿಕೊಂಡು ಬಂದಿದೆ. ನರಸಿಂಹರಾವ್ ಇವೇ ಧೋರಣೆಗಳನ್ನು ಮುಂದುವರಿಸಿದರೆ ಅವರ ಸರಕಾರ ಬಹಳ ದಿನ ಉಳಿಯುವುದಿಲ್ಲ ಎಂದೂ ಸ್ಪಷ್ಟವಾಗಿ ಹೇಳುತ್ತಾ ಬಂದಿದ್ದೇವೆ. 1992 ರ ಮಳೆಗಾಲದ ಅಧಿವೇಶನದಲ್ಲಿ ಅವಿಶ್ವಾಸ ಠರಾವು 50 ಮತಗಳಿಗೂ ದೊಡ್ಡ ಅಂತರದಿಂದ ಸೋತು ಹೋಯಿತು ಆದರೆ ಈ ಬಾರಿ ಕೆಲವೇ ಪಕ್ಷಾಂತರಿಗಳ ನೆರವಿನಿಂದ ರಾವ್ ಸರಕಾರ ಬದುಕಿದಿದೆ. ಈ ಸರಕಾರ ಜನಗಳಿಂದ ಹೆಚ್ಚೆಚ್ಚು ದೂರಸರಿಯುತ್ತಿದೆ, ಜನಗಳ ಅಸಂತೃಪ್ತಿ ಹೆಚ್ಚುತ್ತಿದೆ ಎನ್ನುವುದಕ್ಕೆ ಇದೇ ಉತ್ತಮ ಉದಾಹರಣೆ. ಈ ಚರ್ಚೆಯಲ್ಲಿ ಪ್ರಧಾನಮಂತ್ರಿಗಳ ಭಾಷಣ ಅವರು ತಮ್ಮ ಯಾವುದೇ ವಿನಾಶಕಾರಿ ನೀತಿಯ ಬದಲಿಸುವುದಿಲ್ಲ ಎಂದು ತೋರಿಸಿದೆ.

ನಾಚಿಕೆಯಿಲ್ಲದ, ಹೇಸಿಗೆ ತರುವ ರೀತಿಯಲ್ಲಿ ಹಣಬಲ, ಕುದುರೆವ್ಯಾಪಾರ ನಡೆಸಿ ಹೇಗೋ ಪಾರಾದ ನರಸಿಂಹರಾವ್ ಸರಕಾರ ಬಹಳ ದಿನ ಉಳಿಯುವುದಿಲ್ಲ. ಹಗರಣದ ಮಸಿ ಬಳಿದುಕೊಂಡ, ಧೋರಣೆಗಳಲ್ಲಿ ದಿಕ್ಕು-ದೆಸೆಯಿಲ್ಲದ ಪ್ರಧಾನಮಂತ್ರಿಯಿರುವಾಗ ಕೋಮುವಾದೀ ಶಕ್ತಿಗಳಿಗೆ ಇನ್ನಷ್ಟು ಹಲ್ಲೆ ನಡೆಸುವ ಧೈರ್ಯ ಬರುತ್ತದೆ. ಆದ್ದರಿಂದ ಎಡ ಮತ್ತು ಜಾತ್ಯಾತೀತ ವಿರೋಧ ಪಕ್ಷಗಳು, ಶಕ್ತಿಗಳು ತಮ್ಮ ಮೇಲಿರುವ ಗಂಭೀರ ಹೊಣೆಯನ್ನು ಅರಿಯಬೇಕು. ಸೆಪ್ಟೆಂಬರ್ 9 ರ ಬಂದನ್ನು ಅತ್ಯಂತ ಯಶಸ್ವಿಗೊಳಿಸಲು, ಮುಂಬರುವ ನಾಲ್ಕು ವಿಧಾನಸಭಾ ಚುನಾವಣೆಗಳನ್ನು ಎದುರಿಸಲು ತಮ್ಮೆಲ್ಲಾ ಶಕ್ತಿಗಳನ್ನು ಕ್ರೋಢೀಕರಿಸಬೇಕು. ಹೆಚ್ಚೆಚ್ಚು ಜನಗಳನ್ನು ಅಣಿನೆರೆಸಿ ಆರ್ಥಿಕ ನೀತಿಗಳ ವಿರುದ್ಧ ಎಡೆಬಿಡದೆ ಹೋರಾಟ, ಭ್ರಷ್ಟಾಚಾರವನ್ನು ನಿರ್ದಾಕ್ಷಿಣ್ಯವಾಗಿ ಬಯಲಿಗೆಳೆಯುವ ಹೋರಾಟ ಹಾಗೂ ಕೋಮುವಾದಿ ಶಕ್ತಿಗಳ ವಿರುದ್ಧ ದೃಢ ಹೋರಾಟವನ್ನು ಮುಂದುವರೆಸಬೇಕು.

# ಸ್ವಾತಂತ್ರ್ಯ ಚಳುವಳಿಯ ಚರಿತ್ರೆ......

ಪುಟ 5ರಿಂದ

ಸ್ವಾತಂತ್ರ್ಯ ಚಳುವಳಿಯ ಚರಿತ್ರೆಗಳಲ್ಲಿ ಸರ್ವೆಸಾಮಾನ್ಯ ಆದರೆ "........ ಸಾವಿರ ತೊರೆಗಳು" ಪೂರ್ಣವಾಗಲ್ಲದ್ದಿದ್ದರೂ ಇಂತಹ ಅಪಚಾರಕ್ಕೆ ಹೋಗದೆ ಆಗಿನ ಚಾರಿತ್ರಿಕ ಸಂದರ್ಭ, ಕಮ್ಯುನಿಸ್ಟ್ ಪಕ್ಷದ ಧೋರಣೆ, ಅದರ ತರ್ಕವನ್ನು ಹೆಚ್ಚು ಕಡಿಮೆ ಸರಿಯಾಗಿ ಬಿಂಬಿಸಿದೆ ಎನ್ನಬಹುದು. ಉದಾಹರಣೆಗೆ 'ಸೋವಿಯೆಟ್ ರಷ್ಯಾ ಆಕ್ರಮಣಕ್ಕೆ ತುತ್ತಾದದ್ದನ್ನು ಕಾಂಗ್ರೆಸ್ ಸಹ ಅತ್ಯಂತ ಕಳವಳಕಾರಿ ಬೆಳವಣಿಗೆ' ಯೆಂದೂ ಮತ್ತು 'ರಷ್ಯದ ಸೋಲು ಆದರೆ ದೊಡ್ಡ ದುರಂತ' ಎಂದೂ ಪರಿಗಣಿಸಿತ್ತು ಎಂಬ ಪ್ರಮುಖ ಚಾರಿತ್ರಿಕ ಸತ್ಯವನ್ನು ಮುಂದಿಟ್ಟಿದ್ದಾರೆ. ಕಮ್ಯುನಿಸ್ಟರನ್ನು ಟೀಕಿಸುವ ಹಲವು ಬೂರ್ಜ್ವಾ ವಿಮರ್ಶಕರು ಈ ಸತ್ಯವನ್ನು ಮರೆಮಾಚುತ್ತಾರೆ. ಏಕೆಂದರೆ ಕಾಂಗ್ರೆಸ್ ಕಮ್ಯುನಿಸ್ಟ್ ನೀತಿಯನ್ನು ತತ್ವಶಃ ಒಪ್ಪಿಕೊಂಡಿದ್ದರೂ ಸಂದರ್ಭ ಸಾಧಕತೆಯಿಂದ ಕ್ವಿಟ್ ಇಂಡಿಯಾಕ್ಕೆ ಕರೆಕೊಟ್ಟರು ಎಂಬುದು ಈ ಸತ್ಯದಿಂದ ಹೊರಡುವ ತೀರ್ಮಾನ. ವಿಭಜನೆ ಬಗೆಗೂ ಕಮ್ಯುನಿಸ್ಟ್ ಪಕ್ಷ ಮಾಡಿಕೊಂಡ 'ಸ್ವಯಂ ವಿಮರ್ಶೆ'ಯ ಹಿನ್ನೆಲೆಯಲ್ಲಿ, ಕಮ್ಯುನಿಸ್ಟರ ಧೋರಣೆ ಬಗ್ಗೆ ದುರುದ್ದೇಶದ ಟೀಕೆ, ಅಪಪ್ರಚಾರ ಈ ಪುಸ್ತಕದಲ್ಲಿ ಕಂಡುಬಂದಿಲ್ಲ. ಆದರೆ 1942ರ ನಂತರ ಇತರ ಪಕ್ಷಗಳ ಕಾರ್ಮಿಕ ನಾಯಕರು ಸೆರೆಮನೆಗಳಲ್ಲಿದ್ದ ಕಾರಣ ಕಮ್ಯುನಿಸ್ಟ ಪಕ್ಷ ಕಾರ್ಮಿಕರ ಮಧ್ಯೆ ಬೆಳೆಯಿತು ಎಂಬುದು ಸರಿಯಾದ ಚರಿತ್ರೆಯಲ್ಲ ಎಂದು ಇಲ್ಲಿ ಹೇಳಬಹುದು.

ಕೊನೆಯದಾಗಿ 'ಬರಡು ಇತಿಹಾಸವೆನಿಸದೆ ಕಾದಂಬರಿ'ಯಂತೆ ಸುಲಭವಾಗಿ ಓದಿಸಿಕೊಳ್ಳಬಲ್ಲ ಭಾಷೆ, ಶೈಲಿ ಈ ಪುಸ್ತಕದ ಮಹತ್ವವನ್ನು ಹೆಚ್ಚಿಸಿದೆ. ಸಾಮಾನ್ಯ ಓದುಗರು ಅರ್ಥಮಾಡಿಕೊಳ್ಳುವಷ್ಟು ಸರಳ ಶೈಲಿಯಲ್ಲಿದ್ದರೂ ವಿಷಯದ ಸಮಗ್ರತೆ, ಪ್ರಬುದ್ಧತೆ ಸಂಕೀರ್ಣತೆಗೆ ಅಪಚಾರ ಮಾಡಿಲ್ಲ. ಚರಿತ್ರೆ ಹೇಳುವ ಧಾಟಿಯಲ್ಲಿ, ಆದರಿಂದ ದೂರ ನಿಂತು ಹೇಳುವ ತಟಸ್ಥತೆ ಇಲ್ಲ. ಆದರ ಭಾಗವಾದ ಲೇಖಕರ ಆತ್ಮೀಯತೆ, ತಲ್ಲೀನತೆಯಿಂದ ಬರವಣಿಗೆಗೆ ಕಳೆ ಬಂದಿದೆ. ಆದರೂ ವಸ್ತು ನಿಷ್ಠತೆಗೆ ಚ್ಯುತಿ ಬಂದಿಲ್ಲ.

## ಕೋಮುವಾದ ತಡೆಯಲ್ಲಿ ರಾಷ್ಟ್ರೀಯ ಚಳುವಳಿಯ ವೈಫಲ್ಯ

ಇದರರ್ಥ ಸ್ವಾತಂತ್ರ ಚಳುವಳಿ ಬಗ್ಗೆ ಇದು ಆದರ್ಶ ಪುಸ್ತಕವೆಂದಲ್ಲ. ಚರಿತ್ರೆ, ಮುಖ್ಯ ಘಟನೆಗಳು, ಆಯಾಮಗಳು, ಪ್ರಮುಖ ವ್ಯಕ್ತಿ ಚಳುವಳಿ ಪಾತ್ರ- ಇವುಗಳ ಬಗ್ಗೆ ಅತ್ಯಂತ ಹೆಚ್ಚು ವಸ್ತುನಿಷ್ಟತೆ ಕಂಡುಬಂದರೂ ಒಟ್ಟಾರೆ ದೃಷ್ಟಿಕೋಣ ಈ ವಸ್ತುನಿಷ್ಟತೆಯಿಂದ ಕೂಡಿದೆ ಎಂದು ಹೇಳಲಾಗುವುದಿಲ್ಲ. ಇಡೀ ಚರಿತ್ರೆಯನ್ನು ನೋಡುವ ದೃಷ್ಟಿಕೋಣದಲ್ಲಿ ಗಾಂಧಿವಾದ, ಕಾಂಗ್ರೆಸ್ ದೃಷ್ಟಿಕೋಣದ ದಟ್ಟವಾದ ಪ್ರಭಾವವಿದೆ ಎಂದು ಹೇಳದೆ ವಿಧಿಯಿಲ್ಲ. ಇದು ಮುಖ್ಯವಾಗಿ ಚರಿತ್ರೆಯ ವಿರೂಪಕ್ಕೆ ಕಾರಣವಾಗದಿದ್ದರೂ, ವಿಶ್ಲೇಷಣೆ ವಸ್ತುನಿಷ್ಟತೆಯಿಂದ ದೂರಹೋಗಿದೆ. ಇದು ಚರಿತ್ರೆಯನ್ನೇ ಗಾಂಧೀಕರಿಸುವ, ಕಾಂಗ್ರೆಸ್ಸೀಕರಿಸುವ- ಅಂದರೆ ಘಟನಾವಳಿ, ವ್ಯಕ್ತಿ ಚಳುವಳಿಗಳ ಪಾತ್ರವನ್ನು ನಿರ್ಲಕ್ಷಿಸುವ ವಿರೂಪಗೊಳಿಸುವ -ತಪ್ಪಿಗಿಂತ ಸ್ವಲ್ಪ ಭಿನ್ನವಾದ ನ್ಯೂನತೆ ಎಂದು ಗಮನಿಸಬೇಕು.ಆದರೆ ಅಷ್ಟೇ. ಗಂಭೀರವಾದ ನ್ಯೂನತೆ ಸಹ.

ತಿಲಕ್ ಮುಂತಾದವರ ನಾಯಕತ್ವದಲ್ಲಾಗಲಿ, ಆಮೇಲೆ ಗಾಂಧಿ ಯುಗದಲ್ಲಾಗಲಿ ರಾಷ್ಟ್ರೀಯ ಚಳುವಳಿ-ಗಣೇಶನ ಪೂಜೆ, ವೈಷ್ಣವ ಜನತೋ ತೆನೆ ಕಹಿಯೆ ಎಂಬ ಹಿಂದೂ ಭಜನೆ, ವರ್ಣವ್ಯವಸ್ಥೆ- ಮುಂತಾದ ಮತೀಯ ಲಾಂಛನಗಳನ್ನು ಉಪಯೋಗಿಸಿದ್ದು ಮುಸ್ಲಿಂ ಮತ್ತು ಇತರ ಅಲ್ಪಸಂಖ್ಯಾತರನ್ನು ಚಳುವಳಿಯ ಮುಖ್ಯವಾಹಿನಿಯಿದ ದೂರವಿಡಲು ಮುಖ್ಯ ಕಾರಣವಾಯಿತು ಎಂಬುದು ಈಗ ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತಿರುವ ಸಂಗತಿ- ಅದರ ಕಹಿ ಫಲವನ್ನು ಈಗಲೂ ನಾವು ಉಣ್ಣುತ್ತಿದ್ದೇವೆ. ಆದರೆ ಲೇಖಕರು ಅದನ್ನು ಬಿಟ್ಟರೆ 'ಹಿಂದೂ ಜನತೆ'ಯಲ್ಲಿ ಎಚ್ಚರ ಮೂಡಿಸಲು ಬೇರೆ ದಾರಿ ಇಲ್ಲ ಎಂಬ ತಪ್ಪು ತೀರ್ಮಾನಕ್ಕೆ ಬರುತ್ತಾರೆ. ಎಲ್ಲಾ ಕೋಮಿನ ಜನರಿಗೆ ಸಾಮಾನ್ಯವಾದ ಸಾಮಾಜಿಕ ಆರ್ಥಿಕ ಪ್ರಶ್ನೆಗಳನ್ನು ಎತ್ತಿ ಈ ಎಚ್ಚರ ಮೂಡಿಸುವುದು ಸಾಧ್ಯ ಅಗತ್ಯ ಎಂಬುದು ಸರಿಯಾದ ದಾರಿ. ಈ ಬಗ್ಗೆ ಸರಿಯಾದ ವಿಶ್ಲೇಷಣೆ ಇಲ್ಲದೆ ಇರುವುದು ಈ ಪುಸ್ತಕದ ಅತಿ ದೊಡ್ಡ ನ್ಯೂನ್ಯತೆ. ಅದೂ ಇಂದಿನ ಕೋಮು ವೈಷಮ್ಯದ ಸಂದರ್ಭದಲ್ಲಿ ಅತ್ಯಂತ ಮಹತ್ವದ ನ್ಯೂನತೆ.

ಗಾಂಧೀಜಿಯವರ ಸಫಲತೆಗೆ ಅವರನ್ನು 'ಅವತಾರ ಪುರುಷ' ಎಂದು ಜನ ಬಗೆದದ್ದು ಮುಖ್ಯ ಕಾರಣ ಎಂದು ಲೇಖಕರು ವಿಶ್ಲೇಷಿಸಿದ್ದೂ ಸಮಂಜಸವಲ್ಲ ಎಂದು ಬೇರೆ ಹೇಳಬೇಕಿಲ್ಲ. ಗಾಂಧೀಜಿಯವರ ರಾಜಕೀಯ ನಾಯಕತ್ವದ ಹಿರಿಮೆ, ಸಫಲತೆ ಇತ್ಯಾದಿಗಳ ಕಾರಣ ಹಾಗೆನೇ ಕೊನೆಯ ವರ್ಷಗಳಲ್ಲಿ ಅವರ ವಿಫಲತೆ ಬಗ್ಗೆ ಸರಿಯಾಗಿ ವಿಶ್ಲೇಷಿಸುವ ಇ.ಎಂ.ಎಸ್ ನಂಬೂದಿರಿಪಾಡ್ ತಮ್ಮ "ಮಹಾತ್ಮ ಮತ್ತು ಅವರ ವಾದ"ದಲ್ಲಿ ಇದಕ್ಕೆ ಸಮಂಜಸ ಉತ್ತರ ನೀಡಿದ್ದಾರೆ.

ಇದರ ಬಗ್ಗೆ ವಿವರವಾದ ವಿಮರ್ಶೆ ಅಗತ್ಯವಾದರೂ, ಈ ಪುಸ್ತಕ ವಿಮರ್ಶೆ ಇದಕ್ಕೆ ಸರಿಯಾದ ಸ್ಥಳವಲ್ಲ.

## ಗಾಂಧಿವಾದಿ ಅಹಿಂಸೆಯ 'ರಾಜಕೀಯ'

ಅಹಿಂಸೆ, ಸಶಸ್ತ್ರ ಹೋರಾಟಗಳ ಬಗ್ಗೆ ಲೇಖಕರು ಈ ಪುಸ್ತಕದುದ್ದಕ್ಕೂ ದೃಷ್ಟಿಕೋಣವನ್ನು ಬಿಂಬಿಸಿರುವ ರೀತಿ ಸಹ ಈ ಪುಸ್ತಕದ ವಿಶ್ಲೇಷಣೆಯ ಮಹತ್ವವನ್ನು ದುರ್ಬಲಗೊಳಿಸಿದೆ ಎನ್ನಬಹುದು. ಪ್ರಥಮ ಭಾರತೀಯ ಸಂಗ್ರಾಮದ ವಿಫಲತೆಗೆ ಕಾರಣವನ್ನು ಸಾಮಾಜಿಕ-ಆರ್ಥಿಕ-ವರ್ಗದ ಆಧಾರದ ಮೇಲೆ ವಸ್ತುನಿಷ್ಟವಾಗಿ ಹುಡುಕಬಹುದು. ಅದರ ಗೋಜಿಗೆ ಹೋಗದೆ ವಿಫಲತೆಯ ಕಾರಣ ಭಾರತದಲ್ಲಿ ಸಶಸ್ತ್ರ ಹೋರಾಟದ ಅಸಮಂಜಸತೆ ಎಂಬ ವಿಚಿತ್ರ ತೀರ್ಮಾನಕ್ಕೆ ತಲುಪುತ್ತಾರೆ. ಅದೇ ರೀತಿ ಅಹಿಂಸೆ ಭಾರತದ ವಿಶಿಷ್ಟ ಪರಿಸ್ಥಿತಿಯಿಂದಾಗಿ ಎದ್ದು ಬಂದ ಪ್ರಮುಖ ನೀತಿ, ಅದು ಗಾಂಧಿವಾದ ಕಾಂಗ್ರೆಸ್‌ನ ಮೇಲೆ ಹೇರಿಸಿದ ನೀತಿ ಅಲ್ಲ ಎಂದು ಅವರು ವಾದಿಸುತ್ತಾರೆ. ಗಾಂಧೀವಾದಿ ಅಹಿಂಸೆ ಮತ್ತು ಕಾಂಗ್ರೆಸ್‌ನ ಪ್ರಮುಖ ಬೆಂಬಲಿಗ ಬೂರ್ಜ್ವಾವರ್ಗದ ಹಿತಾಸಕ್ತಿ ಇವೆರಡರ ಉದ್ದೇಶವೂ ಏಕೀಭವಿಸಿದ್ದನ್ನು ಇಲ್ಲಿ ಮರೆಯಲಾಗುವುದಿಲ್ಲ. ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ದೇಶದ ದೊಡ್ಡ ಜನವಿಭಾಗಗಳನ್ನು (ರೈತ, ಕಾರ್ಮಿಕರನ್ನು ಮುಖ್ಯವಾಗಿ) ಸಮರಶೀಲವಾಗಿ ಅಣಿನೆರೆಸುವ ಅವಶ್ಯಕತೆ, ಆದರೆ ಅದೇ ಸಮಯದಲ್ಲಿ ಈ ಜನವಿಭಾಗಗಳು ಸ್ವತಂತ್ರ ರಾಜಕೀಯ ಶಕ್ತಿಯಾಗಿ ಬೆಳೆಯದೆ ಬೂರ್ಜ್ವಾ ನಾಯಕತ್ವದ ನಿಯಂತ್ರಣದಲ್ಲಿ ಇರಬೇಕಾದ ಅಗತ್ಯಕ್ಕೆ ಸಾಮಾನ್ಯ ಪರಿಹಾರ ಗಾಂಧಿವಾದಿ ಅಹಿಂಸೆ ಎಂದು ಇ.ಎಂ.ಎಸ್. ಮೇಲೆ ಹೇಳಿದ ಮತ್ತು ಅವರು ಬರೆದಿರುವ ಸ್ವಾತಂತ್ರ ಚಳುವಳಿಯ ಚರಿತ್ರೆಯಲ್ಲಿ ಸೋದಾಹರಣವಾಗಿ ವಿಶ್ಲೇಷಿಸಿದ್ದಾರೆ. ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಜನತಾ ಚಳುವಳಿಯ ರಕ್ಷಣೆಗೆ ಅಗತ್ಯವಾದಾಗ ಕ್ರಾಂತಿಕಾರಿ ಹಿಂಸೆಯ ಬಳಕೆ ಬಗ್ಗೆ ಲೇಖಕರ ಅನುಕಂಪ ಮತ್ತು ಗಾಂಧಿವಾದಿ ಅಹಿಂಸೆ ಬಗ್ಗೆ ಭಾವನಾತ್ಮಕ ಮಟ್ಟದಲ್ಲಿ ಒಪ್ಪಿಗೆ ಪರಸ್ಪರ ವಿರೋಧಾಭಾಸದ್ದು ಎಂದು ಹೇಳದೆ ವಿಧಿಯಿಲ್ಲ.

ಬ್ರಿಟಿಷ್- ಪೂರ್ವ ಭಾರತ ಆರ್ಥಿಕವಾಗಿ ಬಲಿಷ್ಟವಾಗಿ ಇತ್ತು. ಇದರ ಮುಖ್ಯ ಕಾರಣವಾಗಿ ಸ್ವಯಂ ಪೂರ್ಣ ಹಳ್ಳಿಗಳ ವ್ಯವಸ್ಥೆ ಇತ್ತು. ಬ್ರಿಟಿಷರು ಇದನ್ನು ಹಾಳುಗೆಡವಿ ವೈಯುಕ್ತಿಕ ಆಸ್ತಿಯ ಪದ್ಧತಿ ತಂದರು. ಭಾರತದ ಆರ್ಥಿಕ ಸಮೃದ್ಧಿ ಕೊನೆಗೊಂಡು ದರಿದ್ರ ದೇಶವಾಯಿತು. ಎನ್ನುವ ವಿಶ್ಲೇಷಣೆ ಸಹ ಚರಿತ್ರೆಯ ವಾಸ್ತವದ ಮುಂದೆ ನಿಲ್ಲಲಾರವು. ಸ್ವಯಂ ಪೂರ್ಣ ಹಳ್ಳಿಗಳು ಭಾರತದ ಆರ್ಥಿಕ ಬಲ ಎನ್ನುವುದನ್ನು ಒಪ್ಪುವುದು ಕಷ್ಟ. ಭಾರತದ ಸಂಪತ್ತು, ವ್ಯಾಪಾರ-ವಾಣಿಜ್ಯ ಯುರೋಪಿನಲ್ಲಿ ಆದಂತೆ ವೈಜ್ಞಾನಿಕ ತಾಂತ್ರಿಕ ಬೆಳವಣಿಗೆ ಎಡೆಕೊಟ್ಟು ಅವು ಉತ್ಪಾದನಾ ತಂತ್ರಗಳಲ್ಲಿ ಕ್ರಾಂತಿ ತರುವ ಮಟ್ಟಕ್ಕೆ ಹೋಗದಿರಲು 'ತೃಪ್ತವಾದ' 'ಸ್ವಯಂ ಪೂರ್ಣ ಹಳ್ಳಿಗಳ ವ್ಯವಸ್ಥೆಯೇ ಕಾರಣ ಎಂದರೆ ತಪ್ಪಾಗಲಾರದು. ಉತ್ಪಾದನಾ ವಿಧಾನಗಳಲ್ಲಿ ಕ್ರಾಂತಿಗೆ ತೊಡಕಾಗಿದ್ದ ಉತ್ಪಾದನಾ ಸಂಬಂಧಗಳಿದ್ದ ವ್ಯವಸ್ಥೆ ಅದು. ಅದೇ ರೀತಿ ಬ್ರಿಟಿಷ್- ಪೂರ್ವದಲ್ಲಿ ಪಾಳೆಯಗಾರಿ ಪದ್ಧತಿ ಇರಲಿಲ್ಲ. ಭೂಮಿಯ ಖಾಸಗಿ ಒಡೆತನ ಇರಲಿಲ್ಲ ಎನ್ನುವುದೂ ತಪ್ಪು. ಈಗ ಗೊತ್ತಿರುವಂತೆ ಜಮೀನುದಾರಿಯನ್ನು ಬ್ರಿಟಿಷರು ಜಾರಿಗೆ ತಂದಿದ್ದು ನಿಜವಾದರೂ, ಉತ್ಪಾದನಾ ವಿಧಾನಗಳ ಭಾರಿ ಬೆಳವಣಿಗೆಗೆ ತೊಡಕಾದ ಭೂಸಂಬಂಧಗಳು ನಮ್ಮ ದೇಶದಲ್ಲಿದ್ದವು ಎಂಬುದೂ ಅಷ್ಟೇ ನಿಜ.

## ಗಾಂಧಿ ಕಾಂಗ್ರೆಸ್‌ನ ಗುರಿ-ದಾರಿಗಳ ಬಗ್ಗೆ ಅಸಮರ್ಪಕ ವಿಶ್ಲೇಷಣೆ

ಸ್ವಾತಂತ್ರ ಚಳುವಳಿಯ ಚರಿತ್ರೆಯನ್ನು ವಸ್ತುನಿಷ್ಠವಾಗಿ ನೋಡುವವರಿಗೆ, 1920 ರ ದಶಕದ ಅಸಹಕಾರ, ಸತ್ಯಾಗ್ರಹ 1931ರ ದಶಕದ ಉಪ್ಪಿನ ಸತ್ಯಾಗ್ರಹ, 1940ರ ದಶಕದ ಕ್ವಿಟ್ ಇಂಡಿಯಾ ಚಳುವಳಿಗಳು ಜನಮಾನಸ ತಟ್ಟಿ ತೀವ್ರವಾಗಿ ಹಬ್ಬಿದಾಗ ಗಾಂಧೀಜಿ ಈ ಚಳುವಳಿಗಳನ್ನು ಮೊದಲ ನೋಟಕ್ಕೆ ಕ್ಷುಲ್ಲಕವೆನ್ನುವ ಕಾರಣಗಳಿಗೆ ಹಿಂತೆಗೆದುಕೊಂಡದ್ದರ ಕಾರಣವನ್ನು ವಿಶ್ಲೇಷಣೆ ಮಾಡುವುದು ಮುಖ್ಯವಾಗುತ್ತದೆ. ಇಲ್ಲದಿದ್ದರೆ ಹಿಂದೆ ಕಾಂಗ್ರೆಸ್‌ನ ರಾಷ್ಟ್ರೀಯ ಚಳುವಳಿಯ ಮುಖ್ಯವಾಹಿನಿಯ ನಾಯಕತ್ವ ಉಳಿಸಿಕೊಳ್ಳುವ, ಬೂರ್ಜ್ವಾ ವರ್ಗದ ಹಿತಾಸಕ್ತಿಯ ವಿರುದ್ಧ ಹೋಗದಂತೆ ನೋಡಿಕೊಳ್ಳುವ ಸಮಾನ ಉದ್ದೇಶವಿತ್ತು ಎಂಬುದನ್ನು ಸ್ಪಷ್ಟವಾಗಿ ಕಾಣಬಹುದು. ಆದರೆ ಲೇಖಕರು ಈ ಎಲ್ಲಾ ಸಂದರ್ಭಗಳಲ್ಲಿ ಗಾಂಧೀಜಿ ಅವನ್ನು ಹಿಂತೆಗೆದುಕೊಂಡದ್ದನ್ನು ಚಳುವಳಿ-ಸಂಧಾನಗಳ ದ್ವಂದ್ವ ನೀತಿಯ ಹೆಸರಲ್ಲಿ ಸಮರ್ಥಿಸಿಕೊಳ್ಳುತ್ತಾರೆ. ಈ ನೀತಿಯ ಹಿಂದಿನ ದ್ವಂದ್ವ ಬೂರ್ಜ್ವಾ ವರ್ಗಕ್ಕೆ ಅನುಕೂಲವಾದದ್ದು, ಸಾಮಾನ್ಯ ಜನತೆಯ ಹಿತಾಸಕ್ತಿಗೆ ಅನುಗುಣವಾದದ್ದಲ್ಲ.

ಗಾಂಧಿ ಮತ್ತು ಕಾಂಗ್ರೆಸ್‌ನ್ನು (ಇದನ್ನು ಲೇಖಕರು ರಾಷ್ಟ್ರೀಯ ಚಳುವಳಿಯ ಗುರಿದಾರಿ ಎನ್ನುತ್ತಾರೆ) ಗುರಿದಾರಿಗಳ ಬಗ್ಗೆ ಮೀಸಲಾಗಿಟ್ಟಿರುವ ಅಧ್ಯಾಯದಲ್ಲಿ ವಸ್ತುನಿಷ್ಟ ಚಾರಿತ್ರಿಕ ವಿಶ್ಲೇಷಣೆಗೆ ಸಮಂಜಸವಾಗದ ಇನ್ನೂ ಹಲವು ಅಂಶಗಳಿವೆ. ಭಾರತ-ಪಾಕಿಸ್ತಾನ ವಿಭಜನೆ ಆದ್ದರಿಂದ ಹೆಚ್ಚು ಸಮಗ್ರ ಐಕ್ಯತೆಯಿರುವ ಎರಡು ದೇಶಗಳು ಹುಟ್ಟಿದ್ದು, ಆಮೇಲಿನ ವಿದ್ಯಮಾನಗಳನ್ನು ನೋಡಿದರೆ ಸರಿನೋ ಎನ್ನುವುದಾಗಿ ಲೇಖಕರು ಹೇಳಿದ್ದಾರೆ. ಭಾರತ-ಪಾಕಿಸ್ತಾನ ವಿಭಜನೆ ಸಾಮ್ರಾಜ್ಯಶಾಹಿ ಪಿತೂರಿ. ಸಾಮ್ರಾಜ್ಯಶಾಹಿಗೆ ಸೆಡ್ಡು ಹೊಡೆದು ನಿಲ್ಲಬಲ್ಲ ಅವಿಭಜಿತ ಭಾರತ ಹೊರಹೊಮ್ಮುವುದು ತಡೆದದ್ದು ಮಾತ್ರವಲ್ಲ, ಇವೆರಡೂ ದೇಶಗಳೂ ಸತತವಾಗಿ ಕಾದಾಡುತ್ತಾ ಸಾಮ್ರಾಜ್ಯಶಾಹಿ ತನ್ನ ಬೇಳೆ ಬೇಯಿಸಿಕೊಳ್ಳುವ ವಾತಾವರಣ ನಿರ್ಮಿತವಾಗಿದೆ. ಈ ಎರಡೂ ದೇಶಗಳು ಬೇರೆ ಬೇರೆಯಾಗಿಯೂ, ಒಂದಾಗಿಯೂ ಸಾಮ್ರಾಜ್ಯಶಾಹಿಯನ್ನು ಎದುರಿಸದಿರುವುದು, ಜನಸಾಮಾನ್ಯರ ಹಿತಾಸಕ್ತಿಗೆ ಮಾರಕವಾದುದು ಎಂದು ಬೇರೆ ಹೇಳಬೇಕಾಗಿಲ್ಲ.

ಒಟ್ಟಾರೆಯಾಗಿ ಹೇಳುವುದಾದರೆ 'ಸ್ವಾತಂತ್ರ ಗಂಗೆಯ ಸಾವಿರ ತೊರೆಗಳು' ಓದಲೇ ಬೇಕಾದ ಪುಸ್ತಕ - ಗಾಂಧೀಕರಣ ಕಾಂಗ್ರೆಸ್ಸೀಕರಣಕ್ಕೆ ತುತ್ತಾಗದೆ ಸ್ವಾತಂತ್ರ ಚಳುವಳಿಯ ಸಮಗ್ರ ಪರಿಚಯ ಕೊಡುತ್ತದೆ. ಆದರೂ ಗಾಂಧೀವಾದಿ, ಕಾಂಗ್ರೆಸ್ (ಅಂದರೆ ಇಂದಿನ ಆಳುವ ಬೂರ್ಜ್ವಾ - ಭೂಮಾಲಕ ವರ್ಗಗಳ) ದೃಷ್ಟಿಕೋಣದಿಂದ ಮುಕ್ತವಾಗಿ ಭಾರತದ ದುಡಿಯುವ ಜನತೆಯ ದೃಷ್ಟಿಕೋಣದಿಂದ ಈ ಚರಿತ್ರೆಯ ವಿಶ್ಲೇಷಣೆ ಮಾಡುವುದರಲ್ಲಿ ವಿಫಲವಾಗಿದೆ ಎನ್ನಬಹುದು.

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪರವಾಗಿ ಮುದ್ರಕ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ: 12, 18ನೇ ಅಡ್ಡರಸ್ತೆ, ಶಾಸ್ತ್ರಿ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ.: 236462 ಸಂಪಾದಕರು : ಪಿ.ರಾಮಚಂದ್ರರಾವ್.